# ಕೇರಳ ಪಾಠಾವಳಿ


# KERALA READER

## ಕನ್ನಡ - ಮೂಲಪಠ್ಯ

## KANNADA - BT

VII

TB/VII/2016/400(BT)(K)



ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಭಾರತದ ಸಂವಿಧಾನ

## ಭಾಗ IV ಕ

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

TB/VII/2016/400 (BT) AK

# ಕೇರಳ ಪಾಠಾವಳಿ
# KERALA READER

## ಕನ್ನಡ - ಮೂಲಪತ್ಯ
## KANNADA - BT

ತರಗತಿ

VII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2016

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala

Website : www.scertkerala.gov.in
e-mail : scertkerala@asianetindia.com
Phone : 0471 - 2341883, Fax : 0471 - 2341869
First Edition : 2014, Reprint : 2016
Typesetting : SCERT
Lay out : SCERT
Cover design : SCERT
Printed at : KBPS, Kakkanad, Kochi
© Department of Education, Government of Kerala

ಒಲವಿನ ಮುದ್ದಿನ ಮಕ್ಕಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ, ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಕೊಡಲಾಗಿದೆ. ನಿಮ್ಮ ಆಶಯಗಳನ್ನೂ, ಭಾವನೆಗಳನ್ನೂ, ಅನುಭವಗಳನ್ನೂ ಹಂಚಿಕೊಳ್ಳಲೂ ಪ್ರಕಟಿಸಲೂ ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ ಎಂದು ಹಾರೈಸುತ್ತಾ

ಪ್ರೀತಿಪೂರ್ವಕ ಹಾರ್ದಿಕೆಗಳೊಂದಿಗೆ,

ಡಾ. ಪಿ.ಎ. ಫಾತಿಮ
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

# TEXTBOOK DEVELOPMENT COMMITTEE

## KERALA READER - VII
## KANNADA - BT

### Participants

Narasimha K., HM, GLPS Pathur.
Radhakrishna, Trainer, BRC Kasaragod.
Rajarama K., Asst. Teacher, AUPS Yethadka.
Shashikala K., HSA, GHSS Paivalike nagar.
Subramanya Bhat K., PD Teacher, GSBS Soorambail.
Stany Lobo, Asst. Teacher, HFASBS Kumbla.
Udayakumar M., PD Teacher, GHSS Adoor.

### Experts

Dr. Rathnakara Mallamoole, Govt. College, Kasaragod.
Shreedhara, Asst. Professor, Govt. College, Kasaragod.
Dr. Srikrishna Bhat P., Professor (Rtd), Govt. College, Kasaragod.

### External Experts

Dr. Radhakrishna N., Asst. Professor, Govt. College, Kasaragod.
Shivashankar, Asst. Professor, Govt. College, Manjeshwar.

### Artists

Bala Madhurakanana, Madhurakanana, Bela.
Jyothychandran, GVHSS Karadka.
Tagore, Alappuzha

### Academic Co-ordinator

Dr. C. Bhamini, Research Officer, SCERT, Thiruvananthapuram.

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ 695012

# ಅನುಕ್ರಮಣಿಕೆ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1. | ಹೃದಯ ವೈಶಾಲ್ಯ | 7 |
| 2. | ಆರೋಗ್ಯವೇ ಭಾಗ್ಯ | 17 |
| 3. | ಅರಿತು ಬಾಳಿದರೆ ಸ್ವರ್ಗ | 35 |

# ಭಾರತದ ಸಂವಿಧಾನ

## ಭಾಗ 4(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ. –**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# 1. ಹೃದಯ ವೈಶಾಲ್ಯ

ಮಾನವರು ತಮ್ಮ ನಂಬಿಕೆ, ಸಂಪ್ರದಾಯ, ಭಾಷೆ, ವೇಷಭೂಷಣಗಳು ವಿಭಿನ್ನವಾದರೂ ಪರಸ್ಪರ ಹೊಂದಿಕೊಂಡು ಒಗ್ಗಟ್ಟಿನಿಂದ ಬಾಳಬೇಕಾದುದು ಅನಿವಾರ್ಯವೆಂಬುದನ್ನು ಇಂದು ಜಗತ್ತೇ ಒಪ್ಪಿಕೊಂಡಿದೆ. ತಮ್ಮ ತನವನ್ನು ಬಿಟ್ಟುಕೊಡಲೊಪ್ಪದ ಅಭಿಮಾನ, ಸ್ನೇಹ ಪ್ರತಿಯೊಬ್ಬನಲ್ಲಿಯೂ ಇರಬೇಕಾದ ಗುಣಗಳು. ಆದರೂ ಇತರರ ನಂಬಿಕೆ, ತತ್ವಗಳನ್ನು ಗೌರವಿಸುವುದು ಅಷ್ಟೇ ಪ್ರಮುಖವಾದ ವಿಷಯವಾಗಿದೆ. ತಾನು ಸ್ವಾತಂತ್ರ್ಯವನ್ನು ಬಯಸುವಂತೆ ಇತರರ ಸ್ವಾತಂತ್ರ್ಯವನ್ನು ಗೌರವಿಸುವುದು ಪ್ರತಿಯೊಬ್ಬನ ಕರ್ತವ್ಯ. ಪ್ರತಿಯೊಬ್ಬ ವ್ಯಕ್ತಿಯೂ ವಿಶಾಲ ಹೃದಯಿಯೂ ಸದ್ಗುಣ ಸಂಪನ್ನನೂ ಆದರೆ ಸುಸಂಸ್ಕೃತ ಸಮಾಜ ನಿರ್ಮಾಣವಾಗುವುದು. ನಾವೆಲ್ಲರೂ ಸದ್ಗುಣಗಳ ಗಣಿಗಳಾಗೋಣ.ಹೃದಯ ವೈಶಾಲ್ಯದಿಂದ ಮರೆಯೋಣ.



# ಈ ಮಣ್ಣು ನಮ್ಮದು

ನಾವೆಲ್ಲಾ ಭಾರತೀಯರು. ಇಲ್ಲಿರುವ ಎಲ್ಲ ಪ್ರಕೃತಿದತ್ತವಾದ ಕೊಡುಗೆಗಳೂ ನಮಗೆಲ್ಲರಿಗೂ ಸೇರಿದುವು. ನಮ್ಮಲ್ಲಿ ಯಾವುದೇ ಭೇದ ಭಾವವಿಲ್ಲ. ನಾವೆಲ್ಲರೂ ಏಕತೆಯಿಂದ ಬದುಕಿ ನಮ್ಮ ದೇಶದ ಪ್ರಗತಿಗೆ ಕಾರಣರಾಗೋಣ.





ಈ ಮಣ್ಣು ನಮ್ಮದು, ಈ ಗಾಳಿ ನಮ್ಮದು
ಕಲಕಲನೆ ಹರಿಯುತಿಹ ನೀರು ನಮ್ಮದು
ಕಣ ಕಣದಲಿ ಭಾರತೀಯ ರಕ್ತ ನಮ್ಮದು



ನಮ್ಮ ಕಾಯ್ವ ಹಿಮಾಲಯವೆ ತಂದೆ ಸಮಾನ
ಗಂಗೆ, ತುಂಗೆ, ಕಾವೇರಿಯು ತಾಯಿ ಸಮಾನ
ಈ ದೇಶದ ಜನರೆಲ್ಲರು ಸೋದರ ಸಮಾನ
ಈ ನಾಡಿನ ಹೃದಯವದು ದೈವ ಸನ್ನಿಧಾನ





ಅಜಂತ, ಎಲ್ಲೋರ, ಹಳೆ ಬೀಡು ಬೇಲೂರ
ಶಿಲೆಗಳಿವು ಕಲೆಯ ಆಗರ
ಹಿಂದು– ಬುದ್ಧ– ಜೈನ– ಕ್ರೈಸ್ತ– ಮುಸಲ್ಮಾನ
ಧರ್ಮಗಳ ಮಹಾನ್ ಸಾಗರ



ನಡೆದು ಹೋದ ಚರಿತೆಯೋ
ನಾಳೆ ಎನುವ ಕವಿತೆಯೋ
ಈ ನಾಡ ಮಣ್ಣಲ್ಲಿದೆ ಜೀವನಸಾರ



ತಂಗಾಳಿಗೆ ತಲೆಯ ತೂಗೊ ಪೈರಿನ ಹಾಡು
ಆ ಹಾಡಿಗೆ ತಾಳ ಕೊಡುವ ಯಂತ್ರದ ಜಾಡು
ವಿಜ್ಞಾನವು ಅಜ್ಞಾನವ ಗೆಲ್ಲುವ ಪಾಡು
ಹೊಸ ಭಾರತ ನಿರ್ಮಾಣವು ಸಾಗಿದೆ ನೋಡು.





ಆರ್. ಎನ್. ಜಯಗೋಪಾಲ್

## ಶ್ರೀ ಆರ್. ಎನ್. ಜಯಗೋಪಾಲ್



ಕನ್ನಡ ಚಲನಚಿತ್ರರಂಗದ ಪ್ರಮುಖ ಸಾಹಿತಿ ಶ್ರೀ ಆರ್. ಎನ್. ಜಯಗೋಪಾಲರು 1935 ಆಗಸ್ಟ್ 17 ರಂದು ಕಲಾವಿದರ ಮನೆತನದಲ್ಲಿ ಜನಿಸಿದರು. ಇವರ ತಂದೆ ಹೆಸರಾಂತ ಚಲನ ಚಿತ್ರ ನಿರ್ದೇಶಕರಾಗಿದ್ದ ಆರ್. ನಾಗೇಂದ್ರರಾಯರು. ತಾಯಿ ರತ್ನಮ್ಮ. ಇವರು ಸುಮಾರು 40 ವರ್ಷಗಳಷ್ಟು ಕಾಲ ಸಿನಿಮಾರಂಗದಲ್ಲಿ ದುಡಿದಿದ್ದಾರೆ. ಸುಮಾರು 1600 ರಷ್ಟು ಚಿತ್ರಗೀತೆಗಳನ್ನು ರಚಿಸಿದ್ದಾರೆ . ಕನ್ನಡ ಭಾಷೆಯ ಮೇಲೆ ಅಪಾರ ಪ್ರೀತಿಯನ್ನಿಟ್ಟಿಕೊಂಡಿದ್ದ ಇವರು 1976ರಲ್ಲಿ ವಿದ್ಯಾವಿನಯ ವಿನೋದ ಎಂಬ ಕನ್ನಡ ಶಾಲೆಯನ್ನು ತಮಿಳ್ನಾಡಿನ ಚೆನ್ನೈಯಲ್ಲಿ ಆರಂಭಿಸಿದರು. ಕನ್ನಡ ಚಲನ ಚಿತ್ರಗಳಿಗೆ ಮರೆಯಲಾಗದ ಹಾಡುಗಳನ್ನಿತ್ತ ಈ ಶ್ರೇಷ್ಠ ಕವಿ 2008 ಮೇ 19 ರಂದು ಚೆನ್ನೈಯಲ್ಲಿ ನಿಧನ ಹೊಂದಿದರು.

### ಚಟುವಟಿಕೆಗಳು

❑ **ಹಾಡಿರಿ**

- ಪದ್ಯವನ್ನು ರಾಗವಾಗಿ ಹಾಡಿರಿ.

❑ **ಉತ್ತರಿಸಿರಿ**

- ಭಾರತದ ಪ್ರಕೃತಿ ಹಾಗೂ ಜನರನ್ನು ನಮ್ಮ ಬದುಕಿನ ಆತ್ಮೀಯ ಸಂಬಂಧಗಳೊಂದಿಗೆ ಹೇಗೆ ಹೋಲಿಸಿ ಹೇಳಲಾಗಿದೆ?
- ನಮ್ಮ ದೇಶದ ಕಲೆ, ಧರ್ಮಗಳ ಕುರಿತು ಕವಿಯ ಅಭಿಪ್ರಾಯವೇನು?
- ಹೊಸ ಭಾರತ ನಿರ್ಮಾಣವು ಹೇಗೆ ಸಾಗಿದೆಯೆಂದು ಕವಿ ಹೇಳುತ್ತಾರೆ?

❑ **ಭಾಷಣ ತಯಾರಿಸಿರಿ**

ಕವನದ ಆಶಯ ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಸ್ವಾತಂತ್ರ್ಯದಿನದ ಸಮಾರಂಭದಲ್ಲಿ ಪ್ರಸ್ತುತ ಪಡಿಸುವುದಕ್ಕಾಗಿ 'ಭಾರತಾಂಬೆಯ ಹಿರಿಮೆ' ಎಂಬ ವಿಷಯದ ಕುರಿತು ಲಿಖಿತ ಭಾಷಣವನ್ನು ತಯಾರಿಸಿರಿ.

❑ **ಪ್ರಾಸ ಪದ ಬರೆಯಿರಿ**

- ಈ ಪದ್ಯಭಾಗದಲ್ಲಿ ಬಂದಿರುವ ಅಂತ್ಯಪ್ರಾಸ ಪದವನ್ನು ಗುರುತಿಸಿ ಬರೆಯಿರಿ.

❑ **ಘೋಷಣ ವಾಕ್ಯ ಬರೆಯಿರಿ**

'ನಾವು ಬಾಳ್ವ ನಮ್ಮ ನೆಲವು ಆದುವೆ ನಮಗೆ ಶ್ರೇಷ್ಠವು' ಇದು ತಾಯ್ನಾಡಿನ ಹಿರಿಮೆಯನ್ನು ಸಾರುವ ಒಂದು ಘೋಷಣ ವಾಕ್ಯವಾಗಿದೆ. ಇದೇ ರೀತಿ ತಾಯ್ನಾಡಿನ ಹಿರಿಮೆಯನ್ನು ಸಾರುವ ಘೋಷಣ ವಾಕ್ಯಗಳನ್ನು ರಚಿಸಿ ತರಗತಿಯಲ್ಲಿ ಮಂಡಿಸಿರಿ.

❑ **ಸ್ವಾರಸ್ಯ ಬರೆಯಿರಿ**

ಈ ಕವಿತೆಯಲ್ಲಿ ನಿಮಗಿಷ್ಟವಾದ ಸಾಲುಗಳು ಯಾವುದು? ಆದರ ಸ್ವಾರಸ್ಯವನ್ನು ಬರೆಯಿರಿ.

❑ **ಸಂಚಿಕೆ ತಯಾರಿಸಿರಿ**

- ವಿವಿಧ ಕವಿಗಳು ರಚಿಸಿರುವ ದೇಶಭಕ್ತಿಗೀತೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ದೇಶಭಕ್ತಿಗೀತೆಗಳ ಸಂಚಿಕೆಯೊಂದನ್ನು ತಯಾರಿಸಿರಿ.

# ವಿಶಾಲಹೃದಯಿ ಕಪಿ

ಎಲ್ಲರ ಅಭಿಪ್ರಾಯಗಳನ್ನೂ ಮನ್ನಿಸಿ ಸರಿಯಾದ ತೀರ್ಮಾನಕ್ಕೆ ಬರುವವನೇ ನಿಜವಾದ ನಾಯಕ. ನಾಯಕನಲ್ಲಿ ಎಲ್ಲರೂ ಒಪ್ಪುವಂತಹ ನಡೆನುಡಿ, ಸಾಮರ್ಥ್ಯಗಳು ಇರಬೇಕಾಗುತ್ತವೆ. ಆತ ತನ್ನನ್ನು ನಂಬಿದವರ ಉಳಿವಿಗಾಗಿ

ಎಂತಹ ತ್ಯಾಗಕ್ಕೂ ಸಿದ್ಧನಾಗಿರಬೇಕು. ಇಂತಹ ನಾಯಕರು ದೇಶದ ಕೀರ್ತಿಯನ್ನು ಎತ್ತಿ ಹಿಡಿಯಬಲ್ಲರು.

ಒಂದಾನೊಂದು ಕಾಲದಲ್ಲಿ ಹಿಮಾಲಯದ ಉನ್ನತ ಪ್ರದೇಶದಲ್ಲಿ ಒಂದು ಭಾರಿ ದೊಡ್ಡ ಕಪಿ ಅರಸು ತನ್ನ ಎಂಬತ್ತು ಸಾವಿರ ವಾನರ ಪ್ರಜೆಗಳೊಡನೆ ನೆಲಸಿತ್ತು. ಅವೆಲ್ಲವೂ ಗಂಗಾ ನದೀ ತಡಿಯ ಅರಣ್ಯವೊಂದರಲ್ಲಿ ವಾಸವಾಗಿದ್ದುವು. ನದಿಯ ಶುಚಿಯಾದ ನೀರು ಬಂಡೆಗಳ ಎಡೆಗಳಿಂದ ಉಕ್ಕುವ ಒಂದು ಸ್ಥಳದಲ್ಲಿ ಒಂದು ಉನ್ನತ ವೃಕ್ಷವಿತ್ತು. ಬೇಸಗೆಯಲ್ಲಿ ಈ ಮರದ ತುಂಬ ಹೊಂಬಣ್ಣದ ದೊಡ್ಡ ಹಣ್ಣುಗಳಾಗುತ್ತಿದ್ದುವು.

ಆ ಹಣ್ಣುಗಳು ಮಾಗಿದೊಡನೆಯೇ ಈ ಕಪಿಗಳ ತಂಡ ಅವನ್ನು ತಿಂದು ಮುಗಿಸಿಬಿಡುತ್ತಿದ್ದುವು. ಈ ಕಪಿಗಳ ದೊರೆ ಬಲು ಜಾಣ. ಅದು ತನ್ನವರಿಗೆ ಹೀಗೆ ಹೇಳಿತ್ತು. "ಒಂದು ಹಣ್ಣು ಸಹ ನದಿಗೆ ಬೀಳದಂತೆ ನೋಡಿಕೊಳ್ಳಿ. ಹಾಗೆಲ್ಲಾದರೂ ಬಿದ್ದುದಾದರೆ, ಅದು ನದಿಯಲ್ಲಿ ತೇಲಿ ಹೋಗಿ ದೂರದ ಕಣಿವೆಯಲ್ಲಿ ವಾಸಿಸುವ ನಗರದ ಜನಗಳ ಕೈಗೆ ಸಿಕ್ಕೀತು. ಅವರು ಇಂತಹ ರುಚಿಯಾದ ಹಣ್ಣನ್ನು ತಿಂದರಾದರೆ ಅದಾವ ಮರದ್ದು ಎಂದು ಯೋಚಿಸಿ ಇಲ್ಲಿಯ ತನಕವೂ ಹುಡುಕಿ ಬಂದಾರು. ಹಾಗೆ ಬಂದು ನಮ್ಮೀ ಶಾಂತ ರಾಜ್ಯವನ್ನು ಹೊಕ್ಕುಬಿಟ್ಟಾರು."

ಈ ಮರದ ಒಂದು ಟೊಂಗೆ ಮಾತ್ರ ನೀರಿಗೆ ಬಾಗಿ ತಾಗಿತ್ತು. ಅದರಲ್ಲಿದ್ದೊಂದು ಹಣ್ಣು ಯಾರಿಗೂ ಕಾಣಿಸುತ್ತಿರಲಿಲ್ಲ; ಇರುವೆಯ ಗೂಡೊಂದು ಅದನ್ನು ಅಡ್ಡ ಮರೆಯಿಸಿತ್ತು. ಒಂದು ಅಂಥ ಹಣ್ಣು ನೀರಿಗೆ ಬೀಳಬೇಕೆ? ಬಿದ್ದು ತೇಲಿ, ತೇಲಿ, ದಕ್ಷಿಣ ದೇಶದಲ್ಲಿದ್ದ ಗಂಗೆಯ ತಡಿಯ ಪಟ್ಟಣವಾದ ವಾರಣಾಸಿಯನ್ನು ಸೇರಿತು.

ಆ ಪ್ರಾತಃಕಾಲ ವಾರಣಾಸಿಯ ಅರಸು, ಬ್ರಹ್ಮದತ್ತ ಎಂಬಾತ, ನದಿಯಲ್ಲಿ ಸ್ನಾನ ಮಾಡುತ್ತಿದ್ದ. ಅವನ ಆಚೀಚೆ ಬೆಸ್ತರು ಬಲೆ ಬೀಸಿದ್ದರು. ಅರಸನ ಸ್ನಾನ ಮುಗಿದೊಡನೆ ಬೆಸ್ತರು ಬಲೆಯನ್ನು ಮೇಲಕ್ಕೆ ಎಳೆದಾಗ ಅದರಲ್ಲೊಂದು ಹಣ್ಣು ಕಾಣಿಸಿತು. ಅದು ಹೊಂಬಣ್ಣದ ಹಣ್ಣು. ಅವರು ಅದನ್ನು ಕಂಡು



ಆಶ್ಚರ್ಯ ಪಟ್ಟು, ದೊರೆಗೆ ತೋರಿಸಲು ಧಾವಿಸಿದರು. ದೊರೆ ಅದನ್ನು ಕುತೂಹಲದಿಂದ ನೋಡಿದ. ಅಂಥ ಹಣ್ಣನ್ನು ಅವನು ಆ ತನಕವೂ ಕಂಡಿರಲಿಲ್ಲ.

" ಇದೆಂತಹ ವಿಚಿತ್ರ ಹಣ್ಣು" ಎಂದು ಅವರನ್ನು ಕೇಳಿದ. ಬರಿದೆ ಮೀನು ಹಿಡಿವ ಕಸುಬಿನ ಅವರಿಗೆ, ಹಣ್ಣಿನ ವಿಚಾರ ಏನು ಗೊತ್ತು? ಅವರು "ನಮಗೆ ಗೊತ್ತಿಲ್ಲ ದೊರೆಯೇ," ಎಂದರು.

"ವನಪಾಲಕರನ್ನು ಕರೆಯಿರಿ" ಎಂದ ಅರಸು.

ವನಪಾಲಕರು ಬಂದರು. ಹಣ್ಣನ್ನು ನೋಡಿ "ಇದು ಮಾವಿನ ಹಣ್ಣು ದೊರೆಯೇ" ಅಂದರು.

"ಇದು ಎಲ್ಲಿ ಬೆಳೆಯುತ್ತದೆ?"

"ನಮ್ಮ ರಾಜ್ಯದಲ್ಲಂತು ಇಲ್ಲ. ಅದು ದೂರದ ಹಿಮಾಲಯದ ಕಣಿವೆಗಳಲ್ಲಿ ಬೆಳೆಯುವಂತಹುದು."

ಆ ಮಾವಿನ ಹಣ್ಣನ್ನು ಅರಮನೆಗೊಯ್ದು, ಕತ್ತರಿಸಿ ಅರಸು ಒಂದು ಹೋಳಿನ ರುಚಿಯನ್ನು ನೋಡಿದ. ಉಳಿದ ತುಂಡುಗಳನ್ನು ತನ್ನ ರಾಣಿಯರಿಗೂ, ಮಂತ್ರಿಗಳಿಗೂ ಕೊಟ್ಟ. ಅವರೆಲ್ಲರಿಗೂ ಆಶ್ಚರ್ಯವೇ!"ಈ ಹಣ್ಣಿನ ರುಚಿ ದಿವ್ಯವಾಗಿದೆ. ಇದರಂತಹ ಹಣ್ಣನ್ನು ನಾವು ಈ ಜನ್ಮದಲ್ಲೇ ತಿಂದಿಲ್ಲ– " ಎಂದರು ಅವರೆಲ್ಲ.

ಹೀಗೆಯೇ ದಿನಗಳು ಸರಿದುವು. ದೊರೆ ಬ್ರಹ್ಮದತ್ತನ ಮನಸ್ಸಿನಲ್ಲಿ ಅಂತಹ ಹಣ್ಣನ್ನು ಇನ್ನೂ ತಿನ್ನಬೇಕೆಂಬ ಚಪಲ ಉಳಿಯಿತು. ಒಮ್ಮೆ ಚೂರು ಮಾತ್ರ ತಿಂದ ಆ ಮಾವಿನ ಹಣ್ಣಿನ ನೆನಪಿನಿಂದ, ಅವನಿಗೆ ರಾತ್ರಿ ಸಮನಾಗಿ ನಿದ್ದೆಯೂ ಹತ್ತದಾಯಿತು. ಅತ, ಎಷ್ಟೇ ದೂರವಿರಲಿ– ಆ ಮಾವಿನ ಮರವನ್ನು ಹುಡುಕಿ ಹೋಗುವೆನೆಂದು ನಿರ್ಧರಿಸಿದ. ಅದಕ್ಕಾಗಿ ಹಲವು ದೋಣಿಗಳ ಒಂದು ಪಡೆ ಸಿದ್ಧವಾಯಿತು. ಅರಸನೂ ಅವನ ಜನರೂ ದೋಣಿಗಳಲ್ಲಿ ಕುಳಿತು, ಹಾಯಿ ಬಿಡಿಸಿ, ನದಿಯಲ್ಲಿ ಪಯಣ ಹೊರಟರು.

ಎಷ್ಟೋ ದಿವಸಗಳ ಕಾಲ ಪಯಣ ಮಾಡಿ ಮಾಡಿ, ಎಷ್ಟೋ ರಾತ್ರೆಗಳು ಕಳೆದಾದ ಬಳಿಕ, ಅವರೊಂದು ಪರ್ವತಗಳ ನಡುವಣ ಕಣಿವೆಗೆ ಬಂದರು. ಅಲ್ಲಿ ನದೀ ದಂಡೆಯ ಮೇಲಿದ್ದ ಮಾವಿನ ಮರ ಕಾಣಿಸಿತು. ಅರಸ ದೋಣಿಯಿಂದಿಳಿದು; ಅವನ ಪರಿವಾರದವರೂ ಇಳಿದರು. ಎಲ್ಲರಿಗೂ ಸವಿಯಾದ ಮಾವಿನ ಹಣ್ಣುಗಳ ಔತಣ ದೊರೆಯಿತು. ಕತ್ತಲಾಗುತ್ತಲೇ, ಅರಸು ಮಾವಿನ ಮರದ ಬುಡದಲ್ಲಿಯೇ ಮಲಗಿಕೊಂಡ, ಸೈನಿಕರು ಅವನ ಸುತ್ತಲೂ ಕಾವಲು ನಿಂತರು. ತುಸು ಆಚೀಚೆ ಅಗ್ಗಿಷ್ಟಿಕೆ ಉರಿಸಿ ಕಾಡು ಮೃಗಗಳು ಸಮೀಪ ಬಾರದಂತೆ ಎಚ್ಚರ ವಹಿಸಿದರು.

ರಾತ್ರಿ ಬಲು ಹೊತ್ತು ಸರಿಯಿತು. ಅರಸೂ, ಅವನ ಕಾವಲಿನವರೂ, ಅವನ ಪರಿವಾರದವರೆಲ್ಲರೂ ನಿದ್ರೆ ಹೋದರು. ಅಂತಹ ವೇಳೆಯಲ್ಲಿ ಕಪಿರಾಜ ತನ್ನ ಪಡೆಯೊಡನೆ ಅಲ್ಲಿಗೆ ಆಗಮಿಸಿದ. ಅವು ಮರದ ಮೇಲೆ ಜಿಗಿದು, ಇರುವ ಹಣ್ಣುಗಳನ್ನೆಲ್ಲ ತಿಂದು ಮುಗಿಸಿದುವು. ತಿಂದ ಸಂತೋಷದಲ್ಲಿ ರೆಂಬೆಯಿಂದ ರೆಂಬೆಗೆ ನೆಗೆಯುತ್ತ, ಬಲು ಗದ್ದಲವೆಬ್ಬಿಸಿಬಿಟ್ಟವು. ಇದರಿಂದ ದೊರೆಗೆ ನಿದ್ರಾಭಂಗವಾಯಿತು. ಅತ ಬಿಲ್ಲಾಳುಗಳನ್ನು ಕರೆದು "ಈ ಮರವನ್ನು ಸುತ್ತುವರಿದು ಯಾವತ್ತು ಕಪಿಗಳನ್ನು ಕೊಂದು ಕೆಡವಿ. ನಾಳೆ ಬೆಳಗ್ಗೆ ಮಾವಿನ ಹಣ್ಣುಗಳ ಜತೆಗೆ ಕಪಿ ಮಾಂಸವೂ ಸೇರಿತಾದರೆ, ಒಳ್ಳೆಯ ಭೋಜನವಾದೀತು–" ಎಂದು ಅಪ್ಪಣೆ ಮಾಡಿದ.

ಕಪಿಗಳಿಗೆ ಅರಸನ ಈ ಅಪ್ಪಣೆ ಕೇಳಿಸಿದ್ದೇ ತಡ, ಅವು ನಡುಗುತ್ತ ತಮ್ಮ ಒಡೆಯನ ಬಳಿಗೆ ಧಾವಿಸಿದುವು."ಅಯ್ಯಾ ದೊರೆಯೇ, ನೀನೇನೋ ನಮಗೆ ಎಚ್ಚರಿಕೆ ಕೊಟ್ಟಿದ್ದೆ; ಆದರೂ ನಮಗೆ ತಿಳಿಯದಂತೆ ಒಂದು ಹಣ್ಣು ನದಿಗೆ ಬಿದ್ದು, ತೇಲಿಹೋಗಿರಬೇಕು. ಆದರಿಂದಲೇ ಈ ವಿಚಿತ್ರ ಜನರು ಇಲ್ಲಿಗೆ ಬರುವಂತಾಯಿತು. ಈಗ ಅವರ ನಾಯಕ ನಮ್ಮನ್ನು ಕೊಲ್ಲುವುದಕ್ಕೆ ಆಜ್ಞಾಪಿಸಿದ್ದಾನೆ. ಮರದ ಸುತ್ತಲೂ ಅವನ ಜನರು ಕಾವಲು ನಿಂತಿದ್ದಾರೆ, ಇನ್ನೇನು ಗತಿ?" ಎಂದು ಮೊರೆಯಿಟ್ಟವು.

ಆಗ ಕಪಿ ಅರಸು "ಮಕ್ಕಳೇ, ಬರಿದೆ ಗಾಬರಿಗೊಳ್ಳಬೇಡಿ. ನಿಮ್ಮನ್ನು ಉಳಿಸುವ ಉಪಾಯವನ್ನು ನಾನು ಹುಡುಕುತ್ತೇನೆ" ಎಂದಿತು.

ತನ್ನ ಹಿಂಬಾಲಕರನ್ನು ಹೀಗೆ ಸಮಾಧಾನಗೊಳಿಸಿ, ಕಪಿ ಮರದ ತುತ್ತತುದಿಯನ್ನೇರಿತು. ಅಲ್ಲಿಂದ ನದಿಯ ಮೇಲೆ ಚಾಚಿಕೊಂಡ ಮತ್ತೊಂದು ಟೊಂಗೆಗೆ ನೆಗೆಯಿತು. ಆ ಟೊಂಗೆಯಿಂದ ನದಿಯ ಆಚೆಯ ತಡಿಗೂ ಜಿಗಿದುಬಿಟ್ಟಿತು. ಅಲ್ಲಿಂದ ಒಂದು ಎಳೆಯ ಬಿದಿರನ್ನು ಮುರಿದು ತೆಗೆದು ಅದರ ಒಂದು ತುದಿಯನ್ನು ಆಚೆ ದಡದ ಒಂದು ಮರಕ್ಕೆ ಬಿಗಿಯಿತು. ಇನ್ನೊಂದನ್ನು ತನ್ನ ಸೊಂಟಕ್ಕೆ ಬಿಗಿದುಕೊಂಡು ಅಲ್ಲಿಂದ ಮರಕ್ಕೆ ಕುಪ್ಪಳಿಸುವ ಯೋಚನೆ ಮಾಡಿತು. ಹಾಗೆ ಮಾಡಿದ್ದಾದರೆ – ತನ್ನ ಪರಿವಾರವೆಲ್ಲ ಆ ಬಿದಿರಿನ ಸೇತುವೆಯ ಮೇಲಿನಿಂದ ಪಾರಾಗಬಹುದು– ಎಂಬ ಯೋಚನೆ ಅದರದು.

ಅದೇ ರೀತಿ ಅದು ಗಾಳಿಯ ವೇಗದಿಂದ ಬಿದಿರನ್ನು ಎಳೆದುಕೊಂಡು ಈಚೆಗೆ ಜಿಗಿದೂ ಬಿಟ್ಟಿತು. ಅಲ್ಲಿ ಅದರ ಯಾವತ್ತೂ ಪಂಗಡ ಆತುರದಿಂದ ನಿಂತು ಕಾದಿತ್ತಷ್ಟೆ. ಹಾರಿದ್ದೇನೋ ಸರಿಯೆ, ಒಂದು ಲೆಕ್ಕಾಚಾರದಲ್ಲಿ ಕಪಿರಾಯ ತಪ್ಪಿ ಬಿದ್ದಿದ್ದ. ಮುರಿದ ಬಿದಿರಿನ ಉದ್ದ ಸಾಲದಾಗಿ, ಕಪಿ ಈಚೆಗೆ ಬಂದೆರಗಲು ಆಗದೇ ಹೋಯಿತು. ಅದರ ಬದಲು, ಅದು ಹತ್ತಿರದ ಟೊಂಗೆಯೊಂದನ್ನು ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಳ್ಳಬೇಕಾಯಿತು. ಆದರೂ ಅದು ಅಂಜದೆ ತನ್ನ ಪರಿವಾರದವರಿಗೆ "ಬೇಗನೆ ನನ್ನ ಮೇಲಿನಿಂದ ಬಿದಿರಿಗೆ ಹೋಗಿ, ಅಲ್ಲಿಂದ ಆಚೆಯ ದಂಡೆಗೆ ಪಾರಾಗಿ" ಎಂದು ಅಪ್ಪಣೆ ಮಾಡಿತು.


ಒಂದೊಂದರಂತೆ, ಎಂಬತ್ತು ಸಾವಿರ ಕಪಿಗಳೂ, ತಮ್ಮ ದೊರೆಯನ್ನು ವಂದಿಸಿ, ನದಿಯನ್ನು ದಾಟಿ, ಆಚೆ ದಂಡೆಯನ್ನು ಸೇರಿದುವು. ಆ ಕಪಿ ಪಡೆಯಲ್ಲಿ ಒಂದು ದುಷ್ಟ ಕಪಿಯೂ ಇತ್ತು. ಅದರ ಹೆಸರು ದೇವದತ್ತ ಎಂದು. ಅದಕ್ಕೆ ತನ್ನ ನಾಯಕನನ್ನು ಕಂಡರೆ ತುಂಬ ಅಸೂಯೆ. ಆ ಕಪಿ ಮಾತ್ರ "ನನ್ನ ಈ ವೈರಿಯನ್ನು ಮುರಿಯಲು ಇದೇ ಸಂದರ್ಭ" ಎಂದು ಯೋಚಿಸಿತು. ಅದು ಮಾತ್ರ ತನ್ನ ದೊರೆಯ ಬೆನ್ನಿನ ಮೇಲೆ ಬೇಕೆಂದೇ ಗಟ್ಟಿಯಾಗಿ ಹಾರಿತು. ಅದರಿಂದ ಕಪಿ ದೊರೆಯ ಬೆನ್ನೇ ಮುರಿಯಿತು. ಅದರ ವೇದನೆ ಹೇಳುವುದಕ್ಕಿಲ್ಲ. ಅಷ್ಟು ಮಾಡಿ, ಆ ದುಷ್ಟ ದೇವದತ್ತ ಬಿದಿರನ್ನೇರಿ ಪಾರಾಯಿತು. ನೋವುಗೊಂಡ ಕಪಿ ದೊರೆ ಅಲ್ಲಿಯೇ ಸಾಯುವ ಸ್ಥಿತಿ ಬಂದಿತು.

ನಿದ್ರೆಯಿಂದ ಎಚ್ಚತ್ತ ದೊರೆ ಬ್ರಹ್ಮದತ್ತ ಮಾತ್ರ– ನಡೆದ ಯಾವತ್ತು ವಿದ್ಯಮಾನಗಳನ್ನು ಕಂಡಿದ್ದ. ಆ ವೀರ ಕಪಿಯನ್ನು ಕಂಡು ಅವನಲ್ಲಿ ಮರುಕವುಂಟಾಯಿತು. ಬೆಳಗಿನ ಜಾವಕ್ಕೇನೇ, ಆತ ತನ್ನವರನ್ನು ಎಬ್ಬಿಸಿ, ನೊಂದ ಆ ಕಪಿಯನ್ನು ಬಲು ಎಚ್ಚರದಿಂದ ಕೆಳಕ್ಕೆ ಸಾಗಿಸಿ ತರುವಂತೆ ಆಜ್ಞೆ ಮಾಡಿದ. ಹಾಗೆ ತರುತ್ತಲೇ ಅದರ ಮೈಗೆ ಸುಗಂಧ ದ್ರವ್ಯ ಪೂಸಿದರು; ಅದಕ್ಕೆ ಹಳದಿ ಬಟ್ಟೆ ಹೊದಿಸಿದರು. ಅರಸು ಆ ಕಪಿ ನಾಯಕನ ಮಗ್ಗುಲಲ್ಲಿ ಕುಳಿತು ಕೇಳಿದ "ಓ ಮಹಾ ಕಪಿಯೇ, ನಿನು ನಿನ್ನ ದೇಹವನ್ನು ಸೇತುವೆಯಾಗಿ ಮಾಡಿದೆ. ಉಳಿದವರನ್ನು ಪಾರಾಗಿಸಲು; ಹಾಗೆ ಮಾಡುವುದರಲ್ಲಿ ನಿನ್ನ ಪ್ರಾಣವೇ ಬಲಿಯಾಯಿತು. ಅಷ್ಟೆಲ್ಲ ಯಾತಕ್ಕೆ ಮಾಡಲು ಹೋದೆ? ಅವರು ನಿನಗೇನಾಗಬೇಕು? ನೀನು ಅವರಿಗೇನಾಗಬೇಕು?" ಎಂದು ಕೇಳಿದ.

ಸಾವಿಗೀಡಾಗುತ್ತಿದ್ದ ಆ ಕಪಿ ನುಡಿಯುತ್ತ – "ಓ ದೊರೆಯೇ, ಅವು ನನ್ನ ಮಕ್ಕಳು; ನಾನು ಅವಕ್ಕೆ ನಾಯಕ, ಅವುಗಳ ಅರಸ. ಅವು ನನ್ನನ್ನೇ ನಂಬಿ ಬಾಳಿದುವು. ನಾನೀಗ ಸಾಯಲು ಅಂಜುವುದಿಲ್ಲ. ನನ್ನ ಪ್ರಜೆಗಳಿಗೆ ಬಿಡುಗಡೆ ಕೊಡುವುದರಲ್ಲಿ ನಾನು ಸಫಲನಾಗಲಿಲ್ಲವೆ? ನೀನು ಒಳ್ಳೆಯ ಅರಸು ಎನಿಸಬೇಕಾದರೂ ನಿನ್ನ ಪ್ರಜೆಗಳ ಸುಖ ಎಲ್ಲಕ್ಕಿಂತಲೂ ಮೊದಲು ಎಂದು ತಿಳಿ"– ಎಂದಿತು.

ಇಷ್ಟು ಮಾತನ್ನು ಹೇಳಿ ಆ ಕಪಿ ಕಣ್ಣು ಮುಚ್ಚಿತು. ದೊರೆ ಬ್ರಹ್ಮದತ್ತನು ಒಬ್ಬ ರಾಜನಿಗೆ ಕೊಡುವಷ್ಟೇ ಮನ್ನಣೆಯಿಂದ ಅದರ ಉತ್ತರ ಕ್ರಿಯೆಯನ್ನು ನಡೆಸಿದ. ಅದನ್ನು ಸುಟ್ಟ ಸ್ಥಳದಲ್ಲಿ ಒಂದು ದೇಗುಲವನ್ನೇ ಕಟ್ಟಿಸಿದ; ಅಲ್ಲಿ ದೀಪ ಉರಿಸಿದರು , ಗಂಧ ಪುಷ್ಪಗಳನ್ನು ಅರ್ಪಿಸಿದರು.

ವಾರಣಾಸಿಗೆ ಆತ ಮರಳಿದ ಬಳಿಕ ಆ ವಾನರ ಶ್ರೇಷ್ಠನ ಹೆಸರಿನಲ್ಲಿ ಇನ್ನೂ ಒಂದು ದೇವಾಲಯವನ್ನು ಅಲ್ಲಿ ನಿರ್ಮಿಸಿದ. ತನ್ನ ಪ್ರಜೆಗಳೆಲ್ಲರೂ ಅಷ್ಟೊಂದು ಧೈರ್ಯಶಾಲಿಯಾದ ಪ್ರಾಣಿಯನ್ನು ಗೌರವಿಸಲು ಆಜ್ಞೆ ಮಾಡಿದ. ಆತ ಆ ಕಪಿಯು ತನ್ನ ಕೊನೆಗಾಲದಲ್ಲಿ ಹೇಳಿದ ಮಾತುಗಳನ್ನು ಒಂದಿಷ್ಟೂ ಮರೆಯಲಿಲ್ಲ. ಅಲ್ಲದೆ ತನ್ನ ಪ್ರಜೆಗಳನ್ನು ನ್ಯಾಯದಿಂದಲೂ, ಒಳ್ಳೆಯ ರೀತಿಯಿಂದಲೂ ಪರಿಪಾಲನೆ ಮಾಡುತ್ತಾ ಬಂದನು.



ಮೂಲ : ಅಂಜಲಿ ಪಾಲ್

ಅನುವಾದ : ಶಿವರಾಮ ಕಾರಂತ

## ಚಟುವಟಿಕೆಗಳು

- ಓದಿರಿ

ಈ ಕಥೆಯಲ್ಲಿ ನಿಮಗೆ ಮೆಚ್ಚುಗೆಯಾದ ಭಾಗವನ್ನು ಗಟ್ಟಿಯಾಗಿ ಓದಿರಿ.

- ಚರ್ಚಿಸಿರಿ

ಕಪಿಗಳನ್ನು ಕೊಲ್ಲಲು ಹೇಳಿದ ಬ್ರಹ್ಮಗುಪ್ತನು ಕಪಿರಾಜನಿಗೆ ದೇಗುಲವನ್ನು ಕಟ್ಟಿದುದು ಯಾಕೆ? ಚರ್ಚಿಸಿರಿ

- ಉತ್ತರಿಸಿರಿ

- 'ಒಂದು ಹಣ್ಣು ಸಹ ನದಿಗೆ ಬೀಳದಂತೆ ನೋಡಿಕೊಳ್ಳಿ' ಎಂದು ಕಪಿಗಳ ದೊರೆ ಹೇಳಲು ಕಾರಣವೇನು?
- ಬ್ರಹ್ಮದತ್ತ ರಾಜನು ತನಗೆ ಲಭಿಸಿದ ಅಪೂರ್ವವಾದ ಹಣ್ಣನ್ನು ಏನು ಮಾಡಿದನು?
- ಮಾವಿನ ಮರದಡಿಯಲ್ಲಿ ಮಲಗಿದ್ದ ರಾಜನಿಗೆ ನಿದ್ರಾಭಂಗವಾದುದು ಹೇಗೆ?
- ಕಪಿ ಅರಸು ತನ್ನ ಪ್ರಜೆಗಳನ್ನುಳಿಸಲು ಮಾಡಿದ ಉಪಾಯವೇನು?
- ಕಪಿದೊರೆಗೆ ಸಾವು ಬರಲು ಕಾರಣವೇನು?
- ಕಪಿಯ ಸಾಹಸ ಹಾಗೂ ತ್ಯಾಗದ ಬಗೆಗೆ ರಾಜನು ಕೇಳಿದ ಪ್ರಶ್ನೆಗೆ ಅದು ನೀಡಿದ ಉತ್ತರವೇನು?

- ಟಿಪ್ಪಣಿ ತಯಾರಿಸಿರಿ

ಒಬ್ಬ ಉತ್ತಮ ನಾಯಕನಲ್ಲಿರಬೇಕಾದ ಗುಣಗಳೇನು? ಪಾಠಭಾಗದ ಆಧಾರದಲ್ಲಿ ಟಿಪ್ಪಣಿ ತಯಾರಿಸಿರಿ.

- ಅಭಿನಯಿಸಿರಿ

ಈ ಕಥೆಯಲ್ಲಿ ಬಂದಿರುವ ಪಾತ್ರಗಳನ್ನು ಕಂಡುಕೊಂಡು ಅವುಗಳೊಳಗಿನ ಸಂಭಾಷಣೆಯನ್ನು ಬರೆಯಿರಿ. ತರಗತಿಯಲ್ಲಿ ಏಕಪಾತ್ರ ಅಭಿನಯಿಸಿರಿ.

### ಕನ್ನಡ ವರ್ಣಮಾಲೆಗಳ ಪರಿಚಯ

**ಸ್ವರಗಳು – 13**

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

**ವ್ಯಂಜನಗಳು**

ವರ್ಗೀಯ ವ್ಯಂಜನಗಳು – 25

| | | | | |
|---|---|---|---|---|
| ಕ | ಖ | ಗ | ಘ | ಙ |
| ಚ | ಛ | ಜ | ಝ | ಞ |
| ಟ | ಠ | ಡ | ಢ | ಣ |
| ತ | ಥ | ದ | ಧ | ನ |
| ಪ | ಫ | ಬ | ಭ | ಮ |

**ಅವರ್ಗೀಯ ವ್ಯಂಜನಗಳು – 9**

ಯ ರ ಲ ವ ಶ ಷ ಸ ಹ ಳ

**ಯೋಗವಾಹಗಳು**

ಂ (ಅನುಸ್ವಾರ)

ಃ (ವಿಸರ್ಗ)

# ವಚನಗಳು

ಪರಸ್ಪರ ಅರಿತು ಪ್ರೀತಿಯಿಂದ ಬಾಳುವುದೇ ಧರ್ಮ. ಒಳ್ಳೆಯ ಮಾತು, ದಯೆ, ಪರೋಪಕಾರ ಮೊದಲಾದ ಸದ್ಗುಣಗಳನ್ನು ಬೆಳೆಸಿಕೊಂಡು ಬಾಳಬೇಕು.

ಕಳಬೇಡ, ಕೊಲಬೇಡ
ಹುಸಿಯ ನುಡಿಯಲು ಬೇಡ
ಮುನಿಯ ಬೇಡ
ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸ ಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗೆ ನಡೆಯದಿದ್ದರೆ
ಕೂಡಲ ಸಂಗಮ ದೇವನೆಂತೊಲಿವನಯ್ಯ



ದಯವಿಲ್ಲದ ಧರ್ಮವದಾವುದಯ್ಯಾ? ದಯವೇ
ಬೇಕು ಸಕಲ ಪ್ರಾಣಿಗಳಲ್ಲಿಯೂ ದಯವೇ
ಧರ್ಮದ ಮೂಲವಯ್ಯಾ ಕೂಡಲ
ಸಂಗಯ್ಯನಂತಲ್ಲದೊಲ್ಲನಯ್ಯಾ

ಕಾಗೆಯೊಂದಗುಳ ಕಂಡರೆ
ಕರೆಯದೇ ತನ್ನ ಬಳಗವನು
ಕೋಳಿಯೊಂದು ಕುಟುಕು ಕಂಡರೆ
ಕೂಗಿ ಕರೆಯದೇ ತನ್ನ ಕುಲವೆಲ್ಲವನ್ನು
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಗಿಂತ ಕರಕಷ್ಟ ಕೂಡಲ ಸಂಗಮದೇವ.

ಬಸವಣ್ಣ

## ಬಸವಣ್ಣ

ಬಸವಣ್ಣನವರ ಕಾಲ ಕ್ರಿ.ಶ 12 ನೇ ಶತಮಾನ. ಈಗಿನ ಬಿಜಾಪುರ ಜಿಲ್ಲೆಯ ಬಾಗೇವಾಡಿ ಇವರ ಹುಟ್ಟೂರು. ತಂದೆ ಮಾದರಸ. ತಾಯಿ ಮಾದಲಾಂಬಿಕೆ. ಇವರು ಕಳಚೂರ್ಯ ಬಿಜ್ಜಳರಾಯನ ಕರಣಿಕನಾಗಿದ್ದು, ಮುಂದೆ ಮಂತ್ರಿಯಾದರು. ಸಾಮಾಜಿಕ ಸಮತೆಯನ್ನು ತರಲು ಶ್ರಮಿಸಿದ ಇವರು ತಮ್ಮ ತತ್ವಗಳನ್ನು ಸರಳವಾಗಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ವಚನಗಳ ಮೂಲಕ ಎಲ್ಲೆಡೆ ಸಾರಿದರು. ಇವರ ಎಲ್ಲಾ ವಚನಗಳ ಕೊನೆಯಲ್ಲೂ ಇಷ್ಟದೇವರಾಗಿದ್ದ ಕೂಡಲ ಸಂಗಮ ದೇವನ ಅಂಕಿತವಿದೆ.

### ಚಟುವಟಿಕೆಗಳು

❑ **ಕಾರಣ ಹೇಳಿರಿ**

ಕೊಟ್ಟಿರುವ ವಚನಗಳಲ್ಲಿ ನಿಮಗಿಷ್ಟವಾದ ವಚನವನ್ನು ಗುರುತಿಸಿ ಅದಕ್ಕೆ ಕಾರಣವನ್ನು ಹೇಳಿರಿ.

❑ **ಪ್ರಾಸಪದಗಳನ್ನು ಬರೆಯಿರಿ**

ಈ ವಚನಗಳಲ್ಲಿ ಬಂದಿರುವ ಪ್ರಾಸ ಪದಗಳನ್ನು ಹುಡುಕಿ ಬರೆಯಿರಿ.

❑ **ಉತ್ತರಿಸಿರಿ**

- ಬಸವಣ್ಣನವರ ಅಭಿಪ್ರಾಯದಂತೆ ಅಂತರಂಗ – ಬಹಿರಂಗ ಶುದ್ಧಿಗಿರುವ ದಾರಿ ಯಾವುದು?
- ನಾವು ಇತರರೊಂದಿಗೆ ಮೃದುವಾದ ವಿನಯದಿಂದ ಕೂಡಿದ ಮಾತುಗಳನ್ನು ಆಡಬೇಕು. ಈ ಆಶಯ ಬರುವ ವಚನವು ಯಾವುದು?
- ದಯೆಯೇ ಧರ್ಮದ ಮೂಲ ಎಂಬುದನ್ನು ಬಸವಣ್ಣನವರು ಹೇಗೆ ಸಾರಿದ್ದಾರೆ?
- ಹಾರದಂತಿರಬೇಕು ಈ ಪದವನ್ನು ಹಾರದ + ಅಂತೆ ಇರಬೇಕು ಎಂದು ವಿಂಗಡಿಸಿ ಬರೆಯಬಹುದು.

ಇದೇ ರೀತಿ ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

- ಅಹುದಹುದೆನಬೇಕು –
- ಧರ್ಮವದಾವುದಯ್ಯ –
- ಕಾಗೆಯೊಂದಗುಳ –
- ದೇವನೆಂತೊಲಿವನಯ್ಯ –

❑ **ಹೋಲಿಸಿ ಬರೆಯಿರಿ**

ಕಾಗೆಯೊಂದಗುಳ ಕಂಡರೆ
ಕರೆಯದೇ ತನ್ನ ಬಳಗವನು
ಕೋಳಿಯೊಂದು ಕುಟುಕ ಕಂಡರೆ
ಕೂಗಿ ಕರೆಯದೇ ತನ್ನ ಕುಲವೆಲ್ಲವನ್ನು
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಗಿಂತ ಕರಕಷ್ಟ ಕೂಡಲ ಸಂಗಮದೇವ

ಬಸವಣ್ಣನವರ ಈ ವಚನವನ್ನು ಕೆಳಗೆ ಕೊಡಲಾದ ಸರ್ವಜ್ಞನ ವಚನದ ಆಶಯದೊಂದಿಗೆ ಹೋಲಿಸಿ ಬರೆಯಿರಿ

ಕಾಗೆಯಗುಳನು ಕಂಡು ಕೂಗುವುದು ಬಳಗವನು
ಕಾಗೆಕೋಳಿಗಳ ತೆರದುಣ್ಣವನಿರವು
ಕಾಗೆಗೂ ಕಷ್ಟ ಸರ್ವಜ್ಞ ||

❑ **ಅನುಭವ ಬರೆಯಿರಿ**

- ಇತರರ ಮಾತು ಯಾ ನಡತೆ ನಿಮಗೆ ಸಂತೋಷ ಅಥವಾ ಬೇಸರ ತರಿಸಿಬಹುದು ಅಂತಹ ಒಂದು ಅನುಭವವನ್ನು ಬರೆಯಿರಿ.

❑ **ವಚನಗಳನ್ನು ಸಂಗ್ರಹಿಸಿರಿ**

ವಚನಕಾರರು ಸಮಾಜಕ್ಕೆ ನೀತಿಯನ್ನು ಸಾರುವ ಸಲುವಾಗಿ ಹೇಳಿದ ವಿವಿಧ ವಚನಗಳನ್ನು ಸಂಗ್ರಹಿಸಿರಿ.

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಕಥಾಪಾತ್ರಗಳ ಮಾನಸಿಕ ಸ್ಥಿತಿ, ಕತೆ/ಕವಿತೆಗಳಲ್ಲಿ ಅವುಗಳಿಗಿರುವ ಸ್ಥಾನ ಎಂಬಿವುಗಳನ್ನು ಕಂಡುಕೊಂಡು, ವಾಚಿಕವಾಗಿಯೂ ಲಿಖಿತರೂಪದಲ್ಲೂ 'ಪಾತ್ರಚಿತ್ರಣ' ಮಾಡುವುದು.
- ಓದಿದ ಸೃಜನಾತ್ಮಕ ರಚನೆಗಳನ್ನು ಭಿನ್ನ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿಸುವುದು.
- ವಿವಿಧ ಆಶಯ ಮಂಡಲಗಳಿಗೆ ಸಂಬಂಧಿಸಿದ ಚರ್ಚೆ ಸಂವಾದಗಳಲ್ಲಿ ಭಾಗವಹಿಸಿ ಆಶಯಗಳನ್ನೂ ಅಭಿಪ್ರಾಯಗಳನ್ನೂ ತರ್ಕಬದ್ಧವಾಗಿ ಮಂಡಿಸುವುದು.
- ಚರ್ಚೆ ಸಂವಾದಗಳಿಂದ ರೂಪುಗೊಂಡ ಆಶಯಗಳನ್ನು ಕ್ರೋಡೀಕರಿಸಿ ವಾಚಿಕವಾಗಿಯೂ ಲಿಖಿತ ರೂಪದಲ್ಲಿಯೂ ಪ್ರಕಟಿಸುವುದು.
- ಸಾಮಾಜಿಕ ಮಹತ್ವವುಳ್ಳ ವಿಷಯಗಳನ್ನು ಆಧಾರವಾಗಿರಿಸಿ ಪ್ರಬಂಧ, ಮನವಿ, ಭಾಷಣ ಇತ್ಯಾದಿಗಳನ್ನು ರಚಿಸುವುದು.
- ಪಾಠಭಾಗಗಳಿಂದ ಆರ್ಜಿಸಿದ ಭಾಷಾಪರವೂ ಆಶಯಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.

# 2. ಆರೋಗ್ಯವೇ ಭಾಗ್ಯ

'ಆರೋಗ್ಯವೇ ಭಾಗ್ಯ' ಎಂಬ ಮಾತು ನಮಗೆ ಸುಪರಿಚಿತವಾದುದು. ಉತ್ತಮ ಆರೋಗ್ಯವನ್ನು ಪಡೆಯುವಲ್ಲಿ ಅನೇಕ ಘಟಕಗಳು ಪಾತ್ರವಹಿಸುತ್ತವೆ. ಒಳ್ಳೆಯ ಪರಿಸರ, ಹಾಸ್ಯಪ್ರಜ್ಞೆಗಳು ನಮ್ಮನ್ನು ಆರೋಗ್ಯಪೂರ್ಣ ಚಿಂತನೆಯತ್ತ ಕೊಂಡೊಯ್ಯುತ್ತವೆ. ಮನೋರಂಜನೆಯಿಂದ ಶಾರೀರಿಕ ಮತ್ತು ಮಾನಸಿಕ ನೆಮ್ಮದಿ ಸಿಗುತ್ತದೆ. ಉತ್ತಮ ಆರೋಗ್ಯಕ್ಕೆ ಇದು ಅಗತ್ಯ. ಆರೋಗ್ಯದ ಮೇಲೆ ಪರಿಣಾಮ ಬೀರುವ ಇನ್ನೊಂದು ಪ್ರಧಾನ ಅಂಶ ಕ್ರೀಡೆಯಾಗಿದೆ. ಕ್ರೀಡೆಗಳು ನಮ್ಮಲ್ಲಿ ಆರೋಗ್ಯ ಪೂರ್ಣ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸುತ್ತವೆ. ಇದರೊಂದಿಗೆ ಹಿರಿಯ ಕಿರಿಯರ ಒಡನಾಟವೂ ಆತ್ಮೀಯ ಸಂಬಂಧಗಳೂ ನಮ್ಮ ಬಾಳನ್ನು ಹಸನಾಗಿಸುತ್ತವೆ.



# ಕಡಲಕರೆ

ಸೃಷ್ಟಿಯ ಅದ್ಭುತಗಳಲ್ಲಿ ಸಮುದ್ರವೂ ಒಂದು. ಪುಟ್ಟ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ಸಮುದ್ರವೆಂದರೆ ಇಷ್ಟ. ಕ್ಷಣಕ್ಷಣಕ್ಕೂ ಬದಲಾಗುವ ಅದರ ಸ್ವರೂಪ ಊಹಾತೀತ. ಕವಿಗಳ ಭಾವನೆಗಳನ್ನು ಕೆರಳಿಸುವ, ಚಿತ್ರಗಾರರ ಕುಂಚಗಳನ್ನು ಚಲಿಸುಂತೆ ಮಾಡುವ ಅದರ ಮೋಡಿ ಅಪಾರ. ಕಣ್ಣೋಡಿಸಿದಷ್ಟೂ ನಿಲುಕದ ಕಡಲಿನ ಮೇರೆ ನಮ್ಮ ನಿಮ್ಮ ಮನಸ್ಸನ್ನು ಗರಿಗೆದರಿಸುತ್ತದೆ.

ಬನ್ನಿರಿ ಗೆಳೆಯರೆ ನೋಡಲು ಹೋಗುವ।
ಸಂಜೆಯ ಕಡಲಿನ ಸಡಗರವ
ಸಕ್ಕರೆ ಮರಳಿನ ರಾಶಿಯೊಳೆಲ್ಲರು
ಅಕ್ಕರೆಯಿಂದಲಿ ನಲಿಯೋಣ॥


ಆಚೆಗೆ ನೋಡಿರಿ ನೀರೇ ನೀರು
ಚಾಚುತಲಿದೆ ತೆರೆ ಕೈಗಳನು।
ನಗುವಿನ ಗದ್ದಲವೆಬ್ಬಿಸಿ ಬೆಳ್ಳಗೆ
ಮುದ್ದೆ ನೊರೆಯ ಸೂಸುತಲಿಹುದು॥

ಗಾಳಿಯು ಭರ್‍ರನೆ ಬೀಸುತಲಿಹುದು
ಗಾಳಿಯ ಮರ ತಲೆದೂಗುವುದು
ತೋಳನು ಬೀಸುತಲಿದೆ ತೆಂಗಿನಮರ
ತೇಲುತಲಿದೆ ಬಣ್ಣದ ಮುಗಿಲು॥

ಮುಟ್ಟಲು ಹೆದರುವ ಹುಡುಗರ ತೆರೆಗಳು
ಅಟ್ಟುತ ಬರುವವು ಭರದಿಂದ
ಮರಳಲಿ ಬರೆಯುವ ಹೆಸರನು ಸರಸರ
ಒರೆಸುತ ಹಿಂದಕ್ಕೋಡುವವು

ಅದೋ ದಡದಲಿ, ಕಡಲಿನ ಮೇಲೆ
ಸಾಗುತಲಿರುವವು ದೋಣಿಗಳು
ಕಡಲಿನ ಒಡಲಿನ ಒಳಗಡೆ ಅಡಗಿವೆ
ಸಾವಿರ ಸಾವಿರ ಮೀನುಗಳು

ಕಡಲಿನ ಹಕ್ಕಿ ಹರುಷದಿ ಸೊಕ್ಕಿ
ಅಲೆಗಳ ಮಡಿಲೊಳು ಆಡುತಿವೆ
ಹೊಯಿಗೆಯ ಮೇಲೆ ಕುದುರೇಡಿಗಳು
ಕಣ್ ಮುಚ್ಚಾಲೆಯನಾಡುತಿವೆ.



ಒಲವಿನ ಗೆಳೆಯರೆ ಆಡುತ ಓಡುತ
ಬಿದ್ದರು ಇಲ್ಲಿ ನೋವಿಲ್ಲ
ಬೆಳ್ಳನೆ ಮರಳಲಿ ಹೊರಳಾಡಿದರೂ
ಎಳ್ಳಿನಷ್ಟು ಕೊಳೆಯಿಲ್ಲ.

ನೀರನು ಮುಟ್ಟಿ ರುಚಿ ನೋಡಿದಿರಾ
ಉಪ್ಪನು ಕಲಸಿದರಾರಣ್ಣ
ಕುಡಿಯಲು ಕಷ್ಟ ಮೀಯಲು ಇಷ್ಟ
ಇಳಿಯಲು ಎಚ್ಚರವಿರಲಣ್ಣ॥

ಕಡಲಿನ ಆಚೆಗೆ ಆಗಸ ನೋಡೆ
ಏನು ವಿಚಿತ್ರವೊ ತಿಳಿಯದಲೊ
ಕಡಲಿನ ಕರೆಯ ಸಂಜೆಯ ಸೊಬಗನು
ಬಣ್ಣಿಸಿ ಮುಗಿಯುವ ಹಾಗಿಲ್ಲ

ಡಾ/ಅಮೃತ ಸೋಮೇಶ್ವರ

## ಅಮೃತ ಸೋಮೇಶ್ವರ



ಡಾ. ಅಮೃತ ಸೋಮೇಶ್ವರ ಅವರು ದಕ್ಷಿಣ ಕನ್ನಡ ಜಿಲ್ಲೆಯ ಅಡ್ಕ ಎಂಬಲ್ಲಿ 27.09.1935 ರಲ್ಲಿ ಜನಿಸಿದರು. ಅವರು ಕನ್ನಡ ಮತ್ತು ತುಳು ಭಾಷೆಯ ಬಗೆಗೆ ಆಳವಾದ ಅಧ್ಯಯನ ಮಾಡಿ, ಅರುವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಎಲೆಗಳು, ರುದ್ರಶಿಲೆಸಾಕ್ಷಿ, ವನಮಾಲೆ, ಭಗವತಿ ಆರಾಧನೆ, ಮೋಯ ಮಲಯಾಳಂ ನಿಘಂಟು ಮುಂತಾದವು ಅವರ ಮುಖ್ಯ ಕೃತಿಗಳು. ಶ್ರೀಯುತರು ಫಿನ್‌ಲ್ಯಾಂಡಿನ ಮಹಾಕಾವ್ಯ 'ಕಲೇವಾಲ'ವನ್ನು ತುಳುವಿಗೆ ಅನುವಾದಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡಮಿ ಹಾಗೂ ತುಳು ಸಾಹಿತ್ಯ ಅಕಾಡಮಿಗಳ ಗೌರವ ಪ್ರಶಸ್ತಿಗೆ ಭಾಜನರಾದ ಶ್ರೀಯುತರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿದೆ.

### ಚಟುವಟಿಕೆಗಳು

- **ಹಾಡಿರಿ**
  - ಈ ಕವನವನ್ನು ರಾಗವಾಗಿ ಹಾಡಿರಿ.

- **ಅರ್ಥ ಬರೆಯಿರಿ**
  - ಕೆಳಗೆ ಕೊಟ್ಟಿರುವ ಪದಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಬರೆಯಿರಿ.

    ಅಕ್ಕರೆ, ಕಡಲು, ಸಡಗರ, ಹರುಷ, ಸೊಬಗು

- **ಉತ್ತರಿಸಿರಿ**
  - ಸಮುದ್ರದ ತೆರೆಗಳು ಏನು ಮಾಡುತ್ತವೆ?
  - ಕಡಲಿನೊಡನೆ ಆಟವಾಡುವ ಜೀವಿಗಳು ಯಾವುವು?
  - ಕಡಲಕರೆಯಲ್ಲಿ ಗಾಳಿ ಬೀಸುತ್ತಿದೆ. ಎಂಬುದನ್ನು ಕವಿ ಹೇಗೆ ಸೂಚಿಸಿದ್ದಾರೆ?
  - 'ಕಡಲಿನ ನೀರು ಕುಡಿಯಲು ಕಷ್ಟ, ಮೀಯಲು ಇಷ್ಟ' ಎಂದು ಕವಿಯ ಯಾಕೆ ಹೇಳಿರಬಹುದು?

## ❑ ಟಿಪ್ಪಣಿ ತಯಾರಿಸಿರಿ

- ನೀವು ನಿಮ್ಮ ಹೆತ್ತವರೊಂದಿಗೆ ಕಡಲ ತೀರವನ್ನು ಸಂದರ್ಶಿಸಿರುವಿರಲ್ಲವೇ? ಅಲ್ಲಿ ನೀವು ಕಂಡ ದೃಶ್ಯಗಳಿಗೂ, ಕವಿತೆಯಲ್ಲಿ ವರ್ಣಿಸಲಾದ ವಿಚಾರಗಳಿಗೂ ಸಾಮ್ಯವಿದೆಯಲ್ಲವೇ? ನಿಮ್ಮ ಅನುಭವಗಳನ್ನು ಹಂಚಿಕೊಂಡು ಟಿಪ್ಪಣಿಯೊಂದನ್ನು ತಯಾರಿಸಿರಿ.

## ❑ ಗದ್ಯರೂಪದಲ್ಲಿ ಬರೆಯಿರಿ

ಉದಾ:ಬನ್ನಿರಿ ಗೆಳೆಯರೆ ನೋಡಲು ಹೋಗುವ

ಸಂಜೆಯ ಕಡಲಿನ ಸಡಗರವ।

ಗೆಳೆಯರೇ ಬನ್ನಿ ಸಂಜೆಯ ಸಮುದ್ರದ

ಸಂಭ್ರಮವನ್ನು ನೋಡಲು ಹೋಗೋಣ

ಹೀಗೆಯೇ ಕೆಳಗೆ ನೀಡಲಾದ ಕವಿತೆಯ ಸಾಲುಗಳನ್ನು ಗದ್ಯರೂಪದಲ್ಲಿ ಬರೆಯಿರಿ.

- ಮುಟ್ಟಲು ಹೆದರುವ ಹುಡುಗರ ತೆರೆಗಳು
  ಅಟ್ಟುತ ಬರುವವು ಭರದಿಂದ
- ಕಡಲಿನ ಒಡಲಿನ ಒಳಗಡೆ ಅಡಗಿವೆ
  ಸಾವಿರ ಸಾವಿರ ಮೀನುಗಳು
- ಒಲವಿನ ಗೆಳೆಯರೆ ಆಡುತ ಓಡುತ
  ಬಿದ್ದರು ಇಲ್ಲಿ ನೋವಿಲ್ಲ '
  ಬೆಳ್ಳನೆ ಮರಳಲಿ ಹೊರಳಾಡಿದರೂ
  ಎಳ್ಳಿನಷ್ಟು ಕೊಳೆಯಿಲ್ಲ

## ❑ ಅಂತ್ಯಾಕ್ಷರಿ ಆಟ

ನೀವು ಭಾಷಾ ಆಟಗಳ ಕುರಿತು ಕೇಳಿರುವಿರಲ್ಲವೇ? ಪದಗಳ ಅಂತ್ಯಾಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ರಚಿಸುವ ಆಟವೇ ಅಂತ್ಯಾಕ್ಷರಿ ಆಟ. ಈ ಆಟವನ್ನು ಗುಂಪಿನಲ್ಲೂ ವೈಯಕ್ತಿಕವಾಗಿಯೂ ಆಡಬಹುದು. ಅಂತ್ಯಾಕ್ಷರಿ ಆಟವಾಡಲು ಈ ಕೆಳಗಿನ ಪದಗಳಿಗೆ ಸಂಬಂಧಿಸಿದ ಪದಗಳನ್ನು ಹುಡುಕಿ ಬರೆಯಿರಿ.

| ಮರ | ಹುಡುಗ | ಸಂಜೆ | ಒಡಲು | ನಗು |
|---|---|---|---|---|
| ರವಿ | ಗರುಡ | ......... | ......... | ......... |
| ವರ್ತನೆ | ......... | ......... | ......... | ......... |
| ನರಕ | ......... | ......... | ......... | ......... |
| ಕಾಡು | ......... | ......... | ......... | ......... |

## ❑ ವಿಚಾರ ಸಂಕಿರಣ ನಡೆಸಿರಿ

- ಕಡಲ ತಡಿಯಂತೆ ಬಯಲು, ಕಾಡು, ಗುಡ್ಡ ಬೆಟ್ಟಗಳು, ಸುಂದರ ತಾಣಗಳಲ್ಲವೇ? ಆದರೆ ಇಂದು ನಗರೀಕರಣದಿಂದಾಗಿ ಪರಿಸರದ ಸಹಜ ಸೌಂದರ್ಯ ಕಡಿಮೆಯಾಗುತ್ತಿದೆ. ಇವುಗಳನ್ನು ಅದೇ ರೀತಿಯಲ್ಲಿ ಉಳಿಸಬೇಡವೇ? 'ಸುಂದರ ಪ್ರಕೃತಿ' ಎಂಬ ವಿಷಯವನ್ನಿಟ್ಟುಕೊಂಡು ಪ್ರಬಂಧವನ್ನು ತಯಾರಿಸಿ ವಿಚಾರ ಸಂಕಿರಣ ನಡೆಸಿರಿ.

# ಋಷಿಯ ಸ್ವರ್ಗ

ಪ್ರಕೃತಿಯ ಸೊಬಗನ್ನು ನೋಡಿಯೇ ಸವಿಯಬೇಕು. ಪ್ರತಿಯೊಂದು ಪ್ರದೇಶಲ್ಲೂ ಅದರ ಸೌಂದರ್ಯ ವಿಭಿನ್ನವಾದುದು. ಕಡಲ ತಡಿಯ ದೃಶ್ಯಕ್ಕೂ ಹಿಮಾಚ್ಛಾದಿತ ಗಿರಿಗಳ ನೋಟಕ್ಕೂ ಅದರದ್ದೇ ಆದ ವಿಶೇಷತೆಗಳಿವೆ. ಪ್ರವಾಸ ಮಾಡುವುದರಿಂದ ನಮಗೆ ದೇಶ ವಿದೇಶಗಳಲ್ಲಿರುವ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸಲು ಅವಕಾಶವುಂಟಾಗುತ್ತದೆ. ಹಲವಾರು ಹೊಸ ವಿಚಾರಗಳನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ.

ನಮ್ಮ ಸ್ವಿಟ್ಜರ್‌ಲೆಂಡ್ ಪ್ರವಾಸ ಪ್ರಾರಂಭವಾದುದು ರೈನ್ ನದಿಯ ಜಲಪಾತ ನೋಡುವುದರೊಂದಿಗೆ. ರೈನ್ ನದಿ ವರ್ಷದುದ್ದಕ್ಕೂ ತುಂಬಿ ಹರಿವ ನದಿ. ಇದು ಯುರೋಪಿನ ನಾಲ್ಕೈದು ರಾಷ್ಟ್ರಗಳ ಜೀವನಾಡಿಯೂ ಹೌದು. ಈ ನದಿ ಸ್ವಿಟ್ಜರ್‌ಲೆಂಡಿನ ಸ್ಕಫ್ಹಾಸನ್ ಎಂಬಲ್ಲಿ ೨೫ ಮೀಟರ್ ಆಳಕ್ಕೆ ಧುಮುಕಿ ಸುಂದರವಾದ ಜಲಪಾತ ನಿರ್ಮಿಸಿದೆ. ೧೫೦ ಮೀಟರ್ ಅಗಲ ೨೫ ಮೀ. ಆಳದ ಸದಾ ತುಂಬಿ ಬೀಳುವ ಜಲಪಾತ ವೀಕ್ಷಿಸಲು ಬಹಳ ಸುಂದರ. ಜಲಪಾತದಿಂದ ಉಂಟಾಗುವ ತುಂತುರು ಹನಿ ಮತ್ತು ಮಂಜು ನಯನಮನೋಹರ. ನಾವೆಯಲ್ಲಿ ಕುಳಿತು ಜಲಪಾತದ ಬುಡದವರೆಗೆ ಹೋಗಲು ಸೌಕರ್ಯ ಇದೆ. ಜಲಪಾತದ ಬಳಿ ಇರುವ ಸಣ್ಣ ಗುಡ್ಡವನ್ನೂ ಏರಬಹುದು. ನೀರಿನ ಆರ್ಭಟ ಹೆಚ್ಚಿದರೂ ಈ ಜಲಪಾತಕ್ಕೆ ನಮ್ಮ ಗೋಕಾಕ್ ಜಲಪಾತದ ರುದ್ರ ರಮ್ಯ ನೋಟವಿಲ್ಲ. ಎತ್ತರವಂತೂ ತೀರ ಕಡಿಮೆ. ಜಲಪಾತದ ಅಗಲ ಇದರ ಸೊಬಗಿಗೆ ತಕ್ಕಮಟ್ಟಿಗೆ ಕಾರಣವಾಗಿದೆ.

ಜಲಪಾತವನ್ನು ಸವಿದು ಅಲ್ಲಿಂದ ಐವತ್ತು ಕಿ.ಮೀ. ಅಂತರದಲ್ಲಿರುವ ಜ್ಯುರಿಕ್ ಎಂಬ ನಗರಕ್ಕೆ ಬಂದೆವು. ಸ್ವಿಟ್ಜರ್‌ಲೆಂಡ್ ಗುಡ್ಡ, ಬೆಟ್ಟಗಳ ಪ್ರದೇಶವಾದ್ದರಿಂದ ಅನೇಕ ಸುರಂಗಮಾರ್ಗಗಳನ್ನು ಕೊರೆದು ರಸ್ತೆ ನಿರ್ಮಿಸಿದ್ದಾರೆ. ಆದರೆ ಎಲ್ಲವೂ ತೀರ ಅಚ್ಚುಕಟ್ಟು. ಎಲ್ಲ ಸುರಂಗಮಾರ್ಗಗಳಲ್ಲೂ ದ್ವಿಮುಖ ರಸ್ತೆಗಳು. ಸುರಂಗ ಮಾರ್ಗಗಳಲ್ಲಿ ಒಳ್ಳೆಯ ಬೆಳಕಿನ ವ್ಯವಸ್ಥೆ ಇದೆ. ಇವುಗಳಲ್ಲಿ ಕ್ಯಾಮರಾಗಳನ್ನು ಅಳವಡಿಸಿ ಸಂಚಾರವನ್ನು ನಿಯಂತ್ರಿಸಲಾಗುತ್ತದೆ. ಮಾರ್ಗದಲ್ಲಿ ಸಹಾಯಕ್ಕೆ ದೂರವಾಣಿ ಸೌಲಭ್ಯ, ಸಹಾಯಕೇಂದ್ರ ಇತ್ಯಾದಿಗಳಿಂದಾಗಿ ಸಂಚಾರ ನಿರಾತಂಕ.

ಜ್ಯುರಿಕ್ ನಗರ ಸಮುದ್ರ ಮಟ್ಟದಿಂದ ೪೦೦ ಮೀ. ಎತ್ತರದಲ್ಲಿದೆ. ಇದು ಸ್ವಿಟ್ಜರ್‌ಲೆಂಡಿನ ದೊಡ್ಡ ನಗರವೂ ಹೌದು. ಅಂತೆಯೇ ಟೋಕಿಯೊ ಬಿಟ್ಟರೆ ಜಗತ್ತಿನಲ್ಲಿ ತೀರ ದುಬಾರಿ ನಗರ. 'ಲಿಮ್ಮತ್' ನದಿ ನಗರದ ಮಧ್ಯ ಹರಿದು ದೊಡ್ಡ ಸರೋವರವನ್ನೂ ಕೂಡ ನಿರ್ಮಿಸಿದೆ. ಈ ಸರೋವರ ನಗರದ ದೊಡ್ಡ ಆಕರ್ಷಣೆಯ ಕೇಂದ್ರ. ಅನೇಕ ಚಟುವಟಿಕೆಗಳ ತಾಣ. ಈ ನಗರದ ಬ್ಯಾಂಕಿಂಗ್ ಉದ್ಯಮಕ್ಕೆ ಹೆಸರು ವಾಸಿ. ಇದು ದೇಶದ ಆರ್ಥಿಕ ಕೇಂದ್ರವಾಗಿದೆ. ಸರೋವರದ ಒಂದು ಕಡೆ ಇಳಿದು ನಾವು ಹಾಗೇ ಒಂದು ಸುತ್ತು ನಡೆದೆವು. ಸರೋವರದ ಮಧ್ಯ ದೊಡ್ಡ ಕಾರಂಜಿ ಇದೆ. ಇಲ್ಲಿ ಈಜಲು ಅನುಕೂಲ ಇದೆ. ಸರೋವರದಲ್ಲಿ ಸಾವಿರಾರು ಬೋಟುಗಳನ್ನು ದಂಡೆಯಲ್ಲಿ ನಿಲ್ಲಿಸಲಾಗಿತ್ತು. ಪ್ರವಾಸಿಗರಿಗೆ ಜ್ಯುರಿಕ್ ನಗರ ಸ್ವರ್ಗ. ಸುಂದರವಾದ ಕಟ್ಟಡಗಳು, ಪಬ್ಬುಗಳು, ನಾಲ್ಕು ಬಾರುಗಳು, ಸಿನೇಮ ಹಾಲ್‌ಗಳು, ಕ್ಯಾಸಿನೋಗಳು ಪ್ರವಾಸಿಗರಿಗೆ ಹೇಳಿ ಮಾಡಿಸಿದ ತಾಣಗಳು. ನಗರದಲ್ಲಿ ಟ್ರಾಮ್ ಮೂಲಕ ಸಂಚಾರ ಸೌಲಭ್ಯ ಇದೆ. ನಾನಾ ನಮೂನೆಯ ಕಾರುಗಳು ರಸ್ತೆ ತುಂಬಿ ಹರಿಯುತ್ತವೆ. ಆದರೂ ರಸ್ತೆಗಳ ಮೇಲೆ ಪಾದಚಾರಿಗಳಿಗೆ ಆದ್ಯತೆ. ಪಾದಚಾರಿಗಳು ರಸ್ತೆ ದಾಟಲು ರಸ್ತೆ ಮೇಲೆ ಕಾಲಿಟ್ಟರೆ ಸಾಕು, ಕಾರುಗಳು ತಡೆದು ಅವರಿಗೆ ಮೊದಲು ದಾಟಲು ಅನುವು ಮಾಡಿಕೊಡುತ್ತವೆ.



ಜ್ಯುರಿಕ್ ನಗರವನ್ನು ನೋಡಿಕೊಂಡು ನಾವು ಲುಜ್ರೇನ ಎಂಬ ನಗರಕ್ಕೆ ಪ್ರಯಾಣ ಬೆಳೆಸಿದೆವು. ರಸ್ತೆಯುದ್ದಕ್ಕೂ ಸ್ವಿಟ್ಜರ್‌ಲೆಂಡಿನ ಗ್ರಾಮೀಣ ಪ್ರದೇಶ ನಮ್ಮ ಮನಸೆಳೆಯುತ್ತದೆ. ಇಲ್ಲಿನ ಪರ್ವತಗಳು ನಮ್ಮ ಪಶ್ಚಿಮ ಘಟ್ಟಗಳಂತೆ ದೊಡ್ಡ, ಕಡಿದಾದ ಪರ್ವತಗಳಲ್ಲ. ಹಿಮಾಲಯದ ಪರ್ವತ ಶ್ರೇಣಿಯಂತೆ ಭವ್ಯವಾದವುಗಳಲ್ಲ. ಮಧ್ಯಮ ಎತ್ತರದ ಸದಾ ಹಸಿರು ಆಚ್ಛಾದಿತವಾದ ಬೆಟ್ಟಗಳಿವು. ಈ ಪರ್ವತಗಳಲ್ಲಿ ನಮ್ಮ ಪಶ್ಚಿಮ ಘಟ್ಟಗಳಂತೆ ದೊಡ್ಡ ಎಲೆಗಳ ದೊಡ್ಡ ಮರಗಳಿಲ್ಲ. ಸಣ್ಣ ಎಲೆಯ ಮರಗಳೇ ಜಾಸ್ತಿ ಹೀಗಾಗಿ ನೋಡಲು ಹಸಿರು ಹೊದಿಕೆಯಂತೆ ಕಾಣುತ್ತವೆ. ತೆಂಗಿನ ಮರಗಳಂತೂ ಇಲ್ಲಿ ಅಪರೂಪಕ್ಕೂ ನೋಡಲು ಸಿಗುವುದಿಲ್ಲ. ಸಮುದ್ರದ ತಟದಲ್ಲಿರುವ ದೇಶಗಳಲ್ಲೂ ಕೂಡಾ ನಾವು ತೆಂಗಿನ ಮರಗಳನ್ನು ನೋಡಲಿಲ್ಲ. ತೆಂಗಿನ ಮರದ ಸೌಂದರ್ಯ, ಅದರ ಉಪಯೋಗ ಯಾಕೆ ಅರಿವಾಗಿಲ್ಲ ತಿಳಿಯದು. ತೆಂಗು ಇವರಿಗೆ ವರ್ಜ್ಯ ಇರಬಹುದೆಂದು ಭಾವಿಸಿ ಸುಮ್ಮನಾದೆವು. ಬೆಟ್ಟದ ಮುಂದುವರಿದ ಸಾಲುಗಳಲ್ಲಿ, ಇಳಿಜಾರುಗಳಲ್ಲಿ ಹೆಂಚು ಹೊದಿಕೆಯ ಮನೆಗಳು, ಗ್ರಾಮಗಳು ಮಲಗಿದಂತೆ ಕಾಣುತ್ತವೆ. ಅಲ್ಲಲ್ಲಿ ಹರಿವ ತೊರೆಗಳು, ಹಳ್ಳಗಳು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತವೆ. ಈ ಬೆಟ್ಟಗಳ ಸೌಂದರ್ಯ ಪಶ್ಚಿಮ ಘಟ್ಟಗಳ ರುದ್ರ ಸೌಂದರ್ಯವಲ್ಲ, ಹಿಮಾಲಯದ ಪರ್ವತ ಶ್ರೇಣಿಗಳ ಭವ್ಯ ಸೌಂದರ್ಯವೂ ಅಲ್ಲ, ಸ್ವಿಟ್ಜರ್‌ಲೆಂಡ್ ಬೆಟ್ಟಗಳ ಸೌಂದರ್ಯ ಮಧ್ಯಮ ಎತ್ತರದ ಚೆಲುವೆ ಹಸಿರು ಮೈಸೂರು ರೇಷ್ಮೆ ಉಟ್ಟು ತನ್ನ ಸೌಂದರ್ಯಕ್ಕೆ ತಾನೇ ಮನ ಸೋತು ನಿಂತಂತೆ ತೋರುತ್ತವೆ.

ರಾತ್ರಿ ಲುಜ್ರೇನ ನಗರ ತಲುಪಿ ಹೋಟೆಲ್ ಫ್ಲೋರಾ ಎಂಬಲ್ಲಿ ಉಳಿದುಕೊಂಡೆವು. ಈ ಹೋಟೆಲ್ ವಾತಾನುಕೂಲಿತವಿರಲಿಲ್ಲ. ಅಥವಾ ಅದನ್ನು ಚಾಲೂ ಇಟ್ಟಿರಲಿಲ್ಲ. ಹೀಗಾಗಿ ರಾತ್ರಿ ಕಿಟಿಕಿ ತೆರೆದು ಮಲಗಬೇಕಾಯಿತು. ಅಲ್ಲಿ ಚಳಿ ಇರಲಿಲ್ಲ.

ಮಾರನೆಯ ದಿನ ಬೆಳಿಗ್ಗೆ ನಗರದ ಒಂದು ಕಡೆ ಬೆಟ್ಟದ ಶಿಲೆಯಲ್ಲಿ ಕೆತ್ತಿದ ಸಿಂಹದ ಮೂರ್ತಿ ನೋಡಲು ಹೋದೆವು. ಒಂದು ಬೆಟ್ಟದ ಬಂಡೆಯಲ್ಲಿ ಮಲಗಿದ ಸಿಂಹದ ಮೂರ್ತಿಯನ್ನು ಕೆತ್ತಲಾಗಿದೆ. ೧೭೯೨ ರ ಫ್ರಾನ್ಸ್ ದೇಶದ ಕ್ರಾಂತಿಯಲ್ಲಿ ಪ್ರಾಣತೆತ್ತ ಸ್ವಿಸ್ ದೇಶದ ವೀರಸೈನಿಕರ ನೆನಪಿಗೆ ಇದನ್ನು ೧೮೨೧ರಲ್ಲಿ ಕೆತ್ತಲಾಗಿದೆ. ಕೆತ್ತನೆ ಕೆಲಸವೇನೊ ಚೆನ್ನಾಗಿಯೇ ಇದೆ. ಆದರೆ ಇದನ್ನು ಕೆತ್ತಿದ ಡಚ್ ದೇಶದ ಶಿಲ್ಪಿಗೆ ಪೂರ್ಣ ಸಂಭಾವನೆಯನ್ನು ಕೊಡದೇ ಸತಾಯಿಸಿದರಂತೆ. ಹೀಗಾಗಿ ಅವನು ಸಿಂಹದ ಮೂಗನ್ನು ಹಂದಿಮೂಗಿನ ತರಹ ಕಾಣುವಂತೆ ಕೆತ್ತಿದನೆಂದೂ ಪ್ರತೀತಿ. ಸೂಕ್ಷ್ಮವಾಗಿ ಗಮನಿಸಿದರೆ ಹಾಗೆ ಕಾಣುತ್ತೆ.

## ಮೌಂಟ್ ಟಿಟ್ಲಿಸ್

ಇಂಡಿಯನ್ ತಂದೂರಿ ಎಂಬ ಹೋಟೇಲಿನಲ್ಲಿ ಮಧ್ಯಾಹ್ನದ ಊಟ ಮುಗಿಸಿ ಎಂಜೆಲ್ – ಬರ್ಗ್ ಕಡೆ ಪ್ರಯಾಣ ಬೆಳೆಸಿದೆವು. ಈ ದಾರಿ ಸ್ವಲ್ಪ ಕಡಿದಾಗಿತ್ತು ಮತ್ತು ಎತ್ತರದ ವೃಕ್ಷಗಳು ನಮ್ಮನ್ನು ಸ್ವಾಗತಿಸುತ್ತಿದ್ದವು. ಆಳವಾದ ಕಂದರಗಳು, ಕೊಳಗಳು ಎದುರಾದವು. ರಸ್ತೆಗಳು ಇಲ್ಲಿ ತೀರ ಚೆನ್ನಾಗಿದ್ದರೂ ತಿರುವುಹಾಗೂ ಕಡಿದಾದ ರಸ್ತೆಗಳ ಪ್ರಯಾಣ ಪ್ರಯಾಸಕರವೆನಿಸುವುದು. ಇಂತದ್ದೇ ತಿರುವು ಮತ್ತು ಕಡಿದಾದ ರಸ್ತೆಗಳನ್ನು ನಾವು ನಮ್ಮಲ್ಲಿ ಸಿಲಿಗುರಿಯಿಂದ ಡಾರ್ಜಲಿಂಗ್‌ಗೆ ಹೋಗುವಾಗ, ಮನಾಲಿಯಿಂದ ರೊಹಟಿಂಗ್ ಪಾಸ್‌ಗೆ ಹೋಗುವಾಗ ಕಾಣುತ್ತೇವೆ.

ಮೌಂಟ್ ಟಿಟ್ಲಿಸ್ ಏರಲು ನಾವು ಎಂಜೆಲ್‌ಬರ್ಗ್‌ಗೆ ಹೋದೆವು. ಬೆಟ್ಟದ ಬುಡದಲ್ಲಿ ಮೇಲೆ ಹೋಗಲು ಟಿಕೇಟು, ಕೈಪಿಡಿಗಳು ಎಲ್ಲ ದೊರೆಯುತ್ತವೆ. ಯುರೋಪಿನ ಎಲ್ಲ ಪ್ರವಾಸಿ ತಾಣಗಳಲ್ಲಿ ಆಯಾ ಪ್ರೇಕ್ಷಣೀಯ ಸ್ಥಳಗಳ ಕುರಿತು ವಿಪುಲವಾದ ಸಾಹಿತ್ಯ ಲಭ್ಯವಾಗುತ್ತದೆ. ನೀವು ಕೊಳ್ಳುವ ಟಿಕೆಟಿನೊಂದಿಗೆ ಒಂದೊಂದು ಪ್ರತಿ ಕೈಪಿಡಿ ಕೊಟ್ಟೇ ಕೊಡುತ್ತಾರೆ. ಆಕರ್ಷಕವಾಗಿ ಚಿತ್ರಗಳೊಂದಿಗೆ ಮುದ್ರಿಸಲಾದ ಇಂತಹ ಕೈಪಿಡಿಗಳು ಆಯಾ ಸ್ಥಳಗಳನ್ನು ಸಮಗ್ರವಾಗಿ ಎಲ್ಲ



ವಿವರಗಳೊಂದಿಗೆ ಪರಿಚಯಿಸುತ್ತವೆ. ಹೀಗಾಗಿ ಪ್ರವಾಸಿಗರಿಗೆ ಒಂದು ಸ್ಥಳವನ್ನು ಸಂಪೂರ್ಣವಾಗಿ ಅರಿಯಲು ಸಾಧ್ಯವಾಗುತ್ತದೆ. ಇಂತಹ ಕೈಪಿಡಿಗಳನ್ನು ಇಂಗ್ಲೀಷ್, ಜರ್ಮನ್, ಫ್ರೆಂಚ್, ಡಚ್, ಇಟೆಲಿ ಭಾಷೆಗಳಲ್ಲಿ ಮುದ್ರಿಸಿ ಪುಕ್ಕಟೆಯಾಗಿ ಪ್ರವಾಸಿಗರಿಗೆ ಎಲ್ಲ ಕಡೆ ಸಿಗುವ ಹಾಗೆ ವ್ಯವಸ್ಥೆ ಮಾಡಲಾಗಿದೆ. ಇವುಗಳ ಮುದ್ರಣ ಕೂಡಾ ಸೊಗಸಾದುದು.

ಮೌಂಟ್ ಟಿಟ್ಲಿಸ್ ೩.೦೨೦ ಮೀ. ಎತ್ತರದ ಪರ್ವತ. ಇದನ್ನು ಒಟ್ಟು ಐದು ಹಂತಗಳಲ್ಲಿ ೪೦ ನಿಮಿಷಗಳ ಅವಧಿಯಲ್ಲಿ ಏರುವ ವ್ಯವಸ್ಥೆ ಇದೆ. ಮೂರು ಹಂತಗಳಲ್ಲಿ ಕೇಬಲ್ ಕಾರ್ ಮೂಲಕ, ಎರಡು ಹಂತಗಳಲ್ಲಿ ಲಿಫ್ಟ್ ಮೂಲಕ ನಾವು ಈ ಕೇಬಲ್‌ಕಾರು ಏರಲು ಒಳಾಂಗಣವನ್ನು ಪ್ರವೇಶಿಸಿದೆವು. ಅಲ್ಲಿ ಸಾಲಾಗಿ ಒಂದರ ನಂತರ ಒಂದು ಬರುವ, ಆರು ಜನ ಕೂಡಬಹುದಾದಂತಹ ಚೀರಾಕೃತಿಯ ಕೇಬಲ್ ಕಾರಿನೊಳಗೆ ಕೂತೆವು. ಈ ಕೇಬಲ್ ಕಾರು ಚೀರಾಕೃತಿಯ ಮುಚ್ಚು ಪೆಟ್ಟಿಗೆ. ಇದರ ಮೇಲೆ ಅಳವಡಿಸಲಾದ ಚಕ್ರವು ಬಲವಾದ ಉಕ್ಕಿನ ಹಗ್ಗಕ್ಕೆ ಲಗತ್ತಾಗಿರುತ್ತದೆ. ಈ ಉಕ್ಕಿನ ಹಗ್ಗವನ್ನು ಕೆಳಗಿನಿಂದ ಮೇಲಿನವರೆಗೆ ಹಾಕಲಾದ ಅನೇಕ ಸ್ತಂಭಗಳ ಮೇಲೆ ಎಳೆಯಲಾಗಿರುತ್ತದೆ. ಈ ಉಕ್ಕಿನ ಹಗ್ಗ, ಸ್ತಂಭಗಳು ನಮ್ಮನ್ನು ಮೇಲೆ ಒಯ್ಯುವ ಪ್ರಮುಖ ಆಧಾರಗಳು. ಈ ಕೇಬಲ್ ಕಾರುಗಳು ನೂರಾರು. ಒಂದರ ನಂತರ ಮತ್ತೊಂದು ಬರುತ್ತಲೇ ಇರುತ್ತವೆ. ನಾವು ಒಳಗೆ ಕೂಡ್ರುತ್ತಲೇ ತಾನೇ ಮುಚ್ಚಿಕೊಂಡು ಮೇಲೆ ಏರುವ ಪ್ರಯಾಣ ಪ್ರಾರಂಭವಾಗುತ್ತದೆ. ಹತ್ತು ಸಾವಿರ ಅಡಿ ಎತ್ತರದವರೆಗೆ ಹಾಕಲಾದ ಕಂಬಗಳು ಮತ್ತು ಉಕ್ಕಿನ ಹಗ್ಗ ನಮ್ಮನ್ನು ಕೇಬಲ್ ಕಾರು ಮೂಲಕ ನಿಧಾನಕ್ಕೆ ಮೇಲೆ ಒಯ್ಯತೊಡಗಿದಂತೆ ಕೆಳಗೆ ಹರಡಿಕೊಂಡ ಮನೆಗಳು, ಪುಟ್ಟ ಊರುಗಳು ತೀರ ಚಿಕ್ಕದಾಗಿ ಕಾಣತೊಡಗುತ್ತವೆ. ಕೆಳಗೆ ಮೇಯುತ್ತಿರುವ ದನಗಳ ಘಂಟೆಯ ನಿನಾದ ನಮ್ಮ ಕಿವಿ ತುಂಬುತ್ತದೆ. ಬರಬರುತ್ತ ಹಸಿರು ಬಯಲು ಮರೆಯಾಗಿ ನಾವು ಆಲ್ಪ್ಸ್ ಪರ್ವತದ ಕಡಿದಾದ ಓರೆಗಳನ್ನು, ಪದರುಗಳನ್ನು ಕಾಣತೊಡಗುತ್ತೇವೆ. ಸುಮಾರು ಐದುಸಾವಿರ ಅಡಿ ಮೇಲೆ ಏರಿದ ಕೇಬಲ್ ಕಾರು ಒಂದು ಕಡೆ ಟ್ರುಬಸ್ಕಿ ಎಂಬಲ್ಲಿ ನಿಲ್ಲುತ್ತದೆ. ಅಲ್ಲಿಗೆ ಅದರ ಯಾನ ಮುಗಿಯಿತು. ನಾವು ಒಂದು ಲಿಫ್ಟ್ ಮೂಲಕ ಸ್ವಲ್ಪ ಮೇಲೆ ಹೋಗಿ ಅಲ್ಲಿಂದ ಸುಮಾರು ೪೦– ೫೦ ಜನರು ನಿಲ್ಲಬಹುದಾದ ಮತ್ತೊಂದು ಕ್ಯಾಬಿನ್



ಮೂಲಕ ಮತ್ತೆ ಹತ್ತುಸಾವಿರ ಅಡಿ ಏರಲು ತೊಡಗುತ್ತವೆ. ಇದು ತಿರುಗುವ ಕ್ಯಾಬಿನ್. ಸುತ್ತಲೂ ಸಾವಕಾಶವಾಗಿ ತಿರುಗುವ ಕ್ಯಾಬಿನ್ನಿನಲ್ಲಿ ನಾವು ಪರ್ವತದ ವಿಹಂಗಮ ನೋಟವನ್ನು ಸವಿಯುತ್ತ ಟಿಟ್ಲಿಸ್ ಪರ್ವತದ ಮೇಲೆ ಹೋಗಿ ಇಳಿಯುತ್ತೇವೆ. ಅಲ್ಲಿಂದ ಮತ್ತೊಂದು ಲಿಫ್ಟ್ ಹತ್ತಿ ಮೇಲೆ ಹೋದರೆ ತುತ್ತತುದಿಯಲ್ಲಿರುತ್ತೇವೆ. ಸುತ್ತಲೂ ಹಿಮ ಕವಿದ ಪರ್ವತಗಳು, ಬೀಸುವ ತಂಗಾಳಿ ಬೇರೆ ಲೋಕವನ್ನೇ ಸೃಷ್ಟಿಸುತ್ತದೆ. ವೀಕ್ಷಣೆಗಾಗಿ ಮೇಲೆ ಪಾರದರ್ಶಕ ವೀಕ್ಷಣಾ ಮಂದಿರವಿದೆ. ಇಲ್ಲಿ ಕುಳಿತು ನಿಧಾನವಾಗಿ ಸುತ್ತಲಿನ ಹಿಮಾಚ್ಛಾದಿತ ಪರ್ವತಗಳ ಸವಿಯನ್ನು ಮೆಲ್ಲಬಹುದು. ಇಲ್ಲಿ ವಿವಿಧ ವಸ್ತುಗಳ ಅಂಗಡಿ, ರೆಸ್ಟೊರೆಂಟ್ ಇವೆ. ತೆರೆದ ಅಂಗಳದಲ್ಲಿ ಬೆಂಚುಗಳನ್ನು ಹಾಕಿ ವೀಕ್ಷಣೆಗೆ ಅನುಕೂಲ ಕಲ್ಪಿಸಿದ್ದಾರೆ. ಕೆಳಗೆ ಕಾಣುವ ಪರ್ವತಸಾಲುಗಳು ಅಲ್ಲಿ ಹುಟ್ಟಿ ಹರಿಯುವ ನದಿಯ ಸಪ್ಪಳವನ್ನೂ ಆಲಿಸಬಹುದು. ಹಿಮ ಹನಿಯಾಗಿ, ತೊರೆಯಾಗಿ, ನದಿಯಾಗಿ ಹರಿಯುವ ಪರಿಯನ್ನು ನೋಡಬಹುದು. ಈ 'ಗ್ಲೆಸಿಯರ್' ದಾಟಿಕೊಂಡು ಮುಂದೆ ಹೋಗಿ ವೀಕ್ಷಣಾ ಗೋಪುರದ ಮೇಲೆ ನಿಂತು ನೋಡಿದರೆ ವಿಶಾಲವಾಗಿ ಕಣ್ಣು ಹರಿಯುವವರೆಗೆ ನಿಶ್ಚಲವಾಗಿ ಮಲಗಿರುವ ಶ್ವೇತವರ್ಣದ ಪರ್ವತಗಳು ಬಿಸಿಲಿಗೆ ಹೊಳೆಯುತ್ತಿರುತ್ತವೆ. ಆಲ್ಪ್ಸ್ ಪರ್ವತಗಳಲ್ಲಿ 'ಮ್ಯಾಟರ ಹಾರ್ನ' ಎಂಬುದು ೧೪,೬೯೨ ಅಡಿ ಅತಿ ಎತ್ತರದ ಶಿಖರವಾಗಿದೆ. ಆಲ್ಪ್ಸ್ ಪರ್ವತದ ಮೇಲೆ ಬರ್ಫ್ ಕೊರೆದು ಗವಿಗಳನ್ನು ಕೆತ್ತಲಾಗಿದೆ. ಇವುಗಳ ಒಳಗೆ ಹೋಗುವದೊಂದು ಹೊಸ ಅನುಭವ. ಸುತ್ತಲೂ, ಕಾಲಲ್ಲೂ

ಬರ್ಫ್. ಬರ್ಫ ಮೇಲೆ ನಡೆಯುತ್ತ ಈ ಗವಿಗಳ ಮೂಲಕ ಹಾಯ್ದು ಒಂದು ಸುತ್ತು ಬಂದರೆ ಹಿಲೇರಿ, ತೇನ್‌ಸಿಂಗರು ಮೌಂಟ್ ಎವರೆಸ್ಟ್ ಏರಿಳಿದ ಅನುಭವ ನಮಗೂ ಆದಂತಾಗುತ್ತದೆ.

ನಾವು ಮೌಂಟ್ ಟಿಟ್ಲಿಸ್ ಮುಂದುಗಡೆ ಸಾಗಿ ಇನ್ನೊಂದಿಷ್ಟು ಸಾಹಸ ಮಾಡಲೆಂದು ಏಳು ಯೂರೊಗಳ ಒಂದು ಟಿಕೆಟು ತೆಗೆಯಿಸಿ ಮತ್ತೊಂದು ತೆರೆದ ಕೇಬಲ್ ಕಾರೊಳಗೆ ಕೂತು ಸುಮಾರು ೨೦೦ಮೀ. ಮುಂದೆ ಹೋದೆವು. ಅಲ್ಲಿ ಹಿಮದ ಆಟ ಆಡಲು ಅವಕಾಶ ಕಲ್ಪಿಸಲಾಗಿದೆ. ಒಂದು ಕಡೆ 'ಸ್ಕಿಯಿಂಗ್' ಮತ್ತೊಂದೆಡೆ ಜಾರುಬಂಡಿಯಾಟ. ಅಲ್ಲಿ ಮೋಟಾರು ಟೈರುಗಳಲ್ಲಿ ಕೂತು ಸುಮಾರು ೧೦೦ಮೀ. ಆಳಕ್ಕೆ ಸರ್ರನೆ ರೋಮಾಂಚಕವಾಗಿ ಹಿಮದ ಮೇಲೆ ಜಾರಿ ಕೆಳಗೆ ಹೋಗಬಹುದು. ಹೀಗೆ ಟೈರುಗಳಲ್ಲಿ ಕೂತು ಸರ್ರನೆ ಒಬ್ಬರನ್ನೊಬ್ಬರು ಕಾಲಿನಿಂದ ತಳ್ಳುತ್ತ ಕೆಳಗೆ ರಭಸದಲ್ಲಿ ಬಂದು ಬೀಳುವ ಪರಿ ತೀರ ಆಹ್ಲಾದಕರ. ಮತ್ತೆ ಮೇಲೆ ಹತ್ತಲು ನಾವು ಶ್ರಮ ಪಡಬೇಕಾಗಿಲ್ಲ. ಅಲ್ಲಿಂದ ಒಂದು ಎಸ್ಕಲೇಟರ್ ತರಹ ಬೆಲ್ಟ್ ಹಾಕಿ ಮೇಲೇರಲು ವ್ಯವಸ್ಥೆ ಕಲ್ಪಿಸಿದ್ದಾರೆ. ಅದರ ಮೇಲೆ ನಿಂತರಾಯಿತು, ಪ್ರಯಾಸವಿಲ್ಲದೆ ಮೇಲೆ ಬರುತ್ತೇವೆ. ಇಲ್ಲಿ ಸ್ಕಿಯಿಂಗ್ ಕೂಡಾ ಮಾಡಬಹುದು.

ಮೌಂಟ್ ಟಿಟ್ಲಿಸ್‌ದಲ್ಲಿ ಕೆಲ ಪರ್ವತಗಳನ್ನು ಗಮನಿಸಿದಾಗ ಅವು ತೀರ ಶಿಥಿಲವಾದ ಗರಿಸಿನಿಂದ ಕೂಡಿದ ಪರ್ವತಗಳಂತೆ ತೋರುತ್ತವೆ. ಆಗಾಗ ಗರಸು ಉದುರುವುದನ್ನು ನೋಡಬಹುದು. ಇವು ವರ್ಷದ ಬಹುಭಾಗ ಹಿಮಾಚ್ಛಾದಿತವಾಗಿರುತ್ತವೆ. ನಾವು ಸಾಕಷ್ಟು ಹೊತ್ತು ಮೇಲೆ ಕಳೆದು ಹಿಮದೊಂದಿಗೆ ಬೆರೆತು ಆಟವಾಡಿ ತಣಿದು ತಳ ಕಾಣಲು ಮತ್ತೆ ಕೇಬಲ್ ಕಾರ್ ಏರಿದೆವು. ಮನಸ್ಸನ್ನು ಒಂದು ರೀತಿಯ ತೃಪ್ತಿ ಆವರಿಸಿತ್ತು. ಆದರೂ ಸೃಷ್ಟಿಯ ಇಂತಹ ಮೇರು ಪರ್ವತಗಳೆದುರು ಮನುಷ್ಯಜೀವಿ ಎಷ್ಟು ಯಃಕಶ್ಚಿತ್ ಎಂಬ ಭಾವನೆ ಬಾರದೇ ಇರದು. ಇಂತಹ ಪರ್ವತಗಳನ್ನು ಸವಿಯಲು ಮಾನವ ನಿರ್ಮಿಸಿರುವ ಸಾಧನ, ಸಲಕರಣೆ, ತಾಂತ್ರಿಕ ಕೌಶಲ್ಯ ಕಂಡು ಆಶ್ಚರ್ಯವಾಗದೇ ಇರದು.

ಕೇಬಲ್ ಕಾರಿನಲ್ಲಿ ನಾವು ಕೆಳಗೆ ಬರುವಾಗ ಕೆಲವು ಸಾಹಸಿಗಳು ಕೇಬಲ್ ಕಾರಿನಿಂದ ಪ್ಯಾರಾಚುಟ್ ಕಟ್ಟಿಕೊಂಡು ಜಿಗಿಯುವುದನ್ನು ಹಾಗೂ ಅವರು ತೇಲುತ್ತ ಭೂಸ್ಪರ್ಶ ಮಾಡುವುದನ್ನು ನೋಡಿದೆವು. ಅದಕ್ಕೆ ಬಂಗಿ ಜಂಪಿಗ್ (Bungee jumping) ಎಂದು ಕರೆಯುತ್ತಾರೆ. ಇಲ್ಲಿ ಸೈಕಲ್ ಮೇಲೆ ಪರ್ವತಾರೋಹಣ, ಟ್ರೆಕ್ಕಿಂಗ್ ಎಲ್ಲ ಸಾಹಸಗಳಿಗೆ ಅವಕಾಶ ಉಂಟು. ಕೈಕಾಲುಗಳು, ಮನಸ್ಸು ಗಟ್ಟಿ ಇರಬೇಕಷ್ಟೆ.

ಕೆಳಗಿಳಿದು ಬಂದು ಎಲ್ಲರೂ ಸಮಾಧಾನದ ನಿಟ್ಟುಸಿರು ಬಿಟ್ಟೆವು. ಒಂದು ರೀತಿಯ ಹೇಳಲಾರದ ಆನಂದ ಮೈಮನಗಳಲ್ಲಿ ತುಂಬಿಕೊಂಡಿತ್ತು. ಯುರೋಪಿನ ಚಳಿಗೆ ಹೆದರಿ ಹೊರಲಾರದ ಆನಂದ ಮೈಮನಗಳಲ್ಲಿ ತುಂಬಿಕೊಂಡಿತ್ತು. ಯುರೋಪಿನ ಚಳಿಗೆ ಹೆದರಿ ಹೊರಲಾರದ ಹೊರೆಹೊತ್ತು ಉಣ್ಣೆಯ ಬಟ್ಟೆ ತಂದಿದ್ದವರಿಗೆ ಮೊದಲಬಾರಿಗೆ ಅವುಗಳ ಉಪಯೋಗವಾದದ್ದು ಸಂತಸ ತಂದಿತ್ತು. ನಾವು ಬಸ್ಸನ್ನೇರಿ ಸಲ್ಪ ದೂರ ಕ್ರಮಿಸಿ ಏಂಜಲ್ ಬರ್ಗ್ ಪಟ್ಟಣದ ಹೊಟೇಲ್ ರಾಮ್ಡಾ ಟ್ರೆಪ್ ಎಂಬಲ್ಲಿ ಉಳಿದುಕೊಂಡೆವು. ನಮ್ಮ ಪ್ರವಾಸಿ ಸಂಸ್ಥೆಯವರು ಇಲ್ಲಿ ಭಾರತೀಯ ಅಡುಗೆ ತಯಾರಿಸಿದ್ದರು. ಹೀಗಾಗಿ ಎಲ್ಲರೂ ಅಂದು ಚೆನ್ನಾಗಿ ತಿಂದುಂಡು ನಿದ್ರೆ ಹೋದರು.

ಸಾಧಾರ

## ಚಟುವಟಿಕೆಗಳು

❑ **ಉತ್ತರಿಸಿರಿ**

- ಸ್ವಿಜರ್‌ಲೇಂಡಿನ ಸ್ಕಫ್ಹಾಸನ್ ಜಲಪಾತ ನಮ್ಮ ಗೋಕಾಕ ಜಲಪಾತಕ್ಕಿಂತ ಹೇಗೆ ಭಿನ್ನವಾಗಿದೆ?
- ಜ್ಯುರಿಕ್ ನಗರದ ಸುರಂಗ ಮಾರ್ಗಗಳ ವೈಶಿಷ್ಟ್ಯಗಳೇನು?
- ಸ್ವಿಜರ್ ಲೇಂಡಿನ ಪರ್ವತಗಳು ನಮ್ಮ ದೇಶದ ಪರ್ವತಗಳಿಗಿಂತ ಹೇಗೆ ಭಿನ್ನವಾಗಿವೆ?
- ಯುರೋಪಿನ ಪ್ರವಾಸ ತಾಣಗಳಲ್ಲಿ ಪ್ರೇಕ್ಷಣೀಯ ಸ್ಥಳಗಳ ಕುರಿತು ಸಿಗುವ ಕೈಪಿಡಿಯ ಪ್ರಯೋಜನಗಳೇನು?
- ಕೇಬಲ್ ಕಾರು ಪ್ರಯಾಣವು ಮೌಂಟ್ ಎವರೆಸ್ಟ್ ಏರಿಳಿದ ಅನುಭವ ನೀಡುತ್ತದೆ ಎಂದು ಹೇಳಲು ಕಾರಣವೇನು?

## ❑ ಪತ್ರ ಬರೆಯಿರಿ

ನೀವೂ ಪ್ರವಾಸಕ್ಕೆ ಹೋಗಿರಬಹುದಲ್ಲವೇ? ಅದು ಯಾವ ಅನುಭವವನ್ನು ನಿಮಗೆ ನೀಡಿದೆ? ಈ ಅನುಭವವನ್ನು ಇತರರೊಂದಿಗೆ ಹಂಚಿಕೊಂಡಿರುವಿರಾ? ನಿಮ್ಮ ಅನುಭವಗಳನ್ನು ವಿವರಿಸಿ ಗೆಳೆಯನಿಗೆ ಪತ್ರ ಬರೆಯಿರಿ.

## ❑ ಹೊಂದಿಸಿ ಬರೆಯಿರಿ

| ಅ | ಆ | ಇ |
|---|---|---|
| ಸ್ಕಫ್ಲಾಸನ್ | ಲಿಮ್ಮತ್ ನದಿ | ಲುಜ್ರೇನ ನಗರ |
| ಜ್ಯುರಿಕ್ ನಗರ | ಎಂಜೆಲ್‌ಬರ್ಗ್ | ಸ್ಕೇಯಿಂಗ್ |
| ಮೌಂಟ್ ಟಿಟ್ಲಿಸ್ | ರೈನ್‌ನದಿ | ಬ್ಯಾಂಕಿಂಗ್‌ಉದ್ಯಮ |
| ಸಿಂಹದ ಮೂರ್ತಿ | ಹಿಮಾಚ್ಛಾದಿತ ಪರ್ವತ | ಕೇಬಲ್ ಕಾರು |
| ಸಾಹಸ | ಡಚ್ ಶಿಲ್ಪಿ | ಜಲಪಾತ |

## ❑ ಈ ಕೆಳಗಿನ ವಾಕ್ಯಗಳನ್ನು ಸರಿಮಾಡಿ ಬರೆಯಿರಿ

- ಜಲಪಾತದಿಂದ ತುಂತುರು ಹನಿ ಮಂಜು ಉಂಟಾಗುವ ಮತ್ತು ನಯನ ಮನೋಹರ
- ದೊಡ್ಡ ಕಾರಂಜಿ ಇದೆ ಮಧ್ಯೆ ಸರೋವರದ
- ಸೇತುವೆ ಈ ಮರದ ಶತಮಾನ ಹಲವು ಕಂಡಿದೆ
- ವೀಕ್ಷಣಾ ವೀಕ್ಷಣೆಗಾಗಿ ಪಾರದರ್ಶಕ ಮೇಲೆ ಮಂದಿರವಿದೆ

## ❑ ಕನ್ನಡದ ಅಂಕೆಗಳನ್ನು ತಿಳಿಯಿರಿ

- ಮಾದರಿಯಂತೆ ಕನ್ನಡ ಅಂಕೆಗಳಿಗೆ ಬದಲಾಗಿ ಇಂಗ್ಲೀಷ್ ಅಂಕೆಗಳನ್ನು ಬಳಸಿರಿ.

ಮಾದರಿ:

'ಮ್ಯಾಟರ ಹಾರ್ನ' ಎಂಬುದು ೧೪೭೦೫ ಅಡಿ ಎತ್ತರದ ಶಿಖರವಾಗಿದೆ.

'ಮಾಟರ ಹಾರ್ನ' ಎಂಬುದು 14705 ಅಡಿ ಎತ್ತರದ ಶಿಖರವಾಗಿದೆ.

- ಜ್ಯುರಿಕ್ ನಗರ ಸಮುದ್ರ ಮಟ್ಟದಿಂದ ೪೦೦ ಮೀಟರ್ ಎತ್ತರದಲ್ಲಿದೆ.
- ಅಲ್ಲಿ ೪೦–೫೦ ಆಗುವಷ್ಟು ಜನರು ನಿಲ್ಲಬಹುದಾದ ಕ್ಯಾಬಿನ್ ಇದೆ.
- ನಮಗೆ ೧೯೪೭ ಆಗೋಸ್ತು ೧೫ ರಂದು ಸ್ವಾತಂತ್ರ್ಯ ಲಭಿಸಿತು.
- ಆ ಜಲಪಾತವು ೬೮ ಅಡಿ ಎತ್ತರದಿಂದ ಕೆಳಕ್ಕೆ ಧುಮುಕುತ್ತಿದೆ.

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |


ಆರೋಗ್ಯಕರ ಶರೀರದಲ್ಲಿ ಮಾತ್ರ ಆರೋಗ್ಯಕರ ಮನಸ್ಸು ಇರಲು ಸಾಧ್ಯ . ಕ್ರೀಡೆಗಳು ಉತ್ತಮವಾದ ಆರೋಗ್ಯವನ್ನು ರೂಪಿಸಲು ಸಹಾಯ ಮಾಡುತ್ತವೆ. ಕ್ರೀಡೆಯಿಂದ ಪರಸ್ಪರ ಸಹಕಾರ ಮನೋಭಾವ, ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಗುಣ, ನಾಯಕತ್ವಗುಣ ಮುಂತಾದವುಗಳು ಬೆಳೆಯುತ್ತವೆ.

ಕ್ರೀಡೆಗಳು ಮನುಷ್ಯನ ದೇಹಕ್ಕೆ ಹುರುಪು ನೀಡಿ, ಮನಸ್ಸಿನ ದುಗುಡವನ್ನು ಕಳೆದು, ಉತ್ಸಾಹವನ್ನು ಉಂಟುಮಾಡುತ್ತವೆ. ಪ್ರತಿಯೊಬ್ಬ ವ್ಯಕ್ತಿಯ ಆರೋಗ್ಯ ಉತ್ತಮವಾಗಿರಬೇಕಾದರೆ ಸರಿಯಾದ ಪ್ರಮಾಣದಲ್ಲಿ ಶ್ರಮ ಮತ್ತು ಶಕ್ತಿಯ ಬಳಕೆಯಾಗಬೇಕು. ದೇಹದ ಆರೋಗ್ಯದೊಂದಿಗೆ ಮನಸ್ಸಿನ ಆರೋಗ್ಯವೂ ಚೆನ್ನಾಗಿರಬೇಕು. ಇವೆರಡೂ ಸಮರಸವಾಗಿರಬೇಕಾದರೆ ಆಟಗಳು ಬಲು ಮುಖ್ಯವಾದ ಸಾಧನಗಳಾಗಿವೆ. ಆಟ ಮತ್ತು ವ್ಯಾಯಾಮಗಳಿಂದ ಆನಂದ ಸಿಗುವುದರೊಂದಿಗೆ ಮನಸ್ಸು ಹಗುರವಾಗಿ ಉಲ್ಲಸಿತವಾಗಿರುತ್ತದೆ.

ಆಟದಲ್ಲಿ ಒಳಾಂಗಣ ಆಟಗಳು (Indoor Games) ಮತ್ತು ಹೊರಾಂಗಣ ಆಟಗಳು (Outdoor Games) ಎಂಬ ಎರಡು ವಿಭಾಗಗಳಿವೆ. ಕೇರಂ, ಟೇಬಲ್‌ಟೆನ್ನಿಸ್, ಚದುರಂಗ, ಚೆನ್ನೆಮಣೆ, ಹಾವು ಏಣಿಯಾಟ ಮುಂತಾದವು ಒಳಾಂಗಣ ಕ್ರೀಡೆಗಳಾಗಿವೆ. ಫುಟ್‌ಬಾಲ್, ಕ್ರಿಕೆಟ್, ಟೆನ್ನಿಸ್, ಬ್ಯಾಡ್ಮಿಂಟನ್, ಹಾಕಿ, ಕಬಡ್ಡಿ, ಬಾಸ್ಕೆಟ್‌ಬಾಲ್ ಇತ್ಯಾದಿಗಳು ಹೊರಾಂಗಣ ಕ್ರೀಡೆಗಳಾಗಿವೆ. ಇತ್ತೀಚೆಗಿನ ದಿನಗಳಲ್ಲಿ ಕೆಲವು ಕ್ರೀಡೆಗಳು ಹೊರಾಂಗಣ ಕ್ರೀಡೆಗಳಾಗಿ ಮಾರ್ಪಾಡುತ್ತಿವೆ. ಹೊರಾಂಗಣ ಕ್ರೀಡೆಗಳು ಹೆಚ್ಚು ಜನಪ್ರಿಯವಾಗಿವೆ.

ಜಗತ್ತಿನ ವಿವಿಧ ರಾಷ್ಟ್ರಗಳ ಉತ್ತಮ ಕ್ರೀಡಾ ಪಟುಗಳು ಭಾಗವಹಿಸುವ ಹಲವಾರು ಕ್ರೀಡೋತ್ಸವಗಳಿವೆ. ಏಷ್ಯನ್ ಕ್ರೀಡಾಕೂಟ (Asian Games), ಕಾಮನ್‌ವೆಲ್ತ್ ಕ್ರೀಡಾಕೂಟ (Commonwealth Games) - ಇವೆರಡು ನಿರ್ದಿಷ್ಟ ರಾಷ್ಟ್ರಗಳು ಭಾಗವಹಿಸುವ ಕ್ರೀಡಾಕೂಟಗಳಾದರೆ, 'ಒಲಿಂಪಿಕ್ಸ್' (Olympics) ಎಂಬುದು ವಿಶ್ವದ ಸಮಗ್ರ ರಾಷ್ಟ್ರಗಳು ಭಾಗವಹಿಸುವ ಒಂದು ಮಹಾಕ್ರೀಡೋತ್ಸವವಾಗಿದೆ. ರಾಷ್ಟ್ರೀಯ ಕ್ರೀಡಾಕೂಟವು ದೇಶಮಟ್ಟದಲ್ಲಿ ನಡೆಯುತ್ತದೆ.

ಮೊತ್ತಮೊದಲ ಒಲಿಂಪಿಕ್ ಕ್ರೀಡೋತ್ಸವವು ಕ್ರಿ.ಪೂ. 776ರಲ್ಲಿ, ಗ್ರೀಸ್‌ದೇಶದ ಒಲಿಂಪಿಯಾ ಎಂಬ ನಗರದಲ್ಲಿ ನಡೆಯಿತು ಎಂಬುದರ ಕುರಿತು ಚಾರಿತ್ರಿಕ ದಾಖಲೆಗಳಿವೆ. ಈ ಕ್ರೀಡೋತ್ಸವದ ಸಂದರ್ಭದಲ್ಲಿ, ಪ್ರೇಕ್ಷಕ ವರ್ಗದ ಹರ್ಷೋದ್ಗಾರದ ನಡುವೆ, ಓಟದ ಸ್ಪರ್ಧೆಯಲ್ಲಿ 'ಕೊರಬಸ್' ಎಂಬವನನ್ನು ವಿಜೇತ ಎಂದು ಘೋಷಿಸಲಾಯಿತು. ಈತ ವೃತ್ತಿಯಲ್ಲಿ ಅಡುಗೆಯವನಾಗಿದ್ದನು. ಮೊದಮೊದಲು ಕೇವಲ ಓಟಗಳಿಗೆ ಸೀಮಿತವಾಗಿದ್ದ ಒಲಿಂಪಿಕ್ಸ್‌ಗೆ ಕ್ರಮೇಣ ಚಕ್ರ ಎಸೆತ, ರಥ ಓಡಿಸುವ ಸ್ಪರ್ಧೆ ಮೊದಲಾದ ಬಯಲು ಸ್ಪರ್ಧೆಗಳು ಸೇರ್ಪಡೆಯಾದವು. ಕೆಲವು ವರ್ಷಗಳ ತರುವಾಯ ಸ್ತ್ರೀಯರಿಗೂ ಒಲಿಂಪಿಕ್ಸಿನಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಕ್ರಿ. ಪೂ. 264ರಲ್ಲಿ ಮೆಸಿಡೋನಿಯಾದ ಮಹಿಳೆ



ಬೆಲಿಸಿಷೆ ಎಂಬವಳು ರಥ ಓಡಿಸುವ ಸ್ಪರ್ಧೆಯಲ್ಲಿ ವಿಜೇತೆಯಾದಳು.

ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತಿದ್ದ ಒಲಿಂಪಿಕ್ಸನ್ನು ಥಿಯೋಡಿಸಿಸ್ ಎಂಬ ರೋಮನ್ ದೊರೆ ಕ್ರಿ. ಶ 393ರಲ್ಲಿ ಒಮ್ಮೆ ನಿಲ್ಲಿಸಿದ್ದನು. ಕ್ರಿ. ಶ. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಒಲಿಂಪಿಕ್ಸಿನ ಪುನರುತ್ಥಾನವಾಯಿತು. ಶಾರೀರಿಕ ಸಂಪತ್ತಿಗೆ ಮಹತ್ವಕೊಟ್ಟ ಗ್ರೀಕ್ ಆದರ್ಶದಿಂದ ಪ್ರೇರಿತನಾದ, ಫ್ರಾನ್ಸ್ ದೇಶದ ಪೀಯರ್ ಡಿ ಕುಬರ್ಟಿನ್ ಎಂಬವನ ನೇತೃತ್ವದಲ್ಲಿ ಸ್ಥಾಪಿತವಾದ ಜಾಗತಿಕ ಒಲಿಂಪಿಕ್ಸ್ ಸಮಿತಿಯು ಈ ಉತ್ಸವವನ್ನು ಪುನರುಜ್ಜೀವನಗೊಳಿಸಿತು. ಕ್ರಿ. ಶ. 1896ರಲ್ಲಿ ಗ್ರೀಸ್ ದೇಶದ ಅಥೇನ್ಸ್ ಎಂಬಲ್ಲಿ ಒಲಿಂಪಿಕ್ ಕ್ರೀಡೋತ್ಸವ ಪುನರಾರಂಭಗೊಂಡಿತು. ಇದು ಆಧುನಿಕ ಒಲಿಂಪಿಕ್ಸಿಗೆ ನಾಂದಿಹಾಡಿತು.

ಎರಡು ಮಹಾಯುದ್ಧಗಳ ಪರಿಣಾಮವಾಗಿ ಕ್ರಿ. ಶ 1916, 1940, 1944ರಲ್ಲಿ ನಡೆಯಬೇಕಾಗಿದ್ದ ಒಲಿಂಪಿಕ್ ಕ್ರೀಡೋತ್ಸವಗಳು ಜರಗಲಿಲ್ಲ. ಆ ಬಳಿಕ 1948ರಲ್ಲಿ ಒಲಿಂಪಿಕ್ಸ್ ಉತ್ಸವವು ಇಂಗ್ಲೆಂಡ್ ದೇಶದ ಲಂಡನ್ ನಗರಿಯಲ್ಲಿ ಪುನಃ ಪ್ರಾರಂಭವಾಯಿತು. ಅಲ್ಲಿಂದ ಮುಂದೆ ಯಾವುದೇ ಅಡೆತಡೆಯಿಲ್ಲದೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತಿದೆ. ಜಾಗತಿಕ ಒಲಿಂಪಿಕ್ಸ್ ಸಮಿತಿ (IOC)ಯ ಮುಖ್ಯ ಕಾರ್ಯಾಲಯವು ಸ್ವಿಜರ್ಲೆಂಡಿನ 'ಮಾನರೇಪಾಸ್' ಎಂಬಲ್ಲಿದೆ. ಪ್ರಥಮ ಆಧುನಿಕ ಒಲಿಂಪಿಕ್ಸಿನಲ್ಲಿ ಹದಿಮೂರು ದೇಶಗಳು ಭಾಗವಹಿಸಿದ್ದು, ಹತ್ತು ವಿಧದ ಕ್ರೀಡೆಗಳಿದ್ದವು. ಅನಂತರ ಒಲಿಂಪಿಕ್ಸಿನಲ್ಲಿ ಭಾಗವಹಿಸುವ ದೇಶಗಳ ಮತ್ತು





ಕ್ರೀಡೆಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಬಿಳಿಯ ಬಣ್ಣದ ಹಿನ್ನೆಲೆಯಲ್ಲಿ, ಒಂದರೊಳಗೊಂದು ಸೇರಿರುವ ಐದು ಬಳೆಗಳ ಬಣ್ಣ ನೀಲಿ, ಹಳದಿ, ಕಪ್ಪು, ಹಸಿರು ಮತ್ತು ಕೆಂಪು. ಇವು ಏಷಿಯ, ಯುರೋಪ್, ಆಸ್ಟ್ರೇಲಿಯ, ಆಫ್ರಿಕ ಮತ್ತು ಅಮೇರಿಕ ಭೂಖಂಡಗಳನ್ನು ಸಂಕೇತಿಸುತ್ತವೆ. ಒಲಿಂಪಿಕ್ಸ್ ಕ್ರೀಡಾ ಧ್ವಜವು ಜಾಗತಿಕ ಐಕ್ಯದ ಸಂಕೇತವಾಗಿದೆ. 'ಇನ್ನೂ ವೇಗವಾಗಿ, ಇನ್ನೂ ಎತ್ತರವಾಗಿ, ಇನ್ನೂ ಬಲಯುತವಾಗಿ' ಎಂಬುದು ಒಲಿಂಪಿಕ್ಸಿನ ಧ್ಯೇಯವಾಕ್ಯವಾಗಿದೆ.

ಕ್ರಿ. ಶ. 1896ರಿಂದಲೇ ಜಾಗತಿಕ ಮಟ್ಟದಲ್ಲಿ ಒಲಿಂಪಿಕ್ಸ್ ನಡೆಯುತ್ತಿದ್ದರೂ ಭಾರತೀಯರು ಪ್ರಪ್ರಥಮವಾಗಿ 1928ರಲ್ಲಿ ಭಾಗವಹಿಸಿದರು. ಆಮ್‌ಸ್ಟರ್ ಡಾಮ್ ಎಂಬಲ್ಲಿ ನಡೆದ ಒಲಿಂಪಿಕ್ಸಿನಲ್ಲಿ ಭಾರತದ ಹಾಕಿ ತಂಡ ಬಂಗಾರದ ಪದಕವನ್ನು ಗಳಿಸಿತು. ಮುಂದೆ 1952ರ ಹೆಲ್ಸಿಂಕಿ, 1956 ಮೆಲ್ಬೋರ್ನ್, 1964ರ ಟೋಕಿಯೊ, 1980ರ ಮಾಸ್ಕೊ – ಒಲಿಂಪಿಕ್ಸ್‌ಗಳಲ್ಲಿ ಭಾರತವು ಹಾಕಿಯಲ್ಲಿ ಚಿನ್ನದ ಪದಕ ಗೆದ್ದರೆ, 1960ರ ರೋಮ್ ಒಲಿಂಪಿಕ್ಸಿನಲ್ಲಿ ಬೆಳ್ಳಿಯ ಪದಕ ಮಾತ್ರ ಗಳಿಸಿತ್ತು. ಭಾರತದ ಹಾಕಿ ಕ್ರೀಡಾಕ್ಷೇತ್ರವು 'ಹಾಕಿ ಮಾಂತ್ರಿಕ' ಧ್ಯಾನ್‌ಚಂದರಿಂದ ತೊಡಗಿ, ಅಜಿತ್‌ಪಾಲ್‌ಸಿಂಗ್ ಮತ್ತು ಇತ್ತೀಚಿನ ಧನರಾಜ್ ಪಿಳ್ಳೆಯ ವರೆಗೆ ಅನೇಕ ಪ್ರತಿಭಾನ್ವಿತ ಆಟಗಾರರನ್ನು ಕಂಡಿದೆ. 1984ರಲ್ಲಿ ಅಮೇರಿಕದ ಲಾಸ್ ಏಂಜಲೀಸ್‌ದಲ್ಲಿ ಜರಗಿದ ಒಲಿಂಪಿಕ್ಸಿನಲ್ಲಿ ಭಾರತದ 'ಓಟದ ರಾಣಿ' ಪಿ. ಟಿ. ಉಷಾ ಭಾಗವಹಿಸಿದ್ದರು. ಅವರು ಓಟದ ಸ್ಪರ್ಧೆಯಲ್ಲಿ ಅಂತಿಮ ಹಂತ ತಲಪಿದ ಮೊದಲ ಭಾರತೀಯ ವನಿತೆ ಎಂಬ ಖ್ಯಾತಿಗೆ ಪಾತ್ರರಾದರು. ಕೇವಲ ಕೂದಲೆಳೆಯ ಅಂತರದಿಂದ ಅವರು ಕಂಚಿನ ಪದಕವನ್ನು ಕಳೆದು ಕೊಳ್ಳಬೇಕಾಯಿತು. 1996ರ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ



ಭಾರತದ ಲಿಯಾಂಡರ್ ಪೇಸ್ ಟೆನಿಸ್ ನಲ್ಲಿ ಮತ್ತು 2000ದ ಸಿಡ್ನಿ ಒಲಿಂಪಿಕ್ಸಿನಲ್ಲಿ ಭಾರತದ ಕರ್ಣಂ ಮಲ್ಲೇಶ್ವರಿ 'ಭಾರ ಎತ್ತುವಿಕೆ'ಯಲ್ಲಿ ಕಂಚಿದ ಪದಕ ಗಳಿಸಿದರು. 2008 ಬೀಜಿಂಗ್ ಒಲಿಂಪಿಕ್ಸ್‌ನ 10ಮೀ ಏರ್‌ರೈಫಲ್ ಶೂಟಿಂಗ್ ವಿಭಾಗದಲ್ಲಿ ಅಭಿನವ್ ಬಿಂದ್ರ ಅವರು ಚಿನ್ನದ ಪದಕಗಳಿಸಿದರು. 2012 ಲಂಡನ್ ಒಲಿಂಪಿಕ್ಸ್‌ನಲ್ಲಿ ಸಾಂಪ್ರದಾಯಿಕ ಕುಸ್ತಿ ಸ್ಪರ್ಧೆಯಲ್ಲಿ ಸುಶೀಲ್ ಕುಮಾರ್ ಅವರು ಬೆಳ್ಳಿ ಪದಕ, ಬಾಕ್ಸಿಂಗ್‌ನಲ್ಲಿ ಮೇರಿಕಾಮ್ ಅವರು ಬೆಳ್ಳಿ ಪದಕವನ್ನು ಪಡೆದಿದ್ದಾರೆ. ನೂರುಕೋಟಿ ಜನಸಂಖ್ಯೆ ದಾಟಿರುವ ಭಾರತದಂತಹ ಬೃಹತ್ ರಾಷ್ಟ್ರಕ್ಕೆ ಕೇವಲ ಒಂದೆರಡು ಪದಕ ಗೆಲ್ಲುವ ಸಾಧನೆ ಹೇಳಿಕೊಳ್ಳುವಂತಹುದ್ದಲ್ಲ. ಸೂಕ್ತ ತರಬೇತಿ, ಉತ್ತಮ ಅಭ್ಯಾಸ ಹಾಗೂ ಪ್ರೋತ್ಸಾಹಗಳ ಮೂಲಕ ಮುಂಬರುವ ಒಲಿಂಪಿಕ್ ಕ್ರೀಡೋತ್ಸವಗಳಲ್ಲಿ ಹೆಚ್ಚಿನ ಪದಕಗಳನ್ನು ಗಳಿಸಲು ಕಠಿಣ ಪ್ರಯತ್ನ ನಡೆಸಬೇಕಾಗಿದೆ.

ಜಗತ್ತಿನ ಕ್ರೀಡೆಗಳ ಇತಿಹಾಸದಲ್ಲಿ ಒಲಿಂಪಿಕ್ಸ್ ಆಟಗಳು ಹೊಂದಿರುವ ಮಹತ್ವ ಹಾಗೂ ಪ್ರಭಾವದ ಪರಿಣಾಮವಾಗಿ ಏಷ್ಯಾ ಖಂಡದ ದೇಶಗಳಲ್ಲಿ ಏಷ್ಯನ್ ಕ್ರೀಡಾಕೂಟವನ್ನು ನಡೆಸುವುದಕ್ಕೆ ಸ್ಫೂರ್ತಿ ಉಂಟಾಯಿತು. ಕ್ರಿ.ಶ. 1947ರಲ್ಲಿ ದೆಹಲಿಯಲ್ಲಿ 'ಏಷ್ಯನ್ ರಿಲೇಶನ್ಸ್ ಕಾನ್‌ಫರೆನ್ಸ್' ಮೊತ್ತಮೊದಲಾಗಿ 'ಏಷ್ಯನ್ ಗೇಮ್ಸ್'ನ ಯೋಜನೆಯನ್ನು ಹಾಕಿಕೊಂಡಿತು.

ಇದರ ಪರಿಣಾಮವಾಗಿ 1949ರಲ್ಲಿ ಏಷ್ಯನ್ ಗೇಮ್ಸ್ ಫೆಡರೇ ಶನ್ ರೂಪುಗೊಂಡಿತ್ತು ಮೊತ್ತಮೊದಲ ಏಷ್ಯನ್ 1951ರಲ್ಲಿ ನವದೆಹಲಿಯಲ್ಲಿ ನಡೆಯಿತು. ಇದರಲ್ಲಿ ಹನ್ನೊಂದು ರಾಷ್ಟ್ರಗಳು ಭಾಗವಹಿಸಿದ್ದವು. ಏಷ್ಯನ್ ಗೇಮ್ಸ್ ನಿಯಮಾವಳಿ ಪ್ರಕಾರ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಕ್ರೀಡಾಕೂಟವನ್ನು ನಡೆಸಲಾಗುತ್ತದೆ. ಹೆಸರೇ ಸೂಚಿಸುವಂತೆ ಏಷ್ಯಾಖಂಡಕ್ಕೆ ಒಳಪಡುವ ರಾಷ್ಟ್ರಗಳು ಮಾತ್ರ ಈ ಕ್ರೀಡೋತ್ಸವದಲ್ಲಿ ಪಾಲ್ಗೊಳ್ಳಬಹುದು. 2002 ಏಷ್ಯಾಡ್ ಕೊರಿಯಾ ದೇಶದ ಬೂಸನ್ ನಗರದಲ್ಲಿ ನಡೆಯಿತು.

ರಾಷ್ಟ್ರೀಯ ಕ್ರೀಡಾಕೂಟ ಭಾರತದಲ್ಲಿ ಪ್ರತಿವರ್ಷ ನಡೆಯುತ್ತದೆ. ರಾಷ್ಟ್ರೀಯ ಕ್ರೀಡಾಸಂಸ್ಥೆ ಕ್ರಿ. ಶ. 1961ರಲ್ಲಿ ಸ್ಥಾಪಿತವಾಯಿತು. ಪಾಟಿಯಾಲದಲ್ಲಿರುವ ರಾಷ್ಟ್ರೀಯ ಕ್ರೀಡಾಸಂಸ್ಥೆಗೆ 1973ರಲ್ಲಿ ನೇತಾಜಿ ಸುಭಾಸ್‌ಚಂದ್ರ ಬೋಸರ ಹೆಸರನ್ನಿಡಲಾಯಿತು. ಕ್ರೀಡಾಪಟುಗಳು ಪ್ರತಿವರ್ಷ ಸ್ಥಾನೀಯ ಮಟ್ಟ, ವಲಯ ಮಟ್ಟ, ರಾಷ್ಟ್ರಗಳ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾರೆ. ಇದರಿಂದಾಗಿ ನಮ್ಮ ದೇಶದಲ್ಲಿರುವ ಪ್ರತಿಭಾವಂತ ಆಟಗಾರರನ್ನು ಗುರುತಿಸಲು ಸುಲಭ ಸಾಧ್ಯವಾಗುತ್ತದೆ. ದೇಶದ ಎಲ್ಲ ಕ್ರೀಡಾಪಟುಗಳಿಗೆ ಸಮಾನ ಅವಕಾಶ ಕೊಟ್ಟಾಗ, ಶ್ರೇಷ್ಠ ಆಟಗಾರರ ಪ್ರತಿಭೆ ಪ್ರಕಟವಾಗುತ್ತದೆ.

ಕ್ರೀಡಾಕ್ಷೇತ್ರಕ್ಕೆ ಭಾರತೀಯರ ಕೊಡುಗೆ ಅಪಾರವಾದುದು. ಕ್ರಿಕೆಟು ಆಟದಲ್ಲಿ ಕೆ. ಎಸ್. ರಣಜಿತ್ ಸಿಂಹಜಿಯವರಿಂದ ತೊಡಗಿ ಸುನಿಲ್ ಗಾವಸ್ಕರ್, ಕಪಿಲ್‌ದೇವ್, ಸಚಿನ್ ತೆಂಡುಲ್ಕರ್ ಮೊದಲಾದವರ ಹೆಸರುಗಳು ವಿಜೃಂಭಿಸುತ್ತಿವೆ. ಭಾರತದ ಸ್ಪಿನ್ ತ್ರಿವಳಿ ಗಳಾದ ಪ್ರಸನ್ನ, ಬೇಡಿ ಮತ್ತು ಚಂದ್ರಶೇಖರ್ ವಿಶ್ವಪ್ರಸಿದ್ಧರು. ಕ್ರಿ. ಶ. 1983ರಲ್ಲಿ ಇಂಗ್ಲೆಂಡಿನಲ್ಲಿ ಭಾರತವು ಪ್ರಶಸ್ತಿಯನ್ನು ಗಳಿಸಿತ್ತು. ವಾಲಿಬಾಲ್ ಆಟದಲ್ಲಿ ಕೂಡ ಭಾರತದ ಕ್ರೀಡಾಳುಗಳು ತುಂಬ ಹೆಸರು ಮಾಡಿದ್ದಾರೆ. ಕೇರಳದ ಜಿಮ್ಮಿಜಾರ್ಜ್ ವಿಶ್ವವಿಖ್ಯಾತ ವಾಲಿಬಾಲ್ ಆಟಗಾರರಾಗಿದ್ದರು. ಬ್ಯಾಡ್ಮಿಂಟನ್ ಆಟದಲ್ಲಿ ಭಾರತದ ಪ್ರಕಾಶ್ ಪಡುಕೋಣೆ ಮತ್ತು ಪುಲ್ಲೇಲ ಗೋಪಿಚಂದ್ ಬಹಳ ಪ್ರಸಿದ್ಧರು. ಇವರು ವಿಶ್ವದ ಪ್ರತಿಷ್ಠಿತ ಪಂದ್ಯಾಟವಾದ





ಆಲ್ ಇಂಗ್ಲಂಡ್ ಚಾಂಪಿಯನ್‌ಶಿಪ್ ಗೆದ್ದು ಇತಿಹಾಸ ನಿರ್ಮಿಸಿದವರು.

ಟೆನಿಸ್ ಆಟ ಈಗ ಭಾರತದಲ್ಲಿ ಬಹಳ ಪ್ರಸಿದ್ಧಿ ಪಡೆಯುತ್ತಿದೆ. ರಾಮನಾಥನ್ ಕೃಷ್ಣನ್, ರಮೇಶ್ ಕೃಷ್ಣನ್, ಅಮೃತರಾಜ್ ಸಹೋದರರು, ಲಿಯಾಂಡರ್ ಪೇಸ್, ಮಹೇಶ್ ಭೂಪತಿ ಮೊದಲಾದದವರ ಕಠಿಣ ಪರಿಶ್ರಮದಿಂದಾಗಿ ಭಾರತದ ಟೆನಿಸ್ ಕ್ಷೇತ್ರವು ವಿಜೃಂಭಿಸುತ್ತಿದೆ. 2003 ವಿಂಬಲ್ಡನ್‌ನಲ್ಲಿ, ವನಿತೆಯರ ಜೂನಿಯರ್ ವಿಭಾಗದ ಡಬ್ಬಲ್ಸ್‌ನಲ್ಲಿ ಪ್ರಥಮ ಸ್ಥಾನದ ತಳಿಗೆಯನ್ನೆತ್ತಿದ ಸಾನಿಯಾ ಮಿರ್ಜಾ ಅವರು ಪ್ರತಿಷ್ಠಿತ ಟೆನಿಸ್ ಪ್ರಶಸ್ತಿ ಗೆದ್ದು ನಮ್ಮೆಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ಚೆಸ್ ಆಟವು ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಒಂದು ಒಳಾಂಗಣ ಆಟವಾಗಿದೆ. ಈ ಆಟವು ಬಹುಮಟ್ಟಿಗೆ ಭಾರತೀಯ ಮೂಲದ ಚದುರಂಗ ಆಟವನ್ನು ಹೋಲುತ್ತದೆ. ಬೌದ್ಧಿಕ ಉತ್ಕರ್ಷೆಯೇ ಮಾನದಂಡವಾಗಿರುವ ಈ ಆಟದಲ್ಲಿ ಭಾರತೀಯರಾದ ವಿಶ್ವನಾಥನ್ ಆನಂದ್ ಸುಪ್ರಸಿದ್ಧರು.

ಕ್ರೀಡೆಗಳಂತೆ 'ಯೋಗಾಭ್ಯಾಸ'ವು ಕೂಡಾ ಶರೀರವನ್ನು ಸುಸ್ಥಿತಿಯಲ್ಲಿಡಲು ಮನುಷ್ಯನಿಗೆ ಸಹಕಾರಿಯಾಗಿದೆ. ಇದನ್ನರಿತೇ ನಮ್ಮ ಪೂರ್ವಜರು ತಮ್ಮ ದೈನಂದಿನ ಬದುಕಿನಲ್ಲಿ ಯೋಗವನ್ನು ಅಳವಡಿಸಿಕೊಂಡಿದ್ದರು. ಪತಂಜಲಿಯನ್ನು 'ಯೋಗಶಾಸ್ತ್ರದ ಪಿತಾಮಹ' ಎಂದು ಕರೆಯಲಾಗುತ್ತದೆ. ಯೋಗದ ಮಹತ್ವವನ್ನು ಮನಗಂಡ ಪಾಶ್ಚಾತ್ಯ ರಾಷ್ಟ್ರಗಳು ಇಂದು ಯೋಗವನ್ನು ತಮ್ಮ ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿಕೊಂಡಿದೆ. ದೈಹಿಕ ಕ್ಷಮತೆಯನ್ನು ಕಾಪಾಡಿಕೊಂಡು ಬರಲು ಕ್ರೀಡಾಳುಗಳಿಗೆ ಯೋಗಾಭ್ಯಾಸವು ನೆರವಾಗಬಲ್ಲದು.

ಕ್ರೀಡೆಗಳು ಮಾನವನಲ್ಲಿ ಪ್ರಜಾಸತ್ತಾತ್ಮಕ ಗುಣ, ಅರ್ಪಣಮನೋಭಾವ, ನಾಯಕತ್ವದ ವಿಕಾಸ, ಸ್ಪರ್ಧಾ ಮನೋಭಾವ, ಸಹಕಾರ ಮನೋಭಾವ ಮುಂತಾದ ಉತ್ತಮ ಗುಣಗಳನ್ನು ಮೂಡಿಸಲು ನೆರವಾಗುತ್ತದೆ, ಆಟಗಳಿಂದ ವಿನೋದ ಮಾತ್ರವಲ್ಲ, ಜ್ಞಾನದ ಅಭಿವೃದ್ಧಿಯೂ ಆಗುತ್ತದೆ. ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಕ್ರಿಡಾಳುಗಳಿಗೆ ಕೀರ್ತಿ ಪ್ರಾಪ್ತವಾಗುತ್ತದೆ. ಇಂದು ವಿಶ್ವಪ್ರಸಿದ್ಧ ಆಟಗಾರರ ಆಟಗಳನ್ನು ದೂರದರ್ಶನ ಆಕಾಶವಾಣಿಗಳಲ್ಲಿ ನೋಡಿ – ಕೇಳಿ ಆನಂದಿಸಬಹುದು. ಉತ್ತಮ ಆಟಗಾರರ ಸಾಧನೆ ಹಾಗೂ ಅವರ ವ್ಯಕ್ತಿ ಪರಿಚಯವನ್ನು ತಿಳಿಸುವಂತಹ ಕಾರ್ಯಕ್ರಮಗಳನ್ನು ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಬಿತ್ತರಿಸಲಾಗುತ್ತದೆ. ಇಂದಿನ ಎಲ್ಲಾ ಪತ್ರಿಕೆಗಳಲ್ಲಿ ಕ್ರೀಡಾ ಮಾಹಿತಿಗಾಗಿಯೇ ವಿಶೇಷ ಪುಟಗಳು ಮೀಸಲಾಗಿರುತ್ತವೆ. ಕ್ರೀಡೆ ಮತ್ತು ಕ್ರೀಡಾಳುಗಳ ಕುರಿತು ಮಾಹಿತಿ ನೀಡುವ ಹಲವು ಸಾಪ್ತಾಹಿಕಗಳೂ ಇವೆ. ಹೀಗೆ ಪತ್ರಿಕೆಗಳು, ರೇಡಿಯೋ, ದೂರದರ್ಶನ, ಕಂಪ್ಯೂಟರ್ ಮುಂತಾದ ಸಮೂಹ ಮಾಧ್ಯಮಗಳ ಸಹಾಯದಿಂದ ಜಾಗತಿಕ ಮಟ್ಟದ ಕ್ರೀಡೆಗಳು ಮನೆ–ಮನ ತಲುಪುತ್ತವೆ. ಕ್ರೀಡೆ– ಯೋಗಾಭ್ಯಾಸಗಳಿಂದ ಉತ್ತಮ ದೇಹಾರೋಗ್ಯ, ಬೌದ್ಧಿಕ ಹಾಗೂ ನೈತಿಕ ವಿಕಾಸವನ್ನು ಹೊಂದಿದ ವ್ಯಕ್ತಿಯೇ ನಾಡಿನ ಸಂಪತ್ತು.

XXXV
NATIONAL GAMES
KERALA
"together in sport"

GLASGOW 2014
XX COMMONWEALTH GAMES

## ಚಟುವಟಿಕೆಗಳು

- ▫ **ವರ್ಗೀಕರಿಸಿರಿ**

• ಆಟಗಳೆಂದರೆ ಎಲ್ಲರಿಗೂ ಇಷ್ಟತಾನೇ? ನೀವೂ ಹಲವಾರು ಆಟಗಳನ್ನು ಆಡಿರುವಿರಲ್ಲವೇ?
ನಿಮಗೆ ತಿಳಿದಿರುವ ಆಟಗಳ ಪಟ್ಟಿ ತಯಾರಿಸಿರಿ. ಗ್ರಾಮೀಣ ಆಟ, ನೂತನ ಆಟಗಳನ್ನು ವರ್ಗೀಕರಿಸಿರಿ.

- ▫ **ಪ್ರಶ್ನೆ ತಯಾರಿಸಿರಿ**

• ಕ್ರೀಡಾಲೋಕದಲ್ಲಿ ಎಂಬ ಲೇಖನದ ಪ್ರಧಾನ ಆಶಯಗಳು ಉತ್ತರವಾಗಿ ಬರುವಂತೆ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

- ▫ **ಭಾಷಣ ತಯಾರಿಸಿರಿ**

• "ರಾಷ್ಟ್ರೀಯ ಕ್ರೀಡಾ ದಿನಾಚರಣೆ"ಯಂದು ನಿಮ್ಮ ಶಾಲೆಯಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಮಾತನಾಡಲು "ಜೀವನದಲ್ಲಿ ಕ್ರೀಡೆಗಳ ಮಹತ್ವ" ಎಂಬ ವಿಷಯದಲ್ಲಿ ಲಿಖಿತ ಭಾಷಣ ತಯಾರಿಸಿರಿ.

- ▫ **ವಾರ್ತೆ ತಯಾರಿಸಿರಿ**

ನಿಮ್ಮ ಶಾಲಾ ಕ್ರೀಡೋತ್ಸವದ ಸುದ್ದಿಯನ್ನು ಶಾಲಾ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಪತ್ರಿಕಾ ವರದಿಯನ್ನು ತಯಾರಿಸಿರಿ.

- ▫ **ಟಿಪ್ಪಣಿ ತಯಾರಿಸಿರಿ**

• ಆಧುನಿಕ ಆಟಗಳ ಎಡೆಯಲ್ಲಿ ತಲೆಮಾರಿನಿಂದ ರೂಢಿಗೆ ಬಂದ ಗ್ರಾಮೀಣ ಆಟಗಳು ಕಣ್ಮರೆಯಾಗುತ್ತಿವೆಯೋ? ನಿಮ್ಮ ಅನಿಸಿಕೆ ಏನು? ಟಿಪ್ಪಣಿ ತಯಾರಿಸಿರಿ.

- ▫ **ಪ್ರಶ್ನಾವಳಿ ತಯಾರಿಸಿರಿ**

• ನಿಮ್ಮ ಊರಿನಲ್ಲಿಯೂ ಸಾಧನೆಗೈದ ಕ್ರೀಡಾ ಪಟುಗಳಿರಬಹುದಲ್ಲವೇ? ಅವರ ಪರಿಚಯ ನಿಮಗಿದೆಯೇ? ಅವರ ಬಗ್ಗೆ ಹೆಚ್ಚು ತಿಳಿಯಲು ಆಸಕ್ತಿ ಇಲ್ಲವೇ? ಅವರಲ್ಲಿ ಸಂದರ್ಶನ ಮಾಡಲು ಸೂಕ್ತವಾದ ಸಂದರ್ಶನಾ ಪ್ರಶ್ನಾವಳಿಗಳನ್ನು ತಯಾರಿಸಿರಿ.

- ▫ **ಗಮನಿಸಿರಿ**

• ಈ ಕೆಳಗೆ ನೀಡಲಾದ ಪದಗಳಲ್ಲಿ ಅಕ್ಷರ ವ್ಯತ್ಯಾಸವಾದಾಗ (ಲ – ಳ, ನ – ಣ) ಅರ್ಥವ್ಯತ್ಯಾಸವಾಗುವುದನ್ನು ಗಮನಿಸಿರಿ.

| | | |
|---|---|---|
| ಹಾಲು | – | ಹಾಳು |
| ಕಾಲು | – | ಕಾಳು |
| ಕಲ್ಲು | – | ಕಳ್ಳು |
| ಪಾಲು | – | ಪಾಳು |
| ಹುಲಿ | – | ಹುಳಿ |
| ಬಲೆ | – | ಬಳೆ |
| ಬೆಲೆ | – | ಬೆಳೆ |
| ಕೊಲೆ | – | ಕೊಳೆ |
| ಹೊಲೆ | – | ಹೊಳೆ |
| ಅನ್ನ | – | ಅಣ್ಣ |
| ಬನ್ನ | – | ಬಣ್ಣ |
| ಕನ್ನ | – | ಕಣ್ಣ |
| ಚಿನ್ನ | – | ಚಿಣ್ಣ |
| ಮನೆ | – | ಮಣೆ |
| ಆನೆ | – | ಆಣೆ |
| ಮನ | – | ಮಣ |

# ಉಂಡಲಕಾಳು ಪ್ರಸಂಗ

ಜನರು ವೈವಿಧ್ಯಪೂರ್ಣವಾದ ಭಕ್ಷ್ಯಭೋಜ್ಯಗಳನ್ನು ಇಷ್ಟಪಡುತ್ತಾರೆ. ಅವುಗಳ ತಯಾರಿ, ಸ್ವಾದದ ಬಗ್ಗೆ ಸಂದರ್ಭಸಿಕ್ಕಾಗಲೆಲ್ಲಾ ಜನರೊಳಗೆ ಪರಸ್ಪರ ಆಶಯ ವಿನಿಮಯ ನಡೆಯುತ್ತದೆ. ಇದರಿಂದಾಗಿ ಹೊಸ ಹೊಸ ತಿಂಡಿತಿನಿಸುಗಳು ಹುಟ್ಟಿಕೊಳ್ಳುತ್ತವೆ.

'ಉಂಡಲಕಾಳು ಹಾಗೆ ತಲೆಮಂಡೆಯಷ್ಟು ದೊಡ್ಡದು ಮಾಡಬೇಡಿ ಮಕ್ಕಳೇ, ಎಲ್ಲರೂ ಒಂದೇ ಗಾತ್ರದಲ್ಲಿ ಮಾಡಿ' ಎಂದು ಪುಟ್ಟತ್ತೆ ಮತ್ತೆ ಮತ್ತೆ ಹೇಳುತ್ತಿದ್ದರು. ಆದಿತ್ಯವಾರ ಮಾಡಬೇಕಾದ ಶಾಲೆಯ ಹೋಮ್ ವರ್ಕ್ ಮುಗಿಸಿ ಈಗ ಮಕ್ಕಳಿಗೆಲ್ಲ ಉಂಡಲ ಕಾಳು'ಉರುಟುವ'(ಉರುಟುರುಟಾಗಿ ಮಾಡುವ ಕಾರ್ಯವಾದ್ದರಿಂದ –ಉರುಟುವ?) 'ಹೋಮ್ ವರ್ಕ್'. ಮಕ್ಕಳೆಲ್ಲ ಒಂದೊಂದು ಬಟ್ಟಲು ಮುಂದಿಟ್ಟುಕೊಂಡು ಕೈಯಲ್ಲಿ ಒಂದಿಷ್ಟು ಹಿಟ್ಟು ತೆಕ್ಕೊಂಡು ಉರುಟುರುಟಾಗಿ ಗುಂಡು ಗುಂಡಾಗಿ ಕೈಯ್ಯಲ್ಲಿ ನೀವಿ ಬಟ್ಟಲೊಳಗೆ ಹಾಕುತ್ತಿದ್ದವು. ಉಂಡಲ ಕಾಳಿನ ಆಸೆ ಆಟದ ಬಯಲನ್ನು ಒಂದಷ್ಟು ಹೊತ್ತು ಉಪೇಕ್ಷಿಸಿತ್ತು ಎಂದಲ್ಲ. ಅದನ್ನು ಮಾಡುತ್ತ ಟಿ.ವಿ. ವೀಕ್ಷಣೆಯೂ ಸಾಗುತ್ತಿತ್ತು.

ನಾವೂ ಈ ಮಕ್ಕಳ ಹಾಗೆಯೇ ಉಂಡಲಕಾಳು ಮಾಡುತ್ತಿದ್ದ ದಿನಗಳು ನೆನಪಾದವು. ಆಗ ಟಿ.ವಿ., ಬಿಡಿ ರೇಡಿಯೋ ಕೂಡ ನಮ್ಮ ಮನೆಯಲ್ಲಿ ಇರಲಿಲ್ಲ. ದೊಡ್ಡವರು ಮಕ್ಕಳು ಎಲ್ಲ ಸೇರಿ 'ಪದ್ಯಬಂಡಿ(ಅಂತ್ಯಾಕ್ಷರಿ)' ಆಡುತ್ತ ಹುರುಪಿನಿಂದ ಕೆಲಸ ಮಾಡುತ್ತಿದ್ದೆವು. ಅತ್ತೆಯಂದಿರು, ಅವರ ಮಕ್ಕಳು 'ಓಣಂ' ರಜೆಯಲ್ಲಿ ಮನೆಗೆ ಬಂದರೆ ಉಂಡ್ಲಕಾಳು ಗ್ಯಾರಂಟಿ. ಸರಸು ಅತ್ತೆಯಂತೂ ಉಂಡ್ಲಕಾಳು ಅತ್ತೆಯೆಂದೇ ನಮ್ಮ ಪಟಾಲಮ್ಮಿನಲ್ಲಿ ಪರಿಚಿತರು. ಪದ್ಯಬಂಡಿಗೆ ಪಾರ್ಟಿ ಕಟ್ಟುವಾಗ ಅತ್ತೆಯಂದಿರನ್ನು ಒಂದೊಂದು ಪಾರ್ಟಿಗೆ ಹಂಚಿಕೊಳ್ಳುತ್ತಿದ್ದೆವು. ನಮ್ಮ ಸ್ಟಾಕು ಮುಗಿದರೆ ಅವರ ನಾಲ್ಕನೇ ಕ್ಲಾಸಿನವರೆಗಿನ ಪಾಠ ಪುಸ್ತಕದ ಪದ್ಯಗಳೆಲ್ಲ ಯಥೋಚಿತವಾಗಿ ಹೊರಗೆ ಬರುತ್ತಿದ್ದವು. ನಾಲ್ಕನೇ ಕ್ಲಾಸಿಗೆ 'ಹುಡುಗಿ ಇನ್ನು



ದೊಡ್ಡವಳಾಗುವವಳು' ಎಂದು ಮನೆಯಲ್ಲಿ ಕೂರಿಸಿ ಕೆಲಸ ಬೊಗಸೆಗಳಿಗೆ ಹಚ್ಚಿದ್ದರು. ಹಾಗಾಗಿ ಆದರ ನಂತರದ ಸ್ಟಾಕೆಲ್ಲ ಅವರ ತಮ್ಮನ ಪಾಠ ಪುಸ್ತಕದ್ದು. ಅವನು ಉರುಹಚ್ಚುವಾಗ ಕೇಳಿ ಕಲಿತದ್ದು. ಅದೂ ಮುಗಿದು ಪದ್ಯಬಂಡಿಯಲ್ಲಿ 'ಬಂಡಿ' ಹಾಕುವ ಪ್ರಸಂಗ ಬಂದರೆ ಈ ಅತ್ತೆಯಂದಿರು ಉಂಡ್ಲಕಾಳಿನ ಮೇಲೇ ಒಂದು ಪದ್ಯ ಕಟ್ಟಿಯಾರು. ಅಥವಾ ಹಟ್ಟಿಯ ಕರುವಿನ ಮೇಲೆ ಎರಡು ಸಾಲು ಹೊಸೆದಾರು. ಅಂತೂ ಎರಡು ಪಾರ್ಟಿಯೂ ಸೋಲದೆ ಉಂಡಲಕಾಳು ಗೆಲ್ಲುತ್ತಿತ್ತು.

ಈ ಉಂಡ್ಲಕಾಳಿನ ರುಚಿ ಉಂಟಲ್ಲ, ಅದರ ಯೋಗ್ಯತೆ ಉಂಟಲ್ಲ, ಅದರ ಕುರಿತು ಅತ್ತೆ ಕಟ್ಟಿದ ಹಾಡಿನ ಸೊಲ್ಲು ಹೀಗೆ–

ನಷ್ಟ ಬೀಳುವುದಿಲ್ಲ ನಾತ ಹುಟ್ಟುವುದಿಲ್ಲ
ಎಷ್ಟು ತಿಂದರೂ ರುಚಿ ಕಡಿಮೆಯಾಗುವುದಿಲ್ಲ
ಅಟ್ಟದಲ್ಲಿಟ್ಟರೆ ಮತ್ತೆ ಕೆಡುವುದಿಲ್ಲ
ಇಷ್ಟವಾದವರಿಗೆ ಬೇಕಷ್ಟು ಖುಷಿಕೊಡುವ.

ಉಂಡಲ ಕಾಳು ತಿನ್ನಿರೋ ನೀವೆಲ್ಲರೂ ಉಂಡಲಕಾಳು ತಿನ್ನಿರಿ.

('ಕಲ್ಲು ಸಕ್ಕರೆ ಕೊಳ್ಳಿರೋ'–ಎಂಬ ದಾಸಕೀರ್ತನೆ ಕೇಳಿಸಿರಬೇಕಲ್ಲ ನಿಮಗೆ, ಅದಕ್ಕೆ ನಾನು ಹೊಗೆಯಲ್ಲ)

ಹೌದು, ಇದರ ರುಚಿಯನ್ನು ಬಲ್ಲವರೆ ಬಲ್ಲರು. ಅತ್ತೆಯಲ್ಲೋ ಅಮ್ಮನಲ್ಲೋ ಕೇಳಿದರೆ ಅದೇನು ದೊಡ್ಡ ಬ್ರಹ್ಮವಿದ್ಯೆಯಲ್ಲ ಎಂದಾರು. ಉಪ್ಪಿನಲ್ಲಿ ಹಾಕಿ ಹೇಮಾರಿಸಿದ (ಜೋಪಾನ ಮಾಡಿದ) ಹಲಸಿನ ತೊಳೆಯನ್ನು (ಹೆಚ್ಚುವರಿ ಉಪ್ಪನ್ನು ಬಿಡಿಸಿ, ರುಚಿಗೆ ತಕ್ಕಷ್ಟು ಉಪ್ಪನ್ನು ಅದರಲ್ಲಿ ಉಳಿಸಿ) ನೀರಿನ ಅಂಶವನ್ನು ಹಿಂಡಿ ತೆಗೆದು ಸ್ವಲ್ಪ ಅಕ್ಕಿ, ತೆಂಗಿನಕಾಯಿ, ಜೀರಿಗೆ ಎಲ್ಲ ಹಾಕಿ ಗಟ್ಟಿಯಾಗಿ ರುಬ್ಬಿ ಚಿಕ್ಕ ಚಿಕ್ಕ ಉಂಡೆಗಳನ್ನಾಗಿ ಮಾಡುವಾಗ ಒಂದೊಂದು ಒಣಗೊಬ್ಬರಿಯ ಪುಟ್ಟ ಚೂರನ್ನು ಇರಿಸುವುದು. ಆಮೇಲೆ ಎಣ್ಣೆಯಲ್ಲಿ ಕರಿಯುವುದು, ಇಷ್ಟೇ ಸರಿಯಾಗಿ ಪಾಕಕ್ಕೆ ಕರಿದು ತೆಗೆದರೆ ಹಲ್ಲಿಲ್ಲದ ಅಜ್ಜಿ ಅಜ್ಜಂದಿರು ಕೂಡ ಇದರ ಆಸೆಯನ್ನು ತಡೆಯಲಾರರು. ಅವರಿಗೆ ಒಂದೋ ಅಷ್ಟು ಗಟ್ಟಿಯಾಗದ ಹಸಿಪಾಕದ ಉಂಡ್ಲಕಾಳು ಸ್ಪೆಷಲ್ಲಾಗಿ ತೆಗೆಯಬೇಕು. ಅಥವಾ ಒರಳಿನಲ್ಲಿ ಹಾಕಿ ಜಜ್ಜಿ ಪುಡಿ ಮಾಡಿಯಾದರೂ ಕೊಡಬೇಕು.

ಉಂಡ್ಲಕಾಳಿನ ಸೀಸನ್ ಎಂದರೆ ಅದು ಆಟಿ – ಸೋಣ ತಿಂಗಳು. ಈ ತಿಂಗಳುಗಳಲ್ಲಿ ಕರಾವಳಿಯ ನೆಂಟರ ಮನೆಗೆ ಹೋದರೆ ಉಂಡ್ಲಕಾಳು ಇಲ್ಲದಿದ್ದರೇ ವಿಶೇಷ. ಕೆಲವು ಮನೆಗಳಿಗೆ ಹೋದರೆ ಸಿಗುವ ಉಂಡ್ಲಕಾಳು ಗಟ್ಟಿ ಎಂದರೆ ಗಟ್ಟಿ. ಹಲ್ಲು ಕೀಳಲು ಗೊತ್ತಾಗದವರು ಅಥವಾ ಭಯ ಪಡುವವರು ಸುಮ್ಮನೆ ಅಂತಹ ಉಂಡ್ಲಕಾಳನ್ನು ಜಗಿದರೆ ಸಾಕು. ಕೆಲವೊಮ್ಮೆ ಯಾವ ಫೀಸೂ ಇಲ್ಲದೆ ಹಲ್ಲು ಕಿತ್ತು ಬಂದಿರುತ್ತದೆ. ಅಂದು ಉಂಡ್ಲಕಾಳಿನೊಂದಿಗೆ ಹೊಟ್ಟೆಗೆ ಹೋಗದಂತೆ ಮಾತ್ರ ಎಚ್ಚರವಹಿಸಿದರೆ ಸಾಕು.

ಪುಟ್ಟಣ್ಣ ಹಾಸ್ಟೆಲಿನಲ್ಲಿ ಓದುತ್ತಿದ್ದವನು. ಊರಿನಿಂದ ಹೋಗುವಾಗ ಒಂದಷ್ಟು ಉಂಡ್ಲಕಾಳನ್ನು ಕೊಂಡು ಹೋಗಿದ್ದ. ಅವನು ತನ್ನ ಸಹಪಾಠಿ ಹೈದರಾಬಾದಿನ ಗೆಳೆಯನಿಗೂ ಅದನ್ನು ಹಂಚಿದ್ದ. ಉಂಡ್ಲಕಾಳು ಭಾರೀ ರುಚಿ ಎನ್ನುತ್ತಾ ಚಪ್ಪರಿಸುತ್ತಿದ್ದ ತಿಂದ ಅವನಿಗೆ ಎಷ್ಟು ಯೋಚಿಸಿದರೂ ಹೊಳೆಯದ ಒಂದು ವಿಚಾರವೆಂದರೆ ಹಣ್ಣಿನೊಳಗೆ ಬೀಜ ಇರುವಂತೆ ಉಂಡ್ಲಕಾಳಿನ ಮಧ್ಯದಲ್ಲಿ ಒಂದು ಪುಟ್ಟ ಕೊಬ್ಬರಿ ಚೂರು ಹೇಗೆ ಬಂತು ಎನ್ನುವುದೇ. ಈ ಅದ್ಭುತ ವಿದ್ಯೆಯನ್ನು ಹೇಗೆ ಸಾಧಿಸಿದರಪ್ಪ ಎಂದು ಅವನಿಗೆ ಅಚ್ಚರಿಯೋ ಅಚ್ಚರಿಯಂತೆ.

ಈ ಉಂಡ್ಲಕಾಳು ಮಹಾಶಯನಿಂದಾಗಿ ಬೆತ್ತದ ರುಚಿ ಸವಿಯುವಂತಾದುದು ಒಂದು ಮಧುರ ಯಾತನೆಯ ಪ್ರಸಂಗ. ನಮ್ಮ ಗಣಿತದ ಮೇಸ್ಟ್ರು ಬೋರ್ಡಿನಲ್ಲಿ ಲೆಕ್ಕ ಮಾಡುತ್ತಿದ್ದರು. ಬಾಯಿಯಲ್ಲಿದ್ದ ಉಂಡ್ಲಕಾಳು ಮಹಾಶಯ ತೆಪ್ಪಗೇ ಇದ್ದ. ಎಷ್ಟೆಂದು ಅವನನ್ನು ಹಾಗೆ ಇಟ್ಟುಕೊಳ್ಳುವುದೇ? ಅಷ್ಟರಲ್ಲಿ ಜವಾನ ಬಾಬಣ್ಣ ತರಗತಿಗೆ ಒಂದು ನೋಟೀಸು ತಂದರು. ಮೇಷ್ಟ್ರು ಓದುತ್ತಿದ್ದಂತೆ ಉಂಡ್ಲಕಾಳು ಮಹಾಶಯನನ್ನು ಆದಷ್ಟು ಜಾಗ್ರತೆ ಕಡಿದು ಬಿಟ್ಟೆ. ಕುಟುಂ ಎಂಬ ಸದ್ದು ಪ್ರತಿಧ್ವನಿಸಿತು. ಬಾಯಲ್ಲಿದ್ದ ಕಾಳನ್ನು ನುಂಗಿ ಮೂರ್ಖಳಾಗಲೇ, ಉಗುಳಿ ಮೂರ್ಖಳಾಗಲೇ ಎಂದು ಪೆಚ್ಚಾಗಿ ನೋಡುತ್ತಿದ್ದ ನಮ್ಮ ಮೇಲೆ ಎಲ್ಲರ ಕಣ್ಣು! ಹಾಗಿದೆ ಉಂಡ್ಲಕಾಳಿನ ಮಹಿಮೆ!

ಡಾ। ಯು. ಮಹೇಶ್ವರಿ

## ಡಾ। ಯು. ಮಹೇಶ್ವರಿ



ಡಾ। ಯು. ಮಹೇಶ್ವರಿ ಅವರು ಕಾಸರಗೋಡು ಜಿಲ್ಲೆಯ, ಬೇಳ ಗ್ರಾಮದ ಉಳ್ಳೋಡಿ ಎಂಬಲ್ಲಿ 18.3.1958 ರಂದು ಜನಿಸಿದರು. ಇವರ ತಂದೆ ಗಂಗಾಧರ ಭಟ್ಟ, ತಾಯಿ ಸರಸ್ವತಿ ಅಮ್ಮ. ಪ್ರಸ್ತುತ ಕಾಸರಗೋಡಿನ ಸರಕಾರಿ ಕಾಲೇಜಿನಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಮುಗಿಲ ಹಕ್ಕಿ. ಇದು ಮಾನುಷಿಯ ಓದು, ಮಧುರವೇ ಕಾರಣ, ಅಟ್ಟುಂಬಳದ ಪಟ್ಟಾಂಗ ಮೊಲಾದವುಗಳು ಇವರ ಪ್ರಕಟಿತ ಕೃತಿಗಳಾಗಿವೆ. ಎಜ್ಯುಕೇಶನ್ ಎಂಬ ಮೂಲ ಇಂಗ್ಲಿಷ್ ಕೃತಿಯನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ವಾರಂಬಳ್ಳಿ ಪ್ರತಿಷ್ಠಾನ ಪ್ರಶಸ್ತಿ, ವಿ.ಎಂ. ಇನಾಂದಾರ್ ಪ್ರಶಸ್ತಿ, ಸುಶೀಲಾ ಶೆಟ್ಟಿ ಸ್ಮಾರಕ ಪ್ರಶಸ್ತಿ, ಅಣ್ಣಯ್ಯ ಮಾಸ್ತರ ಪ್ರಶಸ್ತಿ ಮೊದಲಾದವು ಇವರ ಸಾಹಿತ್ಯ ಸಾಧನೆಗೆ ಸಂದ ಗೌರವಗಳಾಗಿವೆ.

### ಚಟುವಟಿಕೆಗಳು

**ಉತ್ತರಿಸಿರಿ**

- ಹಾಸ್ಯ ಲೇಖನವನ್ನು ಓದಿದಿರಲ್ಲವೇ? ಆಶಯಕ್ಕೆ ತೊಂದರೆಯಾಗದಂತೆ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
  - 'ಉಂಡ್ಲಕಾಳು' ತಯಾರಿಯ ರೀತಿ ಹೇಗೆ?
  - ಕರಾವಳಿಯ ನೆಂಟರ ಮನೆಯ 'ಉಂಡ್ಲಕಾಳಿನ' ವಿಶೇಷತೆ ಏನು?
  - ಉಂಡ್ಲಕಾಳಿನಿಂದಾಗಿ ಲೇಖಕರು ಬೆತ್ತದ ಸವಿಯನ್ನುಂಡ ಸಂದರ್ಭ ಯಾವುದು?

**ಪದ ಹುಡುಕಿರಿ**

- ಈ ಪಠ್ಯಭಾಗದಲ್ಲಿರುವ ಗ್ರಾಮ್ಯ ಪದಗಳನ್ನು ಹುಡುಕಿರಿ. ಈ ಗ್ರಾಮ್ಯ ಪದಗಳಿಗೆ ಸೂಕ್ತವಾದ ಶಿಷ್ಟ ಪದಗಳನ್ನು ಬರೆಯಿರಿ.

**ಆಶಯ ಬರೆಯಿರಿ**

- ಈ ಲೇಖನದಲ್ಲಿ ಬಂದ ಕಿರು ಪದ್ಯವನ್ನು ಗಮನಿಸಿರಿ. ಅದರ ಆಶಯವನ್ನು ಬರೆಯಿರಿ.

**ಸಂಚಿಕೆ ತಯಾರಿಸಿರಿ**

- ಹಾಸ್ಯ ನಿಮಗೆ ಇಷ್ಟ ತಾನೇ? ಹಾಸ್ಯದಿಂದ ಕೂಡಿರುವ ಲೇಖನ, ಚುಟುಕು, ಕವನ ವ್ಯಂಗ್ಯಚಿತ್ರ ಇತ್ಯಾದಿಗಳನ್ನು ಸೇರಿಸಿಕೊಂಡು ಹಾಸ್ಯ ಸಂಚಿಕೆಯನ್ನು ತಯಾರಿಸಿರಿ.

**ಸಂಪಾದಕೀಯ ಬರೆಯಿರಿ**

- ಆಕರ್ಷಕವಾದ ಸಂಪಾದಕೀಯ ಪುಸ್ತಕದ ಶೋಭೆಯನ್ನು ಹೆಚ್ಚಿಸುತ್ತದೆ ಎಂಬ ವಿಚಾರ ನಿಮಗೆ ತಿಳಿದಿದೆ. ನೀವು ತಯಾರಿಸಿದ ಹಾಸ್ಯ ಸಂಚಿಕೆಗೆ ಯೋಗ್ಯವಾದ ಸಂಪಾದಕೀಯವನ್ನು ಬರೆಯಿರಿ.

**ಒಗಟು ಸ್ಪರ್ಧೆ**

ಉಂಡ್ಲಕಾಳಿನ ಬಗ್ಗೆ ಲೇಖಕಿಯ ಅತ್ತೆಕಟ್ಟಿದ ಹಾಡಿನ ಸೊಲ್ಲನ್ನು ನೀವು ಗಮನಿಸಿದ್ದೀರಲ್ಲವೇ? ಅದರ ಪ್ರಾರಂಭದ ಸಾಲುಗಳು ಒಗಟಿನ ರೂಪದಲ್ಲಿರುವುದನ್ನು ಕಾಣಬಹುದು. ಬಳಿಕ ಕೊನೆಯ ಸಾಲಿಗೆ ತಲುಪಿದಾಗಲೇ ಇದು ಉಂಡ್ಲಕಾಳು ಎಂದು ನಮಗೆ ತಿಳಿಯುವುದು. ಇದೇ ರೀತಿಯಲ್ಲಿ ನಮ್ಮ ಹಿರಿಯರು ಕವಿತೆಯ ರೂಪದಲ್ಲಿ ಸಾಕಷ್ಟು ಒಗಟುಗಳನ್ನು ರಚಿಸಿದ್ದಾರೆ. ಈ ರೀತಿಯ ಒಗಟುಗಳನ್ನು ಹಿರಿಯರಿಂದ ಕೇಳಿ, ಪುಸ್ತಕಗಳಿಂದ ಸಂಗ್ರಹಿಸಿ ತರಗತಿಯಲ್ಲಿ ಒಗಟು ಸ್ಪರ್ಧೆಯನ್ನು ನಡೆಸಿರಿ.

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಪದ ಶುದ್ಧಿ, ವಾಕ್ಯ ಶುದ್ಧಿ, ಲೇಖನ ಚಿಹ್ನೆ, ಪಾರಾ ಮೊದಲಾದ ಭಾಷಾ ನಿಯಮಂಗಳನ್ನು ಪಾಲಿಸಿಕೊಂಡು ರಚನೆಗಳನ್ನು ಉತ್ತಮ ಪಡಿಸುವುದು.
- ಸ್ವಂತ ಅಭಿಪ್ರಾಯಗಳನ್ನು ಶಿಷ್ಟಭಾಷೆಯಲ್ಲಿ ಮಂಡಿಸುವುದು.
- ಪಾಠಭಾಗಗಳಿಂದ ಆರ್ಜಿಸಿದ ಭಾಷಾಪರವೂ ಆಶಯಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.

# 3. ಅರಿತು ಬಾಳಿದರೆ ಸ್ವರ್ಗ

ಮಾನವ ಸಂಘ ಜೀವಿ. ಸಮಾಜದಲ್ಲಿ ಪರಸ್ಪರ ಸಹಾಯ – ಸಹಕಾರಗಳಿಲ್ಲದೆ ಸುಗಮವಾದ ಜೀವನ ಅಸಾಧ್ಯ. ನಮ್ಮ ಪರಿಸರದಲ್ಲಿ ಬದುಕುವ ಪ್ರತಿಯೊಬ್ಬ ವ್ಯಕ್ತಿಯೂ ಇತರರಿಗಿಂತ ಭಿನ್ನನಾಗಿರುತ್ತಾನೆ. ಯಾರೂ ಪರಿಪೂರ್ಣರಲ್ಲ. ಸಾಮಾನ್ಯವಾಗಿ ಪ್ರತಿಯೊಬ್ಬರಲ್ಲೂ ಏನಾದರೊಂದು ಕೊರತೆ ಇದ್ದೇ ಇರುತ್ತದೆ. ಆ ಕೊರತೆಯನ್ನು ಮರೆತು ಉತ್ತಮ ಗುಣವನ್ನು ಗುರುತಿಸಿ ಪ್ರೋತ್ಸಾಹಿಸಿ ಅವರಲ್ಲಿ ಆತ್ಮಸ್ಥೈರ್ಯವನ್ನು ತುಂಬುವುದೇ ನಮ್ಮ ಧ್ಯೇಯವಾಗಬೇಕು.

ಆದರೆ ಇಂದು ಜಾತಿ, ಧರ್ಮ, ಸ್ತ್ರೀಯರು, ಮಕ್ಕಳು, ವೃದ್ಧರು, ವಿಕಲ ಚೇತನರು, ಆರ್ಥಿಕವಾಗಿ ಹಿಂದುಳಿದವರು... ಹೀಗೆ ಹಲವು ಕಾರಣಗಳಿಂದಾಗಿ ಜನರು ಅವಗಣಿಸಲ್ಪಡುತ್ತಿದ್ದಾರೆ. ಇದು ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಭೂಷಣವಲ್ಲ. ಆದುದರಿಂದ ಸಮಾಜದ ಎಲ್ಲರನ್ನೂ ಸಮಾನವಾಗಿ ಕಂಡು, ನೀಡಬೇಕಾದ ಗೌರವ, ಪ್ರೋತ್ಸಾಹಗಳನ್ನು ನೀಡಿ ಹೊಂದಾಣಿಕೆಯೊಂದಿಗೆ ಜೊತೆಯಾಗಿ ಬಾಳಬೇಕು. ಆ ಮೂಲಕ ನಾಡಿನ ಅಭಿವೃದ್ಧಿಗೆ ಕಾಣಿಕೆಯನ್ನು ಸಲ್ಲಿಸುವುದೇ ನಮ್ಮ ಮನೋಭಾವವಾಗಿರಲಿ.



# ಎಮ್ಮ ಮನೆಯಂಗಳದಿ

ಹೆಣ್ಣು ಮಗಳು ಎರಡು ಮನೆಗಳನ್ನು ಬೆಳಗುತ್ತಾಳೆ. ಬಾಲ್ಯದಲ್ಲಿ ಹೆತ್ತವರ ಆರೈಕೆಯಲ್ಲಿ ಆಡಿ, ಕಲಿತು ಉತ್ತಮ ನಡತೆಗಳನ್ನು ಹೊಂದುತ್ತಾಳೆ. ದೊಡ್ಡವಳಾದ ಬಳಿಕ ಮದುವೆಯಾಗಿ ಗಂಡನ ಮನೆಗೆ ಹೋಗಿ ಬಾಳುತ್ತಾಳೆ. ಮದುವೆ ಮಾಡಿ ಕೊಡುವಾಗ ಹೆತ್ತವರಿಗೂ, ಮಗಳಿಗೂ ಉಂಟಾಗುವ ಅಗಲಿಕೆಯ ನೋವು ವರ್ಣಿಸಲಸಾಧ್ಯ.

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನು ತುಂಬಲೊಪ್ಪಿಸುವೆವು ॥೧॥

ಮರೆಮೋಸ ಕೊಂಕುಗಳನರಿಯಳಿವಳು
ಇನಿಸ ವಿಶ್ವಾಸವನು ಕಂಡರಿಯಳಿವಳು
ಕಷ್ಟಗಳ ಸೈಸದೆಯೆ ಕಾಣದೆಯೆ ಬೆಳೆದವಳು
ಸಲಹಿಕೊಳ್ಳಿರಿ ಮಗಳನೊಪ್ಪಿಸುವೆವು ॥೨॥



ಕಠಿಣಗಳ ನೆಳಲ್ ಸುಳಿಯಲದುರಿ ಬಾಡುವಳು
ಹಿರಿಮಂಜು ಬಳಲಿಸಿದ ಹೂವಿನಂತೆ
ಸುಖದಲ್ಲಿ ದುಃಖದಲಿ ಎಲ್ಲ ದೆಸೆಯಿರವಿನಲಿ
ನಿಮ್ಮ ಪಾಲಿಗೆ ನಿಲುವ ಕುವರಿಯಿವಳು ॥೩॥

ನಿನ್ನ ಮಡದಿಯ ಕೊಂಡು ಸುಖವಾಗಿರೌ ಮಗುವೆ
ನಿಮ್ಮ ಸೊಸೆ ಸೋದರಿಯ ಕೊಳ್ಳಿರಿವಳ
ನಿಮ್ಮ ಕೀರುತಿ ಬೆಳೆಯಲಿವಳ ಸೌಜನ್ಯದಲಿ
ನಿಮ್ಮ ಕುಲ ಶೀಲಗಳು ಪರಿಮಳಿಸಲಿ ॥೪॥

ನಿಲ್ಲು ಕಣ್ಣೊರೆಸಿಕೊಳು ನಿಲ್ ತಾಯ್ ಹೋಗುವೆವು
ತಾಯ್ವಿರಾ ತಂದೆಯಿರ ಕೊಳ್ಳಿರಿವಳ
ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ
ತುಂಬಿದಾಯುಷ್ಯದಲಿ ಬಾಳಿ ಬದುಕು ॥೫॥

ವಿ. ಸೀತಾರಾಮಯ್ಯ

## ವಿ. ಸೀತಾರಾಮಯ್ಯ



ಕ್ರಿ.ಶ.1889ರ ಅಕ್ಟೋಬರ 2 ರಂದು ವಿ. ಸೀತಾರಾಮಯ್ಯನವರು ಬೆಂಗಳೂರಿನ ದೇವನಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ವೆಂಕಟರಾಮಯ್ಯ, ತಾಯಿ ದೊಡ್ಡ ವೆಂಕಟಮ್ಮ. ಬೆಂಗಳೂರಿನಲ್ಲಿ ಎಂ. ಎ. ಪದವಿಯ ವರೆಗೆ ಶಿಕ್ಷಣ ಪಡೆದು ಮುಂಬೈಯಲ್ಲಿ ಎಲ್.ಎಲ್.ಬಿ. ಪದವಿ ಗಳಿಸಿದರು. ಕೆಲವು ವರ್ಷ ಶಿಕ್ಷಕರಾಗಿದ್ದು ಅನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾದರು.

ಇವರ ಅರಲು–ಬರಲು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ, ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ಸಿಕ್ಕಿವೆ. ಸತ್ಯ ಮತ್ತು ಮೌಲ್ಯ, ಸಾಹಿತ್ಯಾವಲೋಕನ ಇವರ ಉತ್ತಮ ಕೃತಿಗಳಾಗಿವೆ. ಬೆಳದಿಂಗಳು, ಸೀಕರಣೆ ಲಲಿತ ಪ್ರಬಂಧಗಳಾಗಿವೆ. "ನಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು" ಮನೆ ತುಂಬುವ ಹಾಡೆಂದೇ ಪ್ರಸಿದ್ಧವಾಗಿದೆ. ಇವರು 1983ರಲ್ಲಿ ನಿಧನರಾದರು.

### ಚಟುವಟಿಕೆಗಳು

#### ಹಾಡಿರಿ
- ಈ ಪದ್ಯವನ್ನು ರಾಗವಾಗಿ ಹಾಡಿರಿ.

#### ಚರ್ಚಿಸಿರಿ
- ಹೆತ್ತವರು ಮಗಳನ್ನು ಮದುವೆ ಮಾಡಿ ಕೊಡುವಾಗ 'ನಮ್ಮ ಮನೆಯ ಅಂಗಳದಿ ಬೆಳೆದ ಹೂವು' ಮತ್ತು 'ನಮ್ಮ ಮನೆಯ ಬೆಳಕು' ಎಂದು ಹೇಳುವುದು ಯಾಕಾಗಿರಬಹುದು? ಚರ್ಚಿಸಿರಿ.

#### ವಿಂಗಡಿಸಿ ಬರೆಯಿರಿ
- ಪದ್ಯದ ಸಾಲುಗಳಲ್ಲಿ ಬಂದಿರುವ ಈ ಕೆಳಗಿನ ಪದಗಳನ್ನು ವಿಂಗಡಿಸಿ ಬರೆಯಿರಿ.
  - ಮನೆಯಂಗಳದಿ
  - ಬೆಳೆದೊಂದು
  - ಮಡಿಲೊಳಗಿಡಲು
  - ತುಂಬಿಸಲೊಪ್ಪಿಸುವೆವು
  - ಕೊಂಕುಗಳನರಿಯಳಿವಳು
  - ಇನಿಸವಿಶ್ವಾಸವನು
  - ಮಗಳನೊಪ್ಪಿಸುವೆವು
  - ಸುಳಿಯಲದು
  - ದೆಸೆಯಿರವಿನಲಿ
  - ಕಣ್ಣೊರೆಸಿಕೊಳು
  - ತುಂಬಿದಾಯುಷ್ಯದಲಿ

#### ಪ್ರಶ್ನೆಗಳಿಗೆ ಉತ್ತರಿಸಿರಿ
- ಮಗಳನ್ನು ಒಪ್ಪಿಸುವಾಗ ಹೆತ್ತವರು ತಮ್ಮ ಮಗಳ ಸ್ವಭಾವದ ಕುರಿತು ಆಡುವ ಮಾತುಗಳು ಯಾವುವು?
- 'ನಿಮ್ಮ ಕಷ್ಟ – ಸುಖಗಳಲ್ಲಿ ಇವಳು ನಿಮ್ಮ ಜೊತೆಗೆ ಇರುತ್ತಾಳೆ' ಎಂಬ ಅರ್ಥವನ್ನು ನೀಡುವ ಸಾಲನ್ನು ಗುರುತಿಸಿ ಬರೆಯಿರಿ.

#### ಭಾವನೆ ಬರೆಯಿರಿ
- 'ನಿಮ್ಮ ಕುಲ ಶೀಲಗಳು ಪರಿಮಳಿಸಲಿ'
  'ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ ತುಂಬಿದಾಯುಷ್ಯದಲಿ ಬಾಳಿ ಬದುಕು'
  ಈ ಸಾಲುಗಳಲ್ಲಿ ವ್ಯಕ್ತವಾಗುವ ಹೆತ್ತವರ ಭಾವನೆ, ಹಾರೈಕೆಗಳನ್ನು ನಿಮ್ಮ ವಾಕ್ಯಗಳಲ್ಲಿ ಬರೆಯಿರಿ.

#### ಕಾರಣ ಬರೆಯಿರಿ
- ಈ ಕವನದಲ್ಲಿ ನಿಮಗೆ ಇಷ್ಟವಾದ ಸಾಲುಗಳು ಯಾವುದು?
  ಇಷ್ಟವಾದುದಕ್ಕೆ ಕಾರಣಗಳನ್ನು ಬರೆದು ಮಂಡಿಸಿರಿ.

#### ಆಶಯ ಬರೆಯಿರಿ
- ಕವನದ ಆಶಯವನ್ನು ಬರೆಯಿರಿ.

#### ಸಮರ್ಥಿಸಿ ಬರೆಯಿರಿ.
- ಈ ಕವಿತೆಯ ಆಶಯವು ಈಗಿನ ಕಾಲಕ್ಕೆ ಹೊಂದಿಕೊಳ್ಳುತ್ತದೆಯೇ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿರಿ ಬರೆಯಿರಿ.

# ಅಸಾಮಾನ್ಯ ಸಾಧಕಿ

ಅಂಗವಿಕಲತೆಯು ಶಾಪವಲ್ಲ ಸಮಾಜಕ್ಕೆ ಹೊರೆಯೂ ಅಲ್ಲ. ಅಂಗವೈಕಲ್ಯವನ್ನು ಕೊರತೆಯೆಂದು ಜೀವನವಿಡೀ ಕೊರಗದೆ ಅದನ್ನು ಸವಾಲಾಗಿ ಸ್ವೀಕರಿಸಿ ಬದುಕನ್ನು ಗೆದ್ದವರು ನಮ್ಮ ನಡುವೆಯೇ ಇದ್ದಾರೆ.

ಜೆಸ್ಸಿಕಾಳ ತಂದೆ-ತಾಯಿಯ ಹೆಸರು ವಿಲಿಯಂ ಹಾಗೂ ಇನೆಜ್ ಕಾಕ್ಸ್. 1983ರ ಮಾರ್ಚ್ 2 ರಂದು ಉತ್ತರ ಅಮೇರಿಕಾದ ಅರಿಜೋನದಲ್ಲಿ ಜೆಸ್ಸಿಕಾ ಕಾಕ್ಸ್ ಜನಿಸಿದಳು. ಆಗ ವಿಲಿಯಂ - ಇನೆಜ್ ಕಾಕ್ಸ್ ದಂಪತಿಗೆ ಆಘಾತ ಕಾದಿತ್ತು. ಅಪ್ಸರೆಯರನ್ನೂ ಮೀರಿಸುವಷ್ಟು ಮುದ್ದಾಗಿದ್ದ ಅವರ ಮಗುವಿಗೆ ಕೈಗಳೇ ಇರಲಿಲ್ಲ!

ಮಗುವಿಗೆ, ಅದರಲ್ಲೂ ಹೆಣ್ಣು ಮಗುವಿಗೆ ಕೈಗಳೇ ಇಲ್ಲ ಎಂದು ತಿಳಿದಾಗ ಸಾಧಾರಣ ತಂದೆ ತಾಯಿಗಳಾಗಿದ್ದರೆ ಮೊದಲು ದೇವರಿಗೆ ಹರಕೆ ಕಟ್ಟುತ್ತಿದ್ದರು, ಅಥವಾ ಅಪ್ಪನೋ ಅಮ್ಮನೋ ಮಾಡಿದ ಯಾವುದೋ ಪಾಪಕ್ಕೆ ದೇವರು ಹೀಗೆ ಶಿಕ್ಷೆ ಕೊಟ್ಟಿದ್ದಾನೆ ಎಂದು ಯೋಚಿಸಿ, ಶಾಲೆಗೂ ಕಳುಹಿಸದೆ, ಬದುಕಿಡೀ ಆ ಮಗು ಸುತ್ತಮುತ್ತಲಿನವರ ಅನುಕಂಪದ ಮಧ್ಯೆಯೇ ಬದುಕಿಯೂ ಸಾಯುವಂತೆ ಮಾಡಿಬಿಡುತ್ತಿದ್ದರು.

ಆದರೆ, ಜೆಸ್ಸಿಕಾಳ ತಂದೆ-ತಾಯಿ ಹಾಗೆ ಮಾಡಲಿಲ್ಲ! ಕೈಗಳಿಲ್ಲದಿದ್ದರೆ ಕತ್ತೆ ಬಾಲ! ಕಾಲುಗಳಿವೆಯಲ್ಲ? ಅವುಗಳಿಂದಲೇ ತಲೆ ಬಾಚಿಕೊಳ್ಳುವ, ತುಟಿಗೆ ಲಿಪ್‌ಸ್ಟಿಕ್ ಹಚ್ಚಿಕೊಳ್ಳುವ, ಕೆನ್ನೆಗೆ ರಂಗು ಬಳಿದುಕೊಳ್ಳುವ ತರಬೇತಿ ನೀಡಬಾರದೇಕೆ ಎಂದು ಯೋಚಿಸಿದರು. ಹಾಗೆಯೇ ಮಾಡಿದರು. ಮಗಳ ಜತೆಗಿದ್ದ ಸಂದರ್ಭದಲ್ಲೆಲ್ಲ ಅಂಗವೈಕಲ್ಯವನ್ನು ಮೆಟ್ಟಿನಿಂತ ಧೀರರ ಕಥೆಗಳನ್ನೇ ಹೇಳಲು ತೊಡಗಿದರು. ಅಂಥ ಸಾಧಕರ ಕತೆಯನ್ನೇ ಪದೇ ಪದೇ ಕೇಳಿದ್ದರ ಪರಿಣಾಮವಾಗಿ, ನಾನೂ ಏನಾದರೂ ಸಾಧಿಸಬೇಕು ಎಂಬ ಛಲ ಜೆಸ್ಸಿಕಾ ಕಾಕ್ಸ್‌ಗೆ ಬಂತು. ಈಕೆ ಸಡಗರದಿಂದಲೇ ಕಾಲ್ಬೆರಳಿಗೆ ಪೆನ್ಸಿಲ್ ಸಿಕ್ಕಿಸಿಕೊಂಡು ಬರೆಯಲು ಕಲಿತಳು. ಓದಿನಲ್ಲಿದ್ದ ಶ್ರದ್ಧೆ, ಈಕೆಯನ್ನು ಶಿಕ್ಷಕಿಯರ ಪಾಲಿನ ಡಾರ್ಲಿಂಗ್ ಆಗುವಂತೆ ಮಾಡಿತು. ಈ ಮಧ್ಯೆ ಮಗಳು ಹೆಚ್ಚಿನ ಸಮಯ ಮನೆಯಲ್ಲಿಯೇ ಇದ್ದರೆ ಡಿಪ್ರೆಷನ್‌ಗೆ ಈಡಾಗಬಹುದು ಎಂದು ಯೋಚಿಸಿದ ವಿಲಿಯಂ - ಇನೆಜ್ ಕಾಕ್ಸ್ ದಂಪತಿ, ಅವಳನ್ನು ಈಜು ಕಲಿಯಲು ಕಳಿಸಿದರು. 'ಹಾರ್ಮೋನಿಯಂ ನುಡಿಸಲು ಕಲಿಯಬಹುದಲ್ಲ ಮಗಳೇ' ಎಂದು ಆಸೆ ಹುಟ್ಟಿಸಿದರು. ಅವಳ ಒಂದೊಂದು ಚಿಕ್ಕ ಗೆಲುವನ್ನೂ ಹಬ್ಬದಂತೆ ಆಚರಿಸಿ 'We are proud of you' ಎಂದು ಕಣ್ತುಂಬಿಕೊಂಡರು.

ಪರಿಣಾಮ ಏನಾಯಿತೆಂದರೆ, ತನ್ನ ಅಂಗವೈಕಲ್ಯದ ಮೇಲೆ ಸೇಡು ತೀರಿಸಿಕೊಳ್ಳುವಂತೆ ಬದುಕಲು ಜೆಸ್ಸಿಕಾ ನಿರ್ಧರಿಸಿದಳು. ತನ್ನ ಗೆಲುವಿನ ಕಥೆಯನ್ನು ಅವಳೇ ಸಂಕ್ಷಿಪ್ತವಾಗಿ ವಿವರಿಸುವುದು ಹೀಗೆ. 'ಹಾರ್ಮೋನಿಯಂ ಬಾರಿಸುವುದನ್ನೇನೊ ತುಂಬ ಬೇಗನೆ ಕಲಿತೆ. ಆದರೆ ಈಜು ಕೊಳಕ್ಕೆ ಇಳಿದಾಗ ತುಂಬ ಕಷ್ಟವಾಯಿತು. ಮೊದಲು, ಹರಿವ ನೀರನ್ನು ಎರಡೂ ಕೈಗಳಿಂದ ಹಿಂದೆ ತಳ್ಳಬೇಕು. ನಂತರ ಕಾಲು ಬಡಿಯಬೇಕು. ಇದು ಈಜು ಕಲಿಕಾ ವಿಧಾನದ ಮೊದಲ





ಪಾಠ. ಆದರೆ ನೀರನ್ನು ಹಿಂದಿಕ್ಕಲು ನನಗೆ ಕೈಗಳೇ ಇರಲಿಲ್ಲ. ಅದನ್ನು ನೆನಪು ಮಾಡಿಕೊಂಡಾಗ –ಓಹ್, ನಾನು ಮುಳುಗಿ ಹೋಗ್ತೀನಿ ಅಂದುಕೊಂಡೆ. ಆದರೆ, ಎರಡೇ ಎರಡು ರೆಕ್ಕೆಗಳಿಂದ ಈಜುವ ಮೀನುಗಳನ್ನು ಕಂಡಾಗ, ನಾನೂ ಹೀಗೆ ಮಾಡಬಹುದಲ್ಲ ಅನ್ನಿಸ್ತು. ಪ್ರಯತ್ನ ಪಟ್ಟರೆ ಮೀನೂ ನಾಚುವಂತೆ ಈಜುಬಲ್ಲೆ ಅನ್ನಿಸ್ತು. ಮುಂದೆ ಈಜುತ್ತ ಈಜುತ್ತ ಹೋದಂತೆಲ್ಲ ಮೀನಿಗೇ ಸೈಡು ಹೊಡೆದುಬಿಟ್ಟೆ!

ಅದೊಮ್ಮೆ ಈಜಿನಲ್ಲಿ ಬಹುಮಾನ ತಗೊಂಡ ಸಂದರ್ಭದಲ್ಲೇ, ನನ್ನೆದುರು ಕರಾಟೆಯಲ್ಲಿ ಬ್ಲ್ಯಾಕ್‌ಬೆಲ್ಟ್ ಪಡೆದ ಹುಡುಗಿಯೊಬ್ಬಳ ಸಾಹಸವನ್ನೂ ನೋಡಿದೆ. ಅವತ್ತೇ ನನಗೂ ಬ್ಲ್ಯಾಕ್‌ಬೆಲ್ಟ್ ಚಾಂಪಿಯನ್ ಆಗಬೇಕು ಅನ್ನಿಸ್ತು. ಅಪ್ಪ–ಅಮ್ಮನ ಮುಂದೆ ನನ್ನ ಆಸೆ ತೋಡಿಕೊಂಡೆ. ಅವರು ಕಣ್ತುಂಬಿಕೊಂಡು 'ನೀನು ಏನೇ ಕಲಿತರೂ ನಮಗೆ ಸಂತೋಷ ಮಗಳೇ' ಎಂದರು ಮೊದಲಿಗೆ ಕೈಗಳಿಲ್ಲದ ಹುಡುಗಿ ಎಂಬ ಕಾರಣಕ್ಕೇ ಕರಾಟೆ ಕಲಿಸಲು ಹಿಂಜರಿದ ಅಧ್ಯಾಪಕರು ನನ್ನ ವಿಪರೀತದ ಬೇಡಿಕೆಗೆ ಕರಗಿದರು. ಕೈಗಳೇ ಇಲ್ಲದಿದ್ದಾಗ ಎದುರಾಳಿಯ ಹೊಡೆತದಿಂದ ಹೇಗೆ ತಪ್ಪಿಸಿಕೊಳ್ಳಬೇಕು? ಫೈಟಿಂಗಿನ ಸಂದರ್ಭದಲ್ಲಿ ಸರಕ್ಕನೆ ಹೇಗೆ ಜಿಗಿಯಬೇಕು?ಹೇಗೆ ಲ್ಯಾಂಡ್ ಆಗಬೇಕು ಎಂದೆಲ್ಲ ಹೇಳಿಕೊಟ್ಟರು. ಪರಿಣಾಮ ಏನಾಯಿತೆಂದರೆ, ಎರಡೇ ವರ್ಷಗಳ ನಂತರ ಅದೇ ಅರಿಜೋನಾದಲ್ಲಿ ನಡೆದ ರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್ ಪ್ರಶಸ್ತಿ ನನ್ನದಾಯಿತು.

ಈ ವೇಳೆಗೆ ಕಾಲೇಜು ಶಿಕ್ಷಣವನ್ನೂ ಮುಗಿಸಿದ್ದೆ. ನನ್ನ ಲಿಮಿಟ್ಸ್ ಏನೆಂದು ನನಗೆ ಚೆನ್ನಾಗಿ ಅರ್ಥವಾಗಿತ್ತು. ಹಾಗಾಗಿ ಪ್ರೀತಿ–ಪ್ರೇಮ–ರೊಮಾನ್ಸ್ ಎಂಬ ವಿಚಾರವನ್ನು ಮನಸ್ಸಿನಿಂದ ಕಿತ್ತು ಹಾಕಿದ್ದೆ. ಆಧ್ಯಾತ್ಮದತ್ತ ವಾಲಿಕೊಂಡಿದ್ದೆ. ಈ ಸಂದರ್ಭದಲ್ಲಿಯೇ ಕಾರ್ ಓಡಿಸುವುದನ್ನು ಕಲಿತಳು ಎಂದು ದೊಡ್ಡ ಸುದ್ದಿಯಾಯಿತು. ಅಮೇರಿಕಾದ ಫೋರ್ಡ್ ಕಾರು ತಯಾರಿಕಾ ಕಂಪನಿ ನನಗಾಗಿ ವಿಶೇಷ ಅನುಕೂಲಗಳಿದ್ದ ಕಾರು ತಯಾರಿಸುವುದಾಗಿ ಹೇಳಿತು. ಅಂಥ ಕಾರ್ ಓಡಿಸುವುದು ನನ್ನ ಟ್ಯಾಲೆಂಟ್‌ಗೆ ನಾನೇ ಮಾಡಿಕೊಳ್ಳುವ ಅವಮಾನ ಎಂದು ಅನಿಸಿದ ತಕ್ಷಣವೇ–'ಎಲ್ಲರೂ ಓಡಿಸುವಂಥ ಕಾರನ್ನು ನಾನೂ ಓಡಿಸುತ್ತೇನೆ. ಯಾವ ವಿಶೇಷ ಸವಲತ್ತೂ ನನಗೆ ಬೇಡ. ಹಾಗೆಯೇ ಅನುಕಂಪವೂ ಬೇಕಿಲ್ಲ' ಎಂದು ನಿಷ್ಠುರವಾಗಿ ಹೇಳಿದೆ. ಕಡೆಗೊಂದು ದಿನ ನನ್ನ ಪ್ರಯತ್ನದಲ್ಲಿ ಗೆದ್ದೂ ಬಿಟ್ಟೆ. . .'

ಹೀಗೆನ್ನುವ ಜೆಸ್ಸಿಕಾ ಕಾಕ್ಸ್ ಅದೇ ಸಂದರ್ಭದಲ್ಲಿ ಈ ಮಾತುಗಳನ್ನೂ ಸೇರಿಸುತ್ತಾಳೆ: 'ಎಲ್ಲ ಪ್ರಯತ್ನಗಳಲ್ಲೂ ನಾನು ಗೆದ್ದಿದ್ದೇನೆ ನಿಜ. ಆದರೆ, ಅದಕ್ಕೆಲ್ಲ ವಿಪರೀತ ಟೈಮ್ ತಗೊಂಡಿದ್ದೇನೆ. ಕರಾಟೆ ಕಲಿಯುವಾಗ ಎದುರಾಳಿಯ ಹೊಡೆತ ತಿಂದು ಕಾಲು ಮುರಿದುಕೊಂಡಿದ್ದೇನೆ. ಈಜುವ ಸಂದರ್ಭದಲ್ಲಿ ಅದೆಷ್ಟೋ ಬಾರಿ ನೀರು ಕುಡಿದು ಕಂಗಾಲಾಗಿದ್ದೇನೆ. ತಪ್ಪಾಗಿ ಹಾರ್ಮೋನಿಯಂ ನುಡಿಸಿ ಗುರುಗಳ ಟೀಕೆಗೆ ಗುರಿಯಾಗಿದ್ದೇನೆ. ಐದಾರು ಸಂದರ್ಭಗಳಲ್ಲೆಲ್ಲ ನೋವಾಗಿದೆ ನಿಜ. ಆದರೆ ಸೋತು ಹೋದೆ ಎಂಬ ಭಾವ ಒಂದು ಕ್ಷಣದ ಮಟ್ಟಿಗೂ ಬಂದಿಲ್ಲ. ಸೋಲು ಎಂಬ ಪದಕ್ಕೆ ನನ್ನ ಬದುಕೆಂಬ ಡಿಕ್ಷನರಿಯಲ್ಲಿ ಅರ್ಥವಿಲ್ಲ. ಜಾಗವೂ ಇಲ್ಲ'.



ಇಂಥ ಅಪರೂಪದ ಹಿನ್ನೆಲೆಯ ಜೆಸ್ಸಿಕಾ ಕಾಕ್ಸ್, ಮೊನ್ನೆ ಅಕ್ಟೋಬರ್ 10 ರಂದು ಅವೇ ಕಾಲುಗಳ, ಕಾಲ್ಬೆರಳುಗಳ ಸಹಾಯದಿಂದ ವಿಮಾನವನ್ನೂ ಹಾರಿಸುವ ಮೂಲಕ ಹೊಸದೊಂದು ಚರಿತ್ರೆಯನ್ನೇ ನಿರ್ಮಿಸಿಬಿಟ್ಟಿದ್ದಾಳೆ. ಈ ಅಂಗವಿಕಲ ಬಾಲಕಿಯ ಸಾಹಸ ಕಂಡು ಅಮೆರಿಕ ಮಾತ್ರವಲ್ಲ. ಜಗತ್ತೇ ಬೆರಗಾಗಿ ಹೋಗಿದೆ. ಅರಿಜೋನಾದ ಸರಕಾರ, ಈ ಬಾಲೆಯನ್ನು ಕರೆದು ಪೈಲಟ್ ಕೆಲಸ ಕೊಟ್ಟಿದೆ. 'ನಿಂಗೆ ಎಷ್ಟು ದಿನ ಕೆಲಸ ಮಾಡಬೇಕು ಅನಿಸುತ್ತೋ ಅಷ್ಟು ದಿನ ಮಾತ್ರ ಕೆಲಸ ಮಾಡು. ಎಷ್ಟು ಬೇಕಾದ್ರೂ ರಜೆ ತಗೋ. ನಿನ್ನಂಥವರಿಗೆ ಕೆಲಸ ಕೊಟ್ಟಿದ್ದೇವೆ ಅನ್ನೋದೇ ನಮ್ಮ ಹೆಮ್ಮೆ' ಎಂದು ಹೇಳಿದೆ. ಇದೇ ಸಂದರ್ಭದಲ್ಲಿ ಜೆಸ್ಸಿಕಾಗೆ ಪೈಲಟ್ ತರಬೇತಿ ನೀಡಿದ ಟೆರಿಬ್ರ್ಯಾಂಡ್ – "ಪೈಲಟ್ ಲೈಸೆನ್ಸ್ ಪಡೆಯುವ ಮುನ್ನ ವಿಮಾನ ಹಾರಿಸಬೇಕು. ಜೆಸ್ಸಿಕಾಗೆ ಪರೀಕ್ಷೆ ಇದ್ದ ದಿನ ಭಾರೀ ಬಿರುಗಾಳಿ ಇತ್ತು. ಈ ಹುಡುಗಿ ಅದಕ್ಕೆ ಕಿಂಚಿತ್ತೂ ಹೆದರದೆ, ಆ ಬಿರುಗಾಳಿಗೆ ಹಾಗೇ ಒಂದು ಕಿಕ್ ನೀಡಿ, ವಿಮಾನ ಹಾರಿಸಿಯೇ ಬಿಟ್ಟಳು. ಇಂಥವಳ ಗುರು ಅನ್ನಿಸಿಕೊಳ್ಳಲಿಕ್ಕೆ ನಾನು ಪುಣ್ಯ ಮಾಡಿದ್ದೆ" ಎಂದು ಉದ್ಗರಿಸಿದ್ದಾರೆ.

ಇಷ್ಟೆಲ್ಲ ಆದ ನಂತರವೂ, ತನ್ನ ಸಾಧನೆಗೆ ಇಡೀ ಜಗತ್ತೇ ಸೆಲ್ಯೂಟ್ ಹೊಡೆಯುತ್ತಿದ್ದರೂ ಜೆಸ್ಸಿಕಾ ಬದಲಾಗಿಲ್ಲ. ಅಹಮಿಕೆಗೆ ಬಲಿಯಾಗಿಲ್ಲ. ಅವಳು ಈಗಲೂ ಅದೇ ಹಳೆಯ ಜೆಸ್ಸಿಕಾ ಆಗಿಯೇ, ನಮ್ಮ ಪಕ್ಕದ ಮನೆಯ ಹುಡುಗಿಯ ಥರಾನೇ ಉಳಿದುಬಿಟ್ಟಿದ್ದಾಳೆ. ಸಾವಿರಾರು ಮಂದಿಯ ಮುಂದೆ ನಿಂತು ತನ್ನ ಯಶೋಗಾಥೆ ಹೇಳಿಕೊಳ್ಳುತ್ತಾಳೆ. ಅಂಗವೈಕಲ್ಯ ಶಾಪವಲ್ಲ, ಅದು ಕೊರತೆಯೂ ಅಲ್ಲ ಎಂದು ವಿವರಿಸುತ್ತಾಳೆ. ನೊಂದವರ ಸಂಕಟ ಆಲಿಸುತ್ತಾಳೆ. ಅಳುವವರ ಕಂಬನಿ ಒರೆಸಿ ಜತೆಗೆ ನಾನಿಲ್ವಾ . . . ಎಂದು ಸಂತೈಸುತ್ತಾಳೆ. ಈ ಮಧ್ಯೆ ಯಾರಾದರೂ ನೀನು ವಿಮಾನ ಹಾರಿಸಿದ್ಯಂತೆ? ಎಂದು ಕೇಳಿದರೆ ಬೇರೆಯವರು ಆರು ತಿಂಗಳಲ್ಲಿ ಮುಗಿಸುವ ಆ ಕೋರ್ಸಿಗೆ ನಾನು 3 ವರ್ಷ ತಗೊಂಡೆ ಗೊತ್ತಾ?" ಎಂದು ಅಮಾಯಕಿಯಂತೆ ಉತ್ತರಿಸುತ್ತಾಳೆ. ಹಿಂದೆಯೇ ಚಿಕ್ಕಂದಿನಲ್ಲಿ, ಕೈಗಳಿಲ್ಲದೆಯೂ ಗಗನದಲ್ಲಿ ಹಕ್ಕಿಗಿಂತ ವೇಗವಾಗಿ ಹಾರಬೇಕಿತ್ತು ಅಂದುಕೊಂಡಿದ್ದೆ. ಆ ಕನಸು ನನಸಾಗಿದೆ. ನನ್ನ ಈ ಯಶಸ್ಸಿನ ಹಿಂದೆ ಅಪ್ಪ–ಅಮ್ಮನ ಪ್ರೀತಿ, ಬಂಧುಗಳ ಹಾರೈಕೆ, ಗುರುಗಳ ಆಶೀರ್ವಾದ ಇದೆ. ನಾನು ಎಲ್ಲರಿಗೂ ಋಣಿ ಎನ್ನುತ್ತಾ ಕಣ್ತುಂಬಿಕೊಳ್ಳುತ್ತಾಳೆ.

ಎ.ಆರ್. ಮಣಿಕಾಂತ್

## ಎ.ಆರ್. ಮಣಿಕಾಂತ್



ಎ.ಆರ್.ಮಣಿಕಾಂತ್, ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಆಯಿತನ ಹಳ್ಳಿಯವರು. ಮಂಡ್ಯದ ಬಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ 'ಆಟೋಮೊಬೈಲ್' ವಿಭಾಗದಲ್ಲಿ ಬಿ.ಇ. ಪೂರೈಸಿದ ಇವರಿಗೆ ಒಲಿದದ್ದು ಪತ್ರಿಕೋದ್ಯಮ. 'ಹಾಯ್ ಬೆಂಗಳೂರು' ಮೂಲಕ ನೌಕರಿ ಆರಂಭಿಸಿದ ಇವರು 'ಸಂಯುಕ್ತ ಕರ್ನಾಟಕ' ದಲ್ಲಿದ್ದು ನಂತರ ವಿಜಯ ಕರ್ನಾಟಕ ಪತ್ರಿಕೆಯನ್ನು ಆರಿಸಿಕೊಂಡರು. ಅಲ್ಲಿ ಇವರು 'ಈ ಗುಲಾಬಿಯು ನಿನಗಾಗಿ', 'ಉಭಯ ಕುಶಲೋಪರಿ ಸಾಂಪ್ರತ', 'ಮರೆಯಲಿ ಹ್ಯಾಂಗ' ಮತ್ತು 'ಹಾಡು ಹುಟ್ಟಿದ ಸಮಯ' ಎಂಬ ಅಂಕಣದ ಮೂಲಕ ಮನೆ ಮಾತಾದರು. ಪ್ರಸ್ತುತ 'ಕನ್ನಡ ಪ್ರಭ' ದಲ್ಲಿ ಉಪ ಸಂಪಾದಕರಾಗಿದ್ದಾರೆ. 'ಭಾವತೀರಯಾನ' ಎಂಬ ಅಂಕಣವನ್ನು ಬರೆಯುತ್ತಿದ್ದಾರೆ.

## ಚಟುವಟಿಕೆಗಳು

### ❑ ಓದಿರಿ

- ಪಾಠಭಾಗವನ್ನು ಓದಿದಾಗ ನಿಮ್ಮ ಮನಸ್ಸನ್ನು ತಟ್ಟಿದ ಒಂದು ಭಾಗವನ್ನು ಬರೆದು ತರಗತಿಯಲ್ಲಿ ಗಟ್ಟಿಯಾಗಿ ಓದಿರಿ.

### ❑ ಪ್ರಶ್ನೆಗಳಿಗೆ ಉತ್ತರಿಸಿರಿ

- ಜೆಸ್ಸಿಕಾ ಕಾಕ್ಸ್‌ಳಲ್ಲಿ ಆತ್ಮವಿಶ್ವಾಸವನ್ನು ತುಂಬುವಲ್ಲಿ ಹೆತ್ತವರ ಪಾತ್ರವೇನು?
- ಅಮೇರಿಕಾದ ಫೋರ್ಡ್ ಕಂಪೆನಿ ಜೆಸ್ಸಿಕಾಳಿಗಾಗಿ ವಿಶೇಷ ರೀತಿಯ ಕಾರನ್ನು ತಯಾರಿಸಿಕೊಡಲು ಮುಂದಾದಾಗ ಅವಳು ಅದನ್ನು ನಿರಾಕರಿಸಲು ಕಾರಣವೇನು?
- 'ಸೋಲು ಎಂಬ ಪದಕ್ಕೆ ನನ್ನ ಡಿಕ್ಷನರಿಯಲ್ಲಿ ಅರ್ಥವಿಲ್ಲ. ಜಾಗವೂ ಇಲ್ಲ' ಎನ್ನುವ ಜೆಸ್ಸಿಕಾ ತನ್ನ ಬದುಕಿನಲ್ಲಿ ಇದನ್ನು ಸಾಧಿಸಿ ತೋರಿಸಿದ ಬಗೆ ಹೇಗೆ?
- ವಿಮಾನವನ್ನು ಹಾರಿಸಲು ಜೆಸ್ಸಿಕಾಳಿಗೆ ತರಬೇತಿ ನೀಡಿದ ಗುರು ಟೆರ್ರಿಬ್ರ್ಯಾಂಡ್ ತನ್ನ ಶಿಷ್ಯಳ ಬಗೆಗೆ ಅಭಿಮಾನದಿಂದ ಹೇಳುವ ಮಾತುಗಳೇನು?

### ❑ ನೀವು ಹೇಳುವಂತೆ ಬರೆಯಿರಿ

- ಪಾಠಭಾಗದಲ್ಲಿ ಜೆಸ್ಸಿಕಾ ತನ್ನ ಬಗ್ಗೆ ಹೇಳಿಕೊಂಡಿರುವ ವಾಕ್ಯಗಳನ್ನು ಗುರುತಿಸಿ ಉದಾಹರಣೆಯ ಸಹಾಯದಿಂದ ನೀವು ಆ ಮಾತುಗಳನ್ನು ಜೆಸಿಕಾ ಬಗ್ಗೆ ಹೇಳುವಂತೆ ಬದಲಾಯಿಸಿ ಬರೆಯಿರಿ.

  ಉದಾ:– 'ಅದೊಮ್ಮೆ ಈಜಿನಲ್ಲಿ ಬಹುಮಾನ ತಗೊಂಡ ಸಂದರ್ಭದಲ್ಲೇ ನನ್ನೆದುರು ಕರಾಟೆಯಲ್ಲಿ ಬ್ಲ್ಯಾಕ್‌ಬೆಲ್ಟ್ ಪಡೆದ ಹುಡುಗಿಯೊಬ್ಬಳ ಸಾಹಸವನ್ನು ನೋಡಿದೆ. ನನಗೂ ಬ್ಲ್ಯಾಕ್‌ಬೆಲ್ಟ್ ಚಾಂಪಿಯನ್ ಆಗಬೇಕು ಅನ್ನಿಸ್ತು. ಅಪ್ಪ ಅಮ್ಮನ ಮುಂದೆ ನನ್ನ ಆಶೆಯನ್ನು ತೋಡಿಕೊಂಡೆ'.

  ಈ ಸಾಲುಗಳನ್ನು ಈ ಕೆಳಗಿನಂತೆ ಬರೆಯಬಹುದು. ಅದೊಮ್ಮೆ ಈಜಿನಲ್ಲಿ ಬಹುಮಾನ ತಗೊಂಡ ಸಂದರ್ಭದಲ್ಲೇ ಅವಳು ಕರಾಟೆಯಲ್ಲಿ ಬ್ಲ್ಯಾಕ್‌ಬೆಲ್ಟ್ ಪಡೆದ ಹುಡುಗಿಯೊಬ್ಬಳ ಸಾಹಸವನ್ನೂ ನೋಡಿದಳು. ಅವಳಿಗೂ ಬ್ಲ್ಯಾಕ್ ಬೆಲ್ಟ್ ಚಾಂಪಿಯನ್ ಆಗಬೇಕು ಅನ್ನಿಸಿತು. ಅವಳು ಅಪ್ಪ ಅಮ್ಮನ ಮುಂದೆ ತನ್ನ ಆಸೆಯನ್ನು ತೋಡಿಕೊಂಡಳು.

### ❑ ಟಿಪ್ಪಣಿ ಬರೆಯಿರಿ

- ನೀವು ಇಷ್ಟಪಡುವ ಹಾಗೂ ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಬಯಸುವ ಯಾವ ಉತ್ತಮ ಗುಣಗಳು ಜೆಸ್ಸಿಕಾಳಲ್ಲಿವೆ? ಟಿಪ್ಪಣಿಯಾಗಿ ಬರೆಯಿರಿ.

### ❑ ಅಭಿನಂದನಾ ಪತ್ರ ಬರೆಯಿರಿ

- ಜೆಸ್ಸಿಕಾಳ ಸಾಧನೆಗಳನ್ನು ಮೆಚ್ಚಿಕೊಂಡು ಅಭಿನಂದಿಸುತ್ತಾ ಅವಳಿಗೆ ಒಂದು ಪತ್ರವನ್ನು ಬರೆಯಿರಿ.

### ❑ ಗಾದೆ ವಿಸ್ತರಿಸಿರಿ

- 'ಸಾಧಿಸಿದರೆ ಸಬಳ ನುಂಗಬಹುದು'–ಈ ಗಾದೆ ಮಾತು ಜೆಸ್ಸಿಕಾಳ ಬದುಕಿಗೆ ಅನ್ವಯವಾಗುತ್ತಿದೆ ಯಲ್ಲವೇ? ಈ ಗಾದೆಯ ಹಿನ್ನೆಲೆಯಲ್ಲಿ ಜೆಸ್ಸಿಕಾಳ ಬದುಕಿನ ಕುರಿತು ಸಂಗ್ರಹವಾಗಿ ಬರೆಯಿರಿ.

### ❑ ಸಂಚಿಕೆ ತಯಾರಿಸಿರಿ

- ವಿಕಲಚೇತನರ ಸಾಧನೆಗೆ ಸಂಬಂಧಿಸಿರುವ ವಾರ್ತೆಗಳನ್ನು, ಲೇಖನಗಳನ್ನು ಸಂಗ್ರಹಿಸಿ ಒಂದು ಸಂಚಿಕೆ ತಯಾರಿಸಿರಿ.

# ಅಜ್ಜಿಯೆನ್ನುವ ಅಚ್ಚರಿ

ತಮ್ಮ ಮಕ್ಕಳಿಗಾಗಿ ಮೊಮ್ಮಕ್ಕಳಿಗಾಗಿ ಜೀವನ ಸವೆಸಿದ ಹಿರಿಯ ಚೇತನಗಳು ಕಡೆಗಾಲದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುವುದನ್ನು ಅಲ್ಲಲ್ಲಿ ಕಾಣುತ್ತೇವೆ. ಆದರೆ ಆ ಹಿರಿಯರ ಒಡಲಾಳದಲ್ಲಿ ಎಂತಹ ಪ್ರೀತಿ ಕರುಣೆ ತುಂಬಿಕೊಂಡಿದೆ, ಜ್ಞಾನಸಂಪತ್ತು ಅಡಗಿದೆ ಎಂಬುದನ್ನು ಯೋಚಿಸಿದರೆ ನಾವು ಕಳೆದುಕೊಂಡದ್ದೇನೆಂದು ತಿಳಿಯುತ್ತದೆ.



'ಅಜ್ಜಿ' ಎನ್ನುವ ಜೀವಭಾವದೊಳಗೆ ಎಷ್ಟೊಂದು ಸಹನೆ ಮತ್ತು ಪ್ರೀತಿಯಿದೆ ಎಂದು ಯೋಚಿಸುವಾಗ ಅಚ್ಚರಿಯ ಗಂಟು ಬಿಚ್ಚಿಕೊಳ್ಳುತ್ತದೆ. ಅಜ್ಜಿಯೆನ್ನುವ ಭೂಗರ್ಭ ಸಂಪತ್ತು ಎಷ್ಟೆಲ್ಲ ಅಮೂಲ್ಯ ನಿಧಿಗಳನ್ನು, ಅಪರೂಪದ ಖನಿಜಗಳನ್ನು, ಬತ್ತದ ನೀರಿನ ಚಿಲುಮೆಗಳನ್ನು ಒಡಲೊಳಗೆ ಕಂಡೂ ಕಾಣದಂತೆ ತುಂಬಿಕೊಂಡಿದೆ ಎಂದು ಯೋಚಿಸುವಾಗ ಅಚ್ಚರಿಯ ಗಂಟು ಬರಿದಾಗದೆ ಉಳಿಯುತ್ತದೆ! ಅಜ್ಜಿ ಓಡಾಡಿಕೊಂಡಿಕೊಂಡಿರುವ ಮನೆಯಲ್ಲಿರುವ ಪ್ರೀತಿಯ ಗಾಳಿ, ಆ ಗಾಳಿ ಬೀಸಿ ತರುವ ಆನಂದದ ದಾಳಿ, ಆ ದಾಳಿಯಲ್ಲಿರುವ ನಿಸ್ವಾರ್ಥದ ಸ್ಪರ್ಶ, ಬೇರೆಲ್ಲೂ ಇರುವುದು ಸಾಧ್ಯವೇ ಇಲ್ಲ!

ಅಜ್ಜಿಯಿರುವ ಮನೆಯಲ್ಲಿ ಪಿರಿಪಿರಿ ಇರುತ್ತದೆ. ಆದರೆ ಅದರ ಜೊತೆ ಜೊತೆಯಲ್ಲೇ ಪರಿಪರಿಯ ಅನುಭವ ವೃತ್ತಾಂತಗಳೂ ಇರುತ್ತವೆ. ಅಲ್ಲಿ ಶೀತ, ಕೆಮ್ಮಿಗೆ ಕಷಾಯ ತಯಾರಾಗುವ ಕ್ರಿಯೆ ಜೀವ ಪಡೆಯುತ್ತದೆ! ಮಗು ಅಳು ನಿಲ್ಲಿಸದಿದ್ದರೆ ದೃಷ್ಟಿ ತೆಗೆಯುವ ಕಾರ್ಯ ತನ್ನಿಂದ ತಾನೇ ನೆರವೇರುತ್ತದೆ!

ಅಜ್ಜಿಯಿರುವ ಮನೆಯಲ್ಲಿ ಮಡಿ ಇರುತ್ತದೆ. ಅದರ ಜೊತೆ ಜೊತೆ ಜೊತೆಯಲ್ಲಿ ಗಡಿಬಿಡಿಯಿಲ್ಲದೆ ಅಡುಗೆ ತಯಾರಾಗುತ್ತಲೇ ಇರುವ ಅನ್ನದಾತನ ಪವಿತ್ರ ಕೆಲಸ ನಡೆಯುತ್ತಲೇ ಇರುತ್ತದೆ. ಅಜ್ಜಿ ಮಾಡುವ ಗೊಜ್ಜಿಗೂ ಒಂದು

ಅಪೂರ್ವ ರುಚಿಯಿದೆ. ಎಷ್ಟೋ ಸಲ ಅದು ಯಾವುದರಿಂದ ಮಾಡಿದ್ದೆಂದು ತಿಳಿಯದಿದ್ದರೂ ಮೂರು ಮೂರು ಸಲ ಹಾಕಿಸಿಕೊಂಡು ತಿನ್ನುವುದೂ ಇದೆ. ಮಾಡಲು ಏನೂ ತರಕಾರಿಯಿಲ್ಲದಾಗ ಅನ್ನ ಬಸಿದ ತೆಳಿಗೆ ಒಂದು ಒಗ್ಗರಣೆ ಕೊಟ್ಟರೂ ಸಾಕು. ಬಾಯಿಯಲ್ಲಿ ನೀರು ಬರಿಸುವ ಸಾರು ತಯಾರಾಗುತ್ತದೆ. ಹೆಚ್ಚು ತರಕಾರಿಗಳಿದ್ದರೆ ಅವಿಲ್, ಒಂದೇ ಇದ್ದರೆ ಪಲ್ಯ, ಏನೂ ಇಲ್ಲದಿದ್ದರೆ ಮೆಂತೆ ತಂಬುಳಿ ಹೀಗೆ ಅಜ್ಜಿಯ ಅಡುಗೆ ಮನೆಯಲ್ಲಿ ಏನಾದರೂ ರಸೋತ್ಪಾದನೆ ನಡೆಯುತ್ತಲೇ ಇರುತ್ತದೆ.

ಅಜ್ಜಿಯಿರುವ ಮನೆಯಲ್ಲಿ ಒಂದಿಷ್ಟು ಹಸ್ತಕ್ಷೇಪವಿರುತ್ತದೆ. ಆದರೆ ಅದು ಮನೆಯ ಒಟ್ಟು ಹಿತಕ್ಕಾಗಿ ಮಾಡುವ ಹಸ್ತಕ್ಷೇಪ. ಅದು ಅನುಭವದ ಪಾಠ ಮುಂದಿಡುವ ನಿಯಂತ್ರಣ! ಅದನ್ನು ಮೀರುವ ಧೈರ್ಯ ಸಾಮಾನ್ಯವಾಗಿ ಯಾರಿಗೂ ಇಲ್ಲ. ಹಾಗೊಂದು ವೇಳೆ ಮೀರಿದರೂ ಅಜ್ಜಿ ಏನೂ ಹೇಳುವುದಿಲ್ಲ. ನನ್ನ ಮಾತು ಯಾರು ಕೇಳುತ್ತಾರೆ ಎನ್ನುವ ಸ್ವಗತ ಅಡುಗೆ ಮನೆಯಿಂದ ಪಡಸಾಲೆಗೆ. ಅಲ್ಲಿಂದ ಅಂಗಳಕ್ಕೆ, ಅಲ್ಲಿಂದ ಕೊಟ್ಟಿಗೆಗೆ, ಅಲ್ಲಿಂದ ಹಿತ್ತಲಿಗೆ ಹೋಗಿ ಮತ್ತೆ ಮನೆಯೊಳಗೇ ವಾಪಾಸು ಬಂದೀತು! ಕೆಲಸದ ಹೆಂಗಸಿನೆದುರು ಸ್ವಗತ ಸ್ವಲ್ಪ ಗಟ್ಟಿಯಾದೀತು. ಮನೆಯ ಗಂಡಸರು ಬಂದರೆ ಧ್ವನಿ ತಗ್ಗೀತು. ಆದರೆ ಒಂದು ದಿನದಲ್ಲಿ ಎಲ್ಲವೂ ಸರಿಯಾಗಿ ಬಿಡುತ್ತದೆ. ಬೆಳಗ್ಗೆ ನಾಲ್ಕು ಗಂಟೆಗೇ ಎದ್ದು ಬಚ್ಚಲು ಮನೆಗೆ ಹೋಗಿ ಉರಿ ಹಾಕುವಾಗ ಆ ದಿನ ಮಾತ್ರ ಮುಂದಿರುತ್ತದೆಯೇ ಹೊರತು ಹಿಂದೆ ಆದದ್ದು ಉಳಿದಿರುವುದಿಲ್ಲ.

ಅಜ್ಜಿಯಿರುವ ಮನೆಯಲ್ಲಿ ಕಾಲ ತಣ್ಣಗಾಗುತ್ತದೆ! ಅದು ಪೇಟೆಯ ಅಣುಕುಟುಂಬದಂತೆ ಬಿಸಿಯಾಗಿ ವೇಗಪಡೆದು ಓಡುವುದಿಲ್ಲ. ಅಜ್ಜಿ, ಬಲಗೈಯನ್ನು ಕಾಲಗಂಟಿನ ಮೇಲಿಟ್ಟು, ಎಡಗೈಯನ್ನು ಸೊಂಟದ ಮೇಲಿಟ್ಟು ಬೆನ್ನು ಬಾಗಿಸಿ ನಡೆಯುವಾಗ 'ಕಾಲ'ಅವಸರ ಮಾಡುವುದೆ ಇಲ್ಲ. ಆದುದರಿಂದಲೇ ಅಜ್ಜಿಗೆ ಪ್ರತಿಯೊಂದಕ್ಕೂ ಸಮಯ ಸಿಕ್ಕಿಯೇ ಸಿಗುತ್ತದೆ. ಮಧ್ಯಾಹ್ನದ ಹೊತ್ತು ದೇವರ ಕೋಣೆಯ ತಂಪಿನಲ್ಲಿ ಸ್ವಲ್ಪ ಹೊತ್ತು ಒರಗಲು, ಸಂಜೆ ಹತ್ತಿಯ ಬತ್ತಿ ಮಾಡಲು, ಮುಸ್ಸಂಜೆ ಹೊತ್ತು ಹರಟಲು, ರಾತ್ರೆ ಚಿಕ್ಕ ಮಕ್ಕಳಿದ್ದರೆ ಕತೆ ಹೇಳಲು, ನೆಂಟರು ಬಂದರೆ ಬಾಳೆ ಎಲೆ ಬಾಡಿಸಿ ತೊಟ್ಟೆ ಮಾಡಿ ಕಡುಬು ಮಾಡಲು, ವಾರಕೊಮ್ಮೆ ದೇವಸ್ಥಾನಕ್ಕೆ ಮತ್ತು ಸಂತೆಗೆ ಹೋಗಲು, ಬಾಣಂತನ ಮಾಡಲು ಮೊಮ್ಮಗನ ಮನೆಗೆ ಹೋಗಲು, ಎಲ್ಲದಕ್ಕೂ ಸಮಯ ಸಿಗುತ್ತದೆಯೆಂದರೆ ವಿಸ್ಮಯವಾಗುತ್ತದೆ.



ಅಜ್ಜಿಯಿರುವ ಮನೆಗೆ ಅಲರಾಂ ಬೇಡ. ನಾಲ್ಕು ಗಂಟೆಗೆ ಎಬ್ಬಿಸಲು ಹೇಳಿ ಆರಾಮವಾಗಿ ಮಲಗಿ ಬಿಡಬಹುದು. ನಾಲ್ಕು ಗಂಟೆಯಾಯಿತೆಂದು ಅಜ್ಜಿಗೆ ಹೇಗೆ ಗೊತ್ತಾಗುತ್ತದೋ ಎನ್ನುವುದು ಒಂದು ರಹಸ್ಯ. ಆದರೆ ಸರಿಯಾದ ಹೊತ್ತಿಗೆ ನಿಮ್ಮನ್ನು ಪ್ರೀತಿಯಿಂದ ಕರೆದು ಎಚ್ಚರಿಸುವ ಕೆಲಸವನ್ನು ತಪ್ಪದೆ ಮಾಡುತ್ತಾಳೆ ಎನ್ನುವುದರಲ್ಲೂ ಯಾವ ಸಂಶಯವೂ ಇಲ್ಲ.

ಅಜ್ಜಿ ಬದುಕಿನ ನಿಷ್ಠೆಯನ್ನು ಪ್ರತಿನಿಧಿಸುತ್ತಾಳೆ ಎಂದರೆ ಏನೂ ಹೇಳಿದಂತಾಗುವುದಿಲ್ಲ. ಸ್ವಾರ್ಥ ಬೆಟ್ಟವನ್ನು ಮರಳಿನ ಕಣಕ್ಕೆ ಕಳಿಸಿ, ತನ್ನ ಸುತ್ತಲೂ ಇರುವ ತನ್ನವರಿಗಾಗಿ ನಿಷ್ಠೆಯಿಂದ ದುಡಿದು, ಬೇಕಾದುದನ್ನು ಮಾಡಿ ಹಾಕಿ, ಪ್ರೀತಿಯಿಂದ ಬಡಿಸಿ, ಕೊನೆಗೆ ಅಡುಗೆ ಮನೆಯ ತನ್ನದೇ ಮೂಲೆಯಲ್ಲಿ ಕುಳಿತು ಸದ್ದಿಲ್ಲದೆ ಉಣ್ಣುವ ಜೀವಕ್ಕೆ ಯಾವ ಉಪಮೆಯೂ ಹತ್ತಿರವಾಗುವುದೇ ಇಲ್ಲ. ಅಜ್ಜಿ ಉಂಡದ್ದನ್ನು ತಿಂದದ್ದನ್ನೂ ನೋಡದವರೂ ಇದ್ದಾರೆ! ಇದೆಂಥ ಪ್ರಶ್ನೆ. ಇದೆಂಥ ಪ್ರೀತಿ ಎನ್ನುವ ಪ್ರಶ್ನೆಗೆ ಆಧುನಿಕ ಮನಸ್ಸು ಅಷ್ಟು ಸುಲಭವಾಗಿ ಉತ್ತರ ಕಂಡುಕೊಳ್ಳಲಾಗದು.

ಇದೆಂಥ ನಿಷ್ಠೆಯೆಂದರೆ ಬೆಳಗಿನಿಂದ ರಾತ್ರೆಯವರೆಗೆ ದುಡಿದರೂ ನಗುವ ನಿಷ್ಠೆ! ಮೊಮ್ಮಕ್ಕಳಿಗೆ ಅತ್ರಾಸ ಮಾಡಿಕೊಟ್ಟರೂ ತ್ರಾಸವಾಗದ ನಿಷ್ಠೆ! ರಾಶಿ ರಾಶಿ ಉಪ್ಪಿನಕಾಯಿ ಮಾಡಿ ಹತ್ತಿರದ ನೆಂಟರೆಲ್ಲರಿಗೂ ಹಂಚಿ ಭರಣಿ ಖಾಲಿಯಾದರೂ ಮನಸ್ಸು ತುಂಬಿಕೊಳ್ಳುವ ನಿಷ್ಠೆ! ತನ್ನ ಕನಸುಗಳನ್ನೆಲ್ಲ ಎರಡೇ ಎರಡು ನೀಲಿ ಸೀರೆಯೊಳಗೆ ಮಡಚಿಟ್ಟು ಮರಿ ಮಕ್ಕಳ ಕನಸುಗಳನ್ನೇ ತನ್ನದಾಗಿಸಿಕೊಳ್ಳುವ ನಿಷ್ಠೆ!

ಪ್ರತಿಯೊಬ್ಬ ತಾಯಿಯ ಒಳಗೂ ಅಜ್ಜಿಯೊಬ್ಬಳೂ ಇದ್ದೇ ಇರುತ್ತಾಳೆ. ಆದರೂ ಈ ಜೀವನ ನಿಷ್ಠೆ. ಇತರರಿಗಾಗಿಯೇ ಬದುಕು ಎನ್ನುವ ಸರಳ ಜೀವನ ತತ್ವ ಮೈಗೂಡುವುದು ಅಜ್ಜಿಯಲ್ಲಿ ಮಾತ್ರ.

ಮನೆಯ ಒಂದು ಪವಿತ್ರ ಮೂಲೆ ಈಗ ಖಾಲಿಯಾದಂತೆ ಅನಿಸುತ್ತದೆ. ಆ ನೀಲಿ ಸೀರೆಯ ಜೀವ ನಗರದ ಜೀವನದ ಸ್ವಾರ್ಥದಲ್ಲಿ ಮರೆಯಾದಂತೆ ಭಾಸವಾಗುತ್ತಿದೆ. ಮನೆಯಲ್ಲಿರುವ ಪುಟ್ಟ ಮಗುವೊಂದು 'ಅಜ್ಜಿಯೆಂದರೆ ಯಾರು?' ಎಂದು ಕೇಳುವಷ್ಟು ನಿರ್ವಾತ ಹುಟ್ಟಿಕೊಂಡಿದೆ. ಆ ಮಟ್ಟಿಗೆ ಹಿಂದಿನ ಬದುಕೇ ವಾಸಿ. ಅಲ್ಲಿ ಅಜ್ಜಿ ಕತೆಯ ಗಮ್ಮತ್ತು, ಅಜ್ಜಿ ಪ್ರೀತಿಯ ಸಂಪತ್ತು. ಅಜ್ಜಿಯ ಅಡುಗೆ ರುಚಿ ಸಾಕಷ್ಟು ಇತ್ತು. ಇವೆಲ್ಲಕ್ಕಿಂತ ಹೆಚ್ಚಿಗೆ, ಆಗ ರಜೆಗೆ ಹೋಗಲು ಅಜ್ಜಿ ಮನೆಯಿತ್ತು! ಅಲ್ಲಿದೆ ನಮ್ಮ ಮನೆ, ಅಜ್ಜಿಯಿಲ್ಲದೆ ಸುಮ್ಮನೆ!

ಅಜ್ಜಿಯಿದ್ದರೆ ಸಿಗುವ ಅದ್ಭುತ ಪ್ರೀತಿಯ, ವಿಶ್ವಾಸದ ಅರಿವಾಗುವುದು ಅಜ್ಜಿಯಿಲ್ಲದಾಗಲೆ! ಇದು ಆಧುನಿಕ ಪ್ರಜ್ಞೆಯ ದುರಂತ! ಇಲ್ಲಿ 'ಇರುವಾಗ' ಏನೂ ಅನಿಸುವುದೇ ಇಲ್ಲ ಮತ್ತು 'ಇರದಾಗ' ಏನೇನೋ ಅನಿಸತೊಡಗುತ್ತದೆ. ಅಜ್ಜಿ ಮನೆಯೆನ್ನುವ ಸುಂದರ ಕಲ್ಪನೆಯನ್ನೇ ಕಳೆದುಕೊಂಡಿರುವ ಇಂದಿನ ಮಕ್ಕಳು ಅತಿ ಮಧುರವಾದ ಒಂದು ಅನುಭವವನ್ನೇ ಕಳೆದುಕೊಂಡಿದ್ದಾರೆ. ಇದು ಅಂತಿಂಥ ಅನುಭವವಲ್ಲ. ಕಾಸು ಕೊಟ್ಟುಕೊಳ್ಳುವ ಅನುಭವವೂ ಅಲ್ಲ!

ಜಾತ್ರೆಗೆಂದು ಊರಿಗೆ ಹೋದ ಮಕ್ಕಳಿಗೆ ಅಜ್ಜಿಯೊಬ್ಬಳು ಒಂದು ರೂಪಾಯಿಯ ಎರಡೆರಡು ನಾಣ್ಯಗಳನ್ನು ಕೊಡುವಾಗ ಅಲ್ಲಿರುವುದು ಹಣವಲ್ಲ. ಪ್ರೀತಿಯ ಕಣ ಮಾತ್ರ! ಆ ನಾಣ್ಯಗಳನ್ನು ಆಕೆ ಅದೆಷ್ಟೋ ದಿನಗಳಿಂದ ಮೊಮ್ಮಕ್ಕಳಿಗೆ ಕೊಡಲೆಂದೇ ಜತನದಿಂದ ಇಟ್ಟುಕೊಂಡಿರುತ್ತಾಳೆ ಎನ್ನುವ ಸತ್ಯ ಚಿಕ್ಕವರಿಗೆ ಗೊತ್ತಾಗಲು ತುಂಬಾ ಕಾಲ ಕಾಯಬೇಕಾಗುತ್ತದೆ!

ರಮೇಶ ಕೆದಿಲಾಯ

## ಚಟುವಟಿಕೆಗಳು

### ❑ ಆಯ್ದು ಬರೆಯಿರಿ

- ಈ ಪಾಠಭಾಗವನ್ನು ಓದಿದಾಗ ನಿಮ್ಮ ಅಜ್ಜಿಯ ಸ್ವಭಾವಕ್ಕೆ ಹೊಂದಿಕೆಯಾಗುವ ಅಂಶಗಳೂ ಇದರಲ್ಲಿವೆ ಎಂದು ಅನ್ನಿಸಿತಲ್ಲವೇ? ಅಂತಹ ಭಾಗವನ್ನು ಆಯ್ದು ಬರೆಯಿರಿ.

### ❑ ಪ್ರಶ್ನೆಗಳಿಗೆ ಉತ್ತರಿಸಿರಿ

- ಅಜ್ಜಿ ಓಡಾಡಿಕೊಂಡಿರುವ ಮನೆಯ ವಿಶೇಷತೆಯೇನು?
- ಅಜ್ಜಿಯಿರುವ ಅಡುಗೆ ಮನೆಯ ವೈಶಿಷ್ಟ್ಯವೇನು?
- 'ಅಜ್ಜಿಗೆ ಎಲ್ಲದಕ್ಕೂ ಪುರುಸೊತ್ತಿರುತ್ತದೆ. ಅಜ್ಜಿಯಿರುವ ಮನೆಯಲ್ಲಿ ಕಾಲ ತಣ್ಣಗಾಗುತ್ತದೆ'! ಎಂಬುದನ್ನು ಲೇಖಕರು ಹೇಗೆ ನಿರೂಪಿಸುತ್ತಾರೆ?
- ಆಧುನಿಕ ಜೀವನ ಶೈಲಿಯ ಅಣುಕುಟುಂಬಗಳಲ್ಲಿ ಬಾಳುತ್ತಿರುವ ನಾವು 'ಅಜ್ಜಿಯಿಲ್ಲದ ಮನೆಯಲ್ಲಿ' ಕಳೆದುಕೊಳ್ಳುತ್ತಿರುವುದೇನು?

### ❑ ವಾಕ್ಯ ರಚಿಸಿರಿ

- ಅಡಿಗೆರೆ ಎಳೆದ ಪದದ ಅರ್ಥವನ್ನು ತಿಳಿದುಕೊಂಡು ಸ್ವಂತ ವಾಕ್ಯಗಳಲ್ಲಿ ಬಳಸಿರಿ
- ಅಜ್ಜಿಯಿರುವ ಮನೆಯಲ್ಲಿ ಒಂದಿಷ್ಟು <u>ಹಸ್ತಕ್ಷೇಪ</u>ವಿರುತ್ತದೆ.
- ನಾವು ಇತರರ ವಿಚಾರದಲ್ಲಿ <u>ಹಸ್ತಕ್ಷೇಪ</u> ಮಾಡುವುದು ಸರಿಯಲ್ಲ.

### ❑ ಕಿರುಲೇಖನ ತಯಾರಿಸಿರಿ

- 'ಇತರರಿಗಾಗಿಯೇ ಬದುಕು ಎನ್ನುವ ಸರಳ ಜೀವನ ತತ್ತ್ವ ಮೈಗೂಡಿಸುವುದು ಅಜ್ಜಿಯಲ್ಲಿ ಮಾತ್ರ'–ಲೇಖಕರ ಈ ಅಭಿಪ್ರಾಯವನ್ನು ಒಪ್ಪುವಿರಾ? ಪಾಠಭಾಗ ಹಾಗೂ ನಿಮ್ಮ ಅನುಭವಗಳ ಆಧಾರದಲ್ಲಿ ಕಿರುಲೇಖನವನ್ನು ತಯಾರಿಸಿರಿ.

### ❑ ಸಂಚಿಕೆ ತಯಾರಿಸಿರಿ

- ನಿಮ್ಮ ಮನೆಯಲ್ಲಿ ನಿಮಗೆ ತುಂಬ ಆಪ್ತರಾದ ವ್ಯಕ್ತಿಯಾರು? (ಅಪ್ಪ, ಅಮ್ಮ, ಅಣ್ಣ, ಅತ್ತಿಗೆ, ತಮ್ಮ, ತಂಗಿ, ಅಕ್ಕ, ಭಾವ, ಅಜ್ಜ, ಅಜ್ಜಿ, ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಪ್ಪ, ದೊಡ್ಡಮ್ಮ, ಅತ್ತೆ, ಮಾವ....) ಅವರ ನಡೆ–ನುಡಿ, ನಿಮಗಿಷ್ಟವಾದ ಅವರ ಸ್ವಭಾವ, ಅವರ ಉಡುಗೆ ಮುಂತಾಗಿ ಎಲ್ಲವನ್ನೂ ಸೇರಿಸಿಕೊಂಡು ಅವರ ಕುರಿತು ಒಂದು ಲೇಖನ ಅಥವಾ ಕವಿತೆಯನ್ನು ರಚಿಸಿರಿ. ತರಗತಿಯ ಎಲ್ಲರ ಕೃತಿಗಳನ್ನೂ ಒಟ್ಟು ಸೇರಿಸಿ ಒಂದು ಸಂಚಿಕೆಯನ್ನು ತಯಾರಿಸಿರಿ. ತರಗತಿಯ ಸಾಹಿತ್ಯ ಸಭೆಯಲ್ಲಿ ಬಿಡುಗಡೆಗೊಳಿಸಿರಿ.

# ಧ್ರುವ ಕುಮಾರ

ಮಕ್ಕಳನ್ನು ನೇರವಾಗಿ ಹೀಗಳೆಯುವುದರಿಂದ ಮಕ್ಕಳ ಮನಸ್ಸು ಮುದುಡುತ್ತದೆ, ಅವರ ಉತ್ಸಾಹ ಬತ್ತಿಹೋಗುತ್ತದೆ. ಆದರೆ ಯೋಗ್ಯ ಪ್ರೋತ್ಸಾಹ, ಮಾರ್ಗದರ್ಶನಗಳಿಂದ ಮಕ್ಕಳು ಭವಿಷ್ಯದಲ್ಲಿ ಏನನ್ನಾದರೂ ಸಾಧಿಸಬಲ್ಲರು; ಧ್ರುವತಾರೆಯಾಗಬಲ್ಲರು.

ಒಂದಾನೊಂದು ಕಾಲದಲ್ಲಿ ಉತ್ತಾನಪಾದನೆಂಬ ಮಹಾರಾಜನು ರಾಜ್ಯವನ್ನು ಆಳುತ್ತಿದ್ದನು. ಈತನಿಗೆ ಸುನೀತಿ ಮತ್ತು ಸುರುಚಿ ಎಂಬ ಇಬ್ಬರು ಪತ್ನಿಯರಿದ್ದರು. ಸುರುಚಿಗೆ ಉತ್ತಮನೆಂಬ ಮಗ. ಸುನೀತಿಯ ಮಗನೇ ಧ್ರುವ. ಅರಸನಿಗೆ ಸುರುಚಿಯ ಮೇಲೆ ತುಂಬ ಅನುರಾಗವಿತ್ತು. ಹಿರಿಯ ಪತ್ನಿಯಾದ ಸುನೀತಿಯೆಂದರೆ ಅಷ್ಟಕ್ಕಷ್ಟೆ!

ಒಂದು ಸಂಜೆ ಬಿಡುವಿನ ವೇಳೆಯಲ್ಲಿ ರಾಜನು ಉತ್ತಮನನ್ನು ತೊಡೆಯ ಮೇಲೆ ಕುಳ್ಳಿರಿಸಿ ಮುದ್ದಿಸುತ್ತಿದ್ದನು. ತನ್ನ ತಮ್ಮ ಅಪ್ಪನ ತೊಡೆಯೇರಿರುವುದನ್ನು ಕಂಡು ಅಣ್ಣನಾದ ಧ್ರುವನಿಗೂ ಆಸೆಯಾಯಿತು. ಅವನು ಓಡಿ ಬಂದು ತಂದೆಯ ತೊಡೆಯೇರಲು ಹವಣಿಸಿದನು. ತಕ್ಷಣ ಸುರುಚಿ ಧಾವಿಸಿ ಬಂದು ಬಾಲಕನ ಕೈ ಹಿಡಿದೆಳೆದು ದೂರ ತಳ್ಳಿ, "ಸುನೀತಿಯ ಮಗನಾದ ನಿನಗೆ ನಿನ್ನ ತಂದೆಯ ತೊಡೆಯೇರುವ ಭಾಗ್ಯವಿಲ್ಲ. ನೀನು ತಪಸ್ಸು ಮಾಡಿದರೆ ಮಾತ್ರ ಆ ಭಾಗ್ಯವನ್ನು ಪಡೆಯಬಹುದು." ಎಂದು ಗುಡುಗಿದಳು. ಅವಳ ಮಾತಿನಲ್ಲಿ ವ್ಯಂಗ್ಯದ ಧಾಟಿಯೂ ಇತ್ತು. ಅರಸ ಏನೂ ಮಾತನಾಡದೆ ಸುಮ್ಮನಿದ್ದನು.

ಬಾಲಕ ಧ್ರುವನಿಗೆ ಅತಿಯಾದ ನೋವಾಯಿತು. ತಪಸ್ಸೆಂದರೆ ಏನೆಂದು ಅರಿಯದ ಹುಡುಗ ಗೋಳೋ ಎಂದು ಅತ್ತುಬಿಟ್ಟನು. ಅಮ್ಮನ ಬಳಿಗೆ ಹೋಗಿ ನಡೆದ ಎಲ್ಲ ಘಟನೆಗಳನ್ನು ಬಿಕ್ಕಿ ಬಿಕ್ಕಿ ಅಳುತ್ತ ಅರುಹಿದನು. ಆಕೆಯೂ ತನ್ನ ಸ್ಥಿತಿಯನ್ನು ನೆನೆದು ಮಗನನ್ನು ತಬ್ಬಿಕೊಂಡು ಗಳಗಳನೆ ಅತ್ತುಬಿಟ್ಟಳು.

ತಾಯಿಯ ದುಃಖವನ್ನು ಕಂಡು ಬಾಲಕನಿಗೆ ಸಂಕಟವಾಯಿತು. ಅವಳ ಕಣ್ಣೀರನ್ನು ಒರೆಸುತ್ತ, "ಅಮ್ಮಾ, ನಾನೂ ಉತ್ತಮನಂತೆ ತಂದೆಯ ತೊಡೆಯನ್ನೇರಿ ಕುಳಿತುಕೊಳ್ಳುತ್ತೇನೆ, ದೇವರ ಕುರಿತು ತಪಸ್ಸು ಮಾಡಲು ಕಾಡಿಗೆ ಹೋಗುತ್ತೇನೆ. ನನ್ನನ್ನು ಆಶೀರ್ವದಿಸಮ್ಮ" ಎಂದು ಹೇಳಿದನು. "ಮಗೂ, ತಪಸ್ಸೆಂದರೆ ಅಷ್ಟು ಸುಲಭವಲ್ಲ ಕಾಡೆಂದರೆ. ಕ್ರೂರಮೃಗಗಳ ಆವಾಸಸ್ಥಾನ. ಪುಟ್ಟ ಹುಡುಗನಾದ ನೀನು ಕಾಡಿನಲ್ಲಿ ತಪಸ್ಸು ಮಾಡುವುದೆಂದರೆ ಚೆಂಡಾಟವೆಂದು ಭಾವಿಸಿದೆಯಾ?"ಎಂದಳು. ಆದರೆ ಧ್ರುವನು ದೇವರನ್ನು ಕುರಿತು ತಪಸ್ಸು ಮಾಡುತ್ತೇನೆ. ನಿನ್ನ ಕಣ್ಣೀರನ್ನು ಒರೆಸುತ್ತೇನೆ ಎಂದು ಹಟ ಹಿಡಿದನು.



ಸುನೀತಿ ಎಷ್ಟು ಹೇಳಿದರೂ ಅವನು ಕೇಳಲೊಲ್ಲ. "ನಿನ್ನ ಆಶೀರ್ವಾದವೊಂದಿದ್ದರೆ ಸಾಕು. ನಾನು ದೇವರನ್ನು ಒಲಿಸಿಕೊಳ್ಳುತ್ತೇನೆ." ಎಂದು ಮತ್ತೆ ಮತ್ತೆ ಬೇಡಿಕೊಂಡನು. ಏನಾದರೂ ದೇವರನ್ನು ಒಲಿಸಿಕೊಳ್ಳುವ ಕೆಲಸವಲ್ಲವೆ? "ನನ್ನ ಮಗನನ್ನು ನೀನೇ ಕಾಯಬೇಕು ಭಗವಂತ ,... ಅವನ ಕರೆಗೆ ಓಗೊಟ್ಟು ಓಡಿ ಬಾ ದೇವಾ....." ಎಂದು ಸುನೀತಿ ಕಣ್ಣೀರು ಸುರಿಸುತ್ತ ಕಳುಹಿಸಿಕೊಟ್ಟಳು.

ಧ್ರುವನು ಅಮ್ಮನ ಪಾದಗಳಿಗೆ ನಮಿಸಿ ಕಾಡಿಗೆ ನಡೆದನು. ಹುಲಿ, ಸಿಂಹ, ಕರಡಿ ಮೊದಲಾದ ಕ್ರೂರ ಮೃಗಗಳಿರುವ ಭಯಂಕರ ಗೊಂಡಾರಣ್ಯವನ್ನು ಧೈರ್ಯದಿಂದ ಹೊಕ್ಕನು. ಏನೊಂದೂ ಅರಿಯದ ಹುಡುಗ ಗೊಂಡಾರಣ್ಯದ ನಡುವೆ ಸುಮ್ಮನೆ ನಿಂತಿದ್ದಾಗ ನಾರದ ಮಹರ್ಷಿಗಳು ಅಲ್ಲಿಗೆ ಬಂದರು. ಆಕಾಶದಿಂದ ಕೆಳಗಿಳಿಯುತ್ತಿರುವ ಮುನಿಗಳನ್ನು ನೋಡಿ ಪುಟ್ಟ ಬಾಲಕನಿಗೆ ವಿಸ್ಮಯ.

'ಮಗೂ, ನೀನು ಎಲ್ಲಿಗೆ ಹೋಗುತ್ತಿರುವೆ?' ಎಂದು ನಾರದರು ಪ್ರಶ್ನಿಸಿದರು. "ನನಗೆ ದೇವರನ್ನು ನೋಡಬೇಕು. ತಪಸ್ಸಿಗೆ ಹೋಗುತ್ತಿದ್ದೇನೆ." ಎಂದು ಬಾಲಕ ಮುಗ್ಧವಾಗಿ ನುಡಿದ. ನಾರದರು ನಕ್ಕರು. "ತಪಸ್ವಿಗಳಿಗೇ ಸಿಕ್ಕದ ದೇವರು ನಿನಗೆ ಸಿಗುತ್ತಾನೆಯೇ?'' ಎಂದರು. ಧ್ರುವ ತನ್ನ ಬಾಲಭಾಷೆಯಲ್ಲಿ, "ನಾನು ಪ್ರಯತ್ನ ಪಟ್ಟರೆ ದೇವರು ಬರಲಿಕ್ಕಿಲ್ಲವೆ? ದೇವರು ಸಿಗಬೇಕಾದರೆ ನಾನೇನು ಮಾಡಬೇಕು?" ಎಂದು ಪ್ರಶ್ನೆ ಮಾಡಿದ. ನಾರದರಿಗೆ ಹುಡುಗನ ದೃಢಮನಸ್ಸನ್ನು ನೋಡಿ ಸಂತೋಷವಾಯಿತು. ಆದರೂ ಪರೀಕ್ಷಿಸುವುಕ್ಕಾಗಿ, "ತಪಸ್ಸೆಂದರೆ ತುಂಬಾ ಕಠಿಣ. ಅನ್ನಾಹಾರಗಳನ್ನು ತ್ಯಜಿಸಬೇಕು. ದೀರ್ಘಕಾಲದವರೆಗೆ ಏಕೋಭಾವದಿಂದ ದೇವರನ್ನು ಸ್ತುತಿಸಬೇಕು. ಬಾಲಕನಾದ ನಿನ್ನಿಂದ ಅದೆಲ್ಲ ಸಾಧ್ಯವೆ?" ಎಂದು ಕೇಳಿದರು.

"ನನಗೆ ದೃಢ ಸಂಕಲ್ಪವಿರುವಾಗ ಅದು ಏಕೆ ಸಾಧ್ಯವಿಲ್ಲ ಪೂಜ್ಯರೇ?" ಧ್ರುವನ ಮರುಪ್ರಶ್ನೆ. "ಮಗೂ, ಇಲ್ಲೇ ಹತ್ತಿರದಲ್ಲಿ ಯಮುನಾ ನದಿಯಿದೆ. ಅದರ ತೀರದ ಮಧುವನವೆಂಬ ಪ್ರದೇಶ ತುಂಬ ಪ್ರಶಾಂತವಾಗಿದೆ. ನೀನು ಅಲ್ಲಿಯೇ ತಪಸ್ಸು ಮಾಡು. ನಿನ್ನ ಪ್ರೀತಿ ಮತ್ತು ಶ್ರದ್ಧೆಗೆ ದೇವರು ಒಲಿಯುತ್ತಾನೆ." ಎಂದು ನಾರದರು ಉಪದೇಶಿಸಿ ನಿರ್ಗಮಿಸಿದರು. ಮೊದಲ ಬಾರಿಗೆ ಅವನ ಪಾಲಿಗೆ ನಾರದರು ಗುರುಗಳಾಗಿ ಒದಗಿಬಂದಿದ್ದರು.

ಧ್ರುವನು ಮಧುವನಕ್ಕೆ ಹೋಗಿ ತಪಸ್ಸಿನಲ್ಲಿ ನಿರತನಾದ. ಮಗುವಿನ ಮುಗ್ಧ ಭಕ್ತಿ ದೇವರಿಗೆ ತಲುಪಿತು. ಯೋಗಿಗಳ ದೀರ್ಘಕಾಲದ ಧ್ಯಾನಕ್ಕೂ ಸುಲಭದಲ್ಲಿ ಒಲಿಯದ ಮಹಾವಿಷ್ಣುವು ಧ್ರುವನ ಕರೆಗೆ ಓಡೋಡಿ ಬಂದನು. ವರಗಳನ್ನು ಕೊಟ್ಟು ಧ್ರುವನನ್ನು ನಾಡಿಗೆ ಕಳುಹಿಸಿದನು.

ಧ್ರುವ ಮರಳಿ ಬಂದಾಗ ಎಲ್ಲರಿಗೂ ಅಚ್ಚರಿ. ಸುರುಚಿಯೇನೋ ವ್ಯಂಗ್ಯದಲ್ಲಿ ಆ ಮಾತು ಆಡಿದ್ದಳು. ಈಗ ಧ್ರುವನು ಅದನ್ನು ಸಾಧಿಸಿಯೇ ಬಂದದ್ದು ನೋಡಿ ಅವಳಿಗೆ ವಿಸ್ಮಯ. ಅವಳು ಪಶ್ಚಾತ್ತಾಪದಿಂದ ಅತ್ತಳು. ಧ್ರುವನ ಕ್ಷಮೆ ಯಾಚಿಸಿದಳು. ಧ್ರುವನು ತಂದೆಯ ತೊಡೆಯೇರಿದುದು ಮಾತ್ರವಲ್ಲ, ರಾಜ್ಯದ ಸಿಂಹಾಸನವನ್ನೇ ಏರಿದನು. ಬಹುಕಾಲ ರಾಜ್ಯವಾಳಿ ಮುಂದೆ ಆಗಸದಲ್ಲಿ ಧ್ರುವ ನಕ್ಷತ್ರವಾಗಿ ರಾರಾಜಿಸಿದನು.

## ಚಟುವಟಿಕೆಗಳು

- ಪ್ರಶ್ನೆ ತಯಾರಿಸಿರಿ
  - 'ಧ್ರುವ' ಕಥೆಯನ್ನು ಓದಿದಿರಲ್ಲವೇ? ಕಥೆಯ ಪ್ರಧಾನ ಆಶಯ ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ತಯಾರಿಸಿರಿ.
- ಸಂಭಾಷಣೆ ಬರೆಯಿರಿ
  - ಈ ಕಥೆಯಲ್ಲಿ ಬರುವ ಕಥಾ ಪಾತ್ರಗಳನ್ನು ಗುರುತಿಕೊಂಡು ಸಂಭಾಷಣೆಯನ್ನು ಬರೆಯಿರಿ.
- ಸಂದೇಶ ಬರೆಯಿರಿ
  - ಈ ಕಥೆಯು ನೀಡುವ ಸಂದೇಶವೇನು? ನಿಮ್ಮ ಮಾತುಗಳಲ್ಲಿ ಬರೆಯಿರಿ.
- ಸಮರ್ಥಿಸಿರಿ
  - ಈ ಕತೆಯಲ್ಲಿ ನೀವು ಇಷ್ಟಪಡುವ ಪಾತ್ರ ಯಾವುದು? ಯಾಕೆ? ಸಮರ್ಥಿಸಿ ಬರೆಯಿರಿ.

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಓದಿದ ಸೃಜನಾತ್ಮಕ ರಚನೆಗಳನ್ನು ವಿಭಿನ್ನ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿಸುವುದು.
- ವಿವಿಧ ಆಶಯ ಮಂಡಲಗಳಿಗೆ ಸಂಬಂಧಿಸಿದ ಚರ್ಚೆ ಸಂವಾದಗಳಲ್ಲಿ ಭಾಗವಹಿಸಿ ಆಶಯಗಳನ್ನೂ ಅಭಿಪ್ರಾಯಗಳನ್ನೂ ತರ್ಕಬದ್ಧವಾಗಿ ಮಂಡಿಸುವುದು.
- ಚರ್ಚೆ ಸಂವಾದಗಳಿಂದ ರೂಪುಗೊಂಡ ಆಶಯಗಳನ್ನು ಕ್ರೋಢೀಕರಿಸಿ; ವಾಚಿಕವಾಗಿಯೂ ಲಿಖಿತ ರೂಪದಲ್ಲಿಯೂ ಪ್ರಕಟಿಸುವುದು.
- ಪದ ಶುದ್ಧಿ, ವಾಕ್ಯ ಶುದ್ಧಿ, ಲೇಖನ ಚಿಹ್ನೆ, ಪಾರಾ ಮೊದಲಾದ ಭಾಷಾ ನಿಯಮಗಳನ್ನು ಪಾಲಿಸಿಕೊಂಡು ರಚನೆಗಳನ್ನು ಉತ್ತಮಪಡಿಸುವುದು.
- ಸ್ವಂತ ಅಭಿಪ್ರಾಯಗಳನ್ನು ಶಿಷ್ಟಭಾಷೆಯಲ್ಲಿ ಮಂಡಿಸುವುದು.
- ಮೌಲ್ಯನಿರ್ಣಯ ಸೂಚಕಗಳನ್ನು ಸ್ವಯಂ ಕಂಡುಕೊಂಡು ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವುದು.
- ಪಾಠಭಾಗಗಳಿಂದ ಆರ್ಜಿಸಿದ ಭಾಷಾಪರವೂ ಆಶಯಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ತಾವು ಓದಿದ ಬೇರೆ ಬೇರೆ ಬರಹಗಾರರ ಕೃತಿಗಳ ಸಹಾಯದಿಂದ ವಿಭಿನ್ನ ಕಾಲಘಟ್ಟದ ಬರಹಗಾರರ ಭಾಷೆ, ಸಂಸ್ಕೃತಿ ಇತ್ಯಾದಿಗಳನ್ನು ವಿಶ್ಲೇಷಣೆ ಮಾಡುವುದು.

# ಅರ್ಥಕೋಶ

### ಅ

ಅಕ್ಕರೆ – ಪ್ರೀತಿ, ಒಲವು, ಪ್ರೇಮ

ಅನುರಾಗ – ಪ್ರೇಮ, ಪ್ರೀತಿ

ಅನುವು ಮಾಡು – ಅವಕಾಶ ಕಲ್ಪಿಸಿಕೊಡು

ಅರಣ್ಯ – ಕಾಡು, ಕಾನನ

ಅಭ್ಯಾಸ – ರೂಢಿ, ಪುನರುಚ್ಚಾರಣೆ

ಅಪ್ಪಣೆ – ಅಜ್ಞೆ

ಅರಿಯು – ತಿಳಿಯು

ಅವಗಣಿಸು – ತಿರಸ್ಕರಿಸು

ಅವಧಿ – ಗಡಿ, ನಿರ್ದಿಷ್ಟ ಕಾಲ

ಅಳವಡಿಸು – ಜೋಡಿಸು, ಕಟ್ಟು, ಕೂಡಿಸು

ಅಸಹ್ಯ – ಸಹಿಸಲಾಗದ

ಅಂತರಂಗ – ಒಳಗಿನ, ಹೃದಯ

ಅಂಜು – ಹೆದರು

### ಆ

ಆಘಾತ – ಪೆಟ್ಟು, ಹೊಡೆತ

ಆಚ್ಛಾದಿತ – ಮುಚ್ಚಿದ, ಅಡಗಿಸಿದ

ಆರ್ಥಿಕ – ಹಣಕಾಸಿಗೆ ಸಂಬಂಧಿಸಿದ

ಆಜ್ಞೆ – ಅಪ್ಪಣೆ

ಆತುರ – ತಾಳ್ಮೆ ಇಲ್ಲದ, ಅವಸರ

ಆತ್ಮಸ್ಥೈರ್ಯ – ಮನಸ್ಸಿನ ಗಟ್ಟಿಗಾರಿಕೆ

ಆದ್ಯತೆ – ಮೊದಲಿನ ಸ್ಥಾನ, ಮುಖ್ಯ

ಆದರ – ಮನ್ನಣೆ, ಗೌರವ

ಆಧಾರ – ಆಶ್ರಯ, ಅವಲಂಬನೆ

ಆರ್ಭಟ – ಬೊಬ್ಬೆ, ಅಟ್ಟಹಾಸ

ಆರಾಮ – ಸುಖ

ಆವಾಸಸ್ಥಾನ – ವಾಸಸ್ಥಳ

ಆಹ್ಲಾದಕರ – ಸಂತೋಷವಾದ

### ಉ/ಊ

ಉತ್ಕರ್ಷ – ಏಳಿಗೆ, ಉನ್ನತಿ

ಉದ್ಯಮ – ಉದ್ಯೋಗ, ಶ್ರಮ

ಉದ್ಗರಿಸು – ಹೇಳು, ಹೊರಚೆಲ್ಲು

ಉನ್ನತ – ಎತ್ತರವಾದ, ಶ್ರೇಷ್ಠ

### ಋ

ಋಣಿ – ಉಪಕೃತ, ಸಾಲ ತೆಗೆದುಕೊಂಡವ

ಎದುರಾಳಿ – ವಿರೋಧಿ, ಶತ್ರು

ಏಕತೆ – ಒಗ್ಗಟ್ಟು, ಐಕ್ಯ

ಐಕ್ಯ – ಏಕತೆ

### ಒ/ಓ/ಔ

ಒಡಕು – ಮನಸ್ತಾಪ, ಒಡೆದುದು, ಬಿರುಕು

ಒಲಿಯು – ಅನುಕೂಲವಾಗಿರು, ಪ್ರೀತಿಸು

ಓರೆ – ವಾಲು, ತುಸು ವಕ್ರ

ಔತಣ – ವಿಶೇಷ ಭೋಜನ

### ಕ/ಖ

ಕಠಿಣ – ಬಿರುಸು, ಕಠೋರ

ಕಣ – ಚೂರು, ರಣರಂಗ

ಕಪಿ – ಕೋತಿ, ಮಂಗ

ಕಲಸು – ಬೆರೆಸು, ಕೂಡಿಸು

ಕಾವಳ – ಕತ್ತಲು

ಕುಟುಕು – ಗುಟುಕು, ಕುಕ್ಕು

ಕುತೂಹಲ – ಆತುರ, ವಿಸ್ಮಯ, ಸಂತೋಷ

ಕುಪ್ಪಳಿಸು – ಹಾರು, ಜಿಗಿ, ನೆಗೆ

ಕುವರಿ – ಮಗಳು

ಕೊರಗು – ಕಳವಳಗೊಳ್ಳು, ಮರುಗು

ಕಂದರ – ಗುಹೆ, ಗವಿ
ಕ್ಷಮತೆ – ಯೋಗ್ಯತೆ, ಅರ್ಹತೆ
ಕೌಶಲ್ಯ – ನಿಪುಣತೆ, ದಕ್ಷತೆ
ಖ್ಯಾತಿ – ಪ್ರಸಿದ್ಧಿ

ಗ

ಗಡುಸು – ಬಿರುಸು, ಒರಟು
ಗವಿ – ಗುಹೆ
ಗೊಂಡಾರಣ್ಯ – ದಟ್ಟವಾದ ಅರಣ್ಯ

ಚ

ಚಿಲುಮೆ – ನೀರಿನ ಬುಗ್ಗೆ

ಜ

ಜತನ – ಯತ್ನ, ಪ್ರಯತ್ನ
ಜಾಡು – ಹೆಜ್ಜೆಯ ಗುರುತು, ಸೂಚನೆ

ಟ

ಟೀಕೆ – ಅರ್ಥ, ವ್ಯಾಖ್ಯೆ

ತ

ತಟ – ದಡ, ದಂಡೆ
ತಪ್ಪಸ್ಸು – ಇಷ್ಟ ಸಿದ್ಧಿಗಾಗಿ ಪಡುವ ಕಷ್ಟ
ತರುವಾಯ – ಆಮೇಲೆ, ಅನಂತರ
ತಾಣ – ಆಶ್ರಯ ಬೀಡು
ತ್ರಾಸ – ಕಷ್ಟ
ತೆರೆ – ಅಲೆ, ಪರದೆ.
ತೊರೆ – ತ್ಯಜಿಸು, ತೋಡು
ತುಂಬುಳಿ – ತಂಪಾದ ಹುಳಿ
ತೃಪ್ತಿ – ಸಮಾಧಾನ
ತುಂತುರು – ಸಣ್ಣಹನಿ
ತಾಂತ್ರಿಕ – ತಂತ್ರಶಾಸ್ತ್ರ ಬಲ್ಲವ

ದ/ಧ

ದೀಪ್ತಿ – ಹೊಳಪು, ಕಾಂತಿ
ದುಗುಡ – ದುಃಖ, ಚಿಂತೆ, ಉಮ್ಮಳ
ದುಷ್ಟ – ಕೆಟ್ಟವ
ದೆಸೆ – ದಿಸೆ, ದಿಕ್ಕು, ಅದೃಷ್ಟ
ದೊರೆ – ಅರಸ, ರಾಜ
ಧಾಮಿಸು – ವೇಗವಾಗಿ ಓಡು
ಧಾಳಿ – ಮುತ್ತಿಗೆ, ಆಕ್ರಮಣ
ಧೀರ – ಧೈರ್ಯಶಾಲಿ, ಬಲಿಷ್ಠ
ಧುಮುಕು – ಭರದಿಂದ ನುಗ್ಗು
ದ್ವಿಮುಖ – ಎರಡು ಮುಖವುಳ್ಳ
ದೈನಂದಿನ – ನಿತ್ಯದ, ಪ್ರತಿದಿನದ
ದೃಢ – ಬಲಿಷ್ಠ, ಅಚಲ
ಧ್ಯಾನ – ಚಿಂತನೆ, ವಿಷಯದಲ್ಲಿ ತಲ್ಲೀನತೆ
ಧಕ್ಕೆ – ಹಾನಿ ಸಂಕಟ

ನ

ನಯನ – ಕಣ್ಣು
ನಾತ – ವಾಸನೆ (ಕೆಟ್ಟ)
ನಾಂದಿ – ಪ್ರಾರಂಭದ ಪ್ರಾರ್ಥನೆ, ಅಭ್ಯುದಯ
ನಿನಾದ – ಸ್ವರ, ಗುಂಜಾರವ
ನಿರಂತರ – ಭಯವಿಲ್ಲದ ಅನಿಯಂತ್ರಿತ
ನಿರ್ದಿಷ್ಟ – ತೋರಿಸಿದ, ಹೇಳಿದ ಸೂಚಿಸಿದ
ನಿರ್ವಾತ – ಗಾಳಿಯಿಲ್ಲದ ಖಾಲಿ
ನಿಶ್ಚಲ – ಸ್ಥಿರ, ಅಚಲ
ನಿಷ್ಠೆ – ತತ್ಪರತೆ, ಶ್ರದ್ಧೆ
ನಿಸ್ವಾರ್ಥ – ಸ್ವಾರ್ಥವಿಲ್ಲದ
ನೆಗೆಯು – ಹಾರು, ಜಿಗಿಯು
ನೆರಳು – ನೆಳಲು, ಛಾಯೆ
ನೋಟ – ದೃಶ್ಯ, ನೋಡುವಿಕೆ

ಪ/ಫ

ಪದಕ – ಗೌರವ ಬಿಲ್ಲೆ

ಪಯಣ – ಪ್ರಯಾಣ, ಸಂಚಾರ
ಪಡಸಾಲೆ – ದೊಡ್ಡ ಚಾವಡಿ
ಪರಿವಾರ – ಆಶ್ರಿತ ಜನ, ಕುಟುಂಬ
ಪರಿಶೀಲನೆ – ಶ್ರದ್ಧೆಯಿಂದ ನೋಡುವಿಕೆ
ಪರಂಪರೆ – ಹಿಂದಿನ ರೂಢಿ, ಅನುಕ್ರಮ
ಪರಿಶ್ರಮ – ಕೆಲಸ
ಪರಿಪೂರ್ಣ – ಚೆನ್ನಾಗಿ ತುಂಬಿದ, ಸಂತುಷ್ಟ
ಪರೀಕ್ಷೆ – ತಪಾಸಣೆ
ಪವಿತ್ರ – ಪರಿಶುದ್ಧ
ಪ್ರಕ್ಕಟಿ – ಬೆಲೆಯಿಲ್ಲದೆ, ಧರ್ಮಾರ್ಥ
ಪುನರುತ್ಥಾನ – ಪುನರುದಯ
ಪುಷ್ಪ – ಹೂವು
ಪ್ರೇಕ್ಷಕ – ನೋಡುವವ, ದರ್ಶಕ
ಪ್ರಯಾಸ – ಶ್ರಮ, ಆಯಾಸ
ಪೂರ್ವಜ – ಪುರಾತನ ಕಾಲದ, ಹಿಂದಿನ
ಪಾಶ್ಚಾತ್ಯ – ಪಶ್ಚಿಮ ದೇಶಗಳಿಗೆ ಸಂಬಂಧಿಸಿದ
ಪ್ರತೀತಿ – ಸ್ಪಷ್ಟವಾದ ತಿಳಿವಳಿಕೆ, ಪ್ರಸಿದ್ಧಿ
ಪ್ರಭಾವ – ವರ್ಚಸ್ಸು
ಪ್ರಶಸ್ತಿ – ಶಿಫಾರಸು, ಗೌರವ
ಪ್ರತಿಷ್ಠಿತ – ಸ್ಥಾಪಿತ, ಸನ್ಮಾನಿತ, ಮರ್ಯಾದಸ್ಥ
ಪ್ರಾತಃಕಾಲ – ಬೆಳಗ್ಗಿನ ಸಮಯ
ಪಥ – ಮಾರ್ಗ, ರೀತಿ

### ಬ/ಭ

ಬರ – ಕ್ಷಾಮ
ಬಿತ್ತರಿಸು – ವಿವರವಾಗಿ ಹೇಳು, ಪ್ರಸಾರ ಮಾಡು
ಬಿಲ್ಲಾಳು – ಬಿಲ್ಗಾರ, ಧನುರ್ಧಾರಿ
ಬೌದ್ಧಿಕ – ಬುದ್ಧಿಗೆ ಸಂಬಂಧಿಸಿದ
ಭವ್ಯ – ಸುಂದರ, ಯೋಗ್ಯ
ಭಾಸವಾಗು – ಮನದಲ್ಲಿ ಹೊಳೆಯು
ಭೂಸ್ಪರ್ಶ – ಭೂಮಿಯನ್ನು ಮುಟ್ಟು
ಭೂಷಣ – ಆಭರಣ, ಒಡವೆ
ಬೆರಗು – ಆಶ್ಚರ್ಯ, ಅಚ್ಚರಿ

### ಮ

ಮಗ್ಗುಲು – ಬದಿ, ಪಕ್ಕ
ಮರಳು – ಹೊಗ್ಗೆ
ಮರುಕ – ದುಃಖ
ಮನ್ನಣೆ – ಮಾನ್ಯತೆ, ಗೌರವ, ಆದರ
ಮಧುರ – ಸಿಹಿ
ಮಹತ್ವ – ಪ್ರಾಧಾನ್ಯ
ಮಾಣಿಕ್ಯ – ಕೆಂಪು ವರ್ಣದ ರತ್ನ
ಮಾರಕ – ನಾಶಕ, ಕೊಲ್ಲುವವ
ಮುನಿಯು – ಸಿಟ್ಟಾಗು
ಮುದ್ರಣ – ಮುದ್ರಿಸುವುದು, ಅಚ್ಚು ಹಾಕಿಸುವುದು
ಮೇರು – ಒಂದು ಪರ್ವತ, ಶ್ರೇಷ್ಠ
ಮೈಗೂಡು – ದೇಹತುಂಬು, ದಪ್ಪಗಾಗು
ಯಥೋಚಿತ – ಔಚಿತ್ಯವನ್ನು ಮೀರದ
ಯಾನ – ವಾಹನ, ಹೋಗುವಿಕೆ
ಯೋಗ – ಏಕಾಗ್ರತೆ

### ರ

ರಮ್ಯ – ಮನೋಹರ, ಸುಂದರ
ರಭಸ – ಆವೇಶ, ವೇಗ
ರುದ್ರ – ಭಯಂಕರ, ಬೊಬ್ಬಿಡುವ
ರೂಢಿ – ವಾಡಿಕೆ, ಬಳಕೆ

### ವ

ವಲಯ – ಆವರಣ, ಪರಿಧಿ, ಮಂಡಲ
ವಾನರ – ಕೋತಿ, ಮಂಗ
ವಾಪಾಸು – ಹಿಂದಕ್ಕೆಮರಳು, ಹಿಂದಿರುಗು
ವಿಜೇತ – ಜಯಿಸಿದ
ವಿಕಾಸ – ಅರಳುವಿಕೆ
ವಿನೋದ – ತಮಾಷೆ
ವಿಪರೀತ – ವಿಲಕ್ಷಣ
ವಿಸ್ಮಯ – ಅದ್ಭುತ
ವಿದ್ಯಮಾನ – ಸಂಗತಿ, ನಿಜವಾದ ಬೆಳವಣಿಗೆ
ವಿಹಂಗಮ – ಹಕ್ಕಿ, ಸೂರ್ಯ

ವೀಕ್ಷಣೆ – ನೋಡುವುದು
ವೃದ್ಧ – ಮುದುಕ
ವೃತ್ತಿ – ಕೆಲಸ
ವೃತ್ತಾಂತ – ಸಮಾಚಾರ
ವ್ಯಂಗ್ಯ – ಗೂಢಾರ್ಥ, ಸಾಂಕೇತಿಕ
ವೃಕ್ಷ – ಮರ, ತರು

ಶ

ಶಲಾಕೆ – ಈಟಿ, ದಂಡ
ಶಿಲೆ – ಕಲ್ಲು
ಶೀಲ – ನಡೆ, ಗುಣ
ಶ್ರೇಣಿ – ಸಾಲು
ಶ್ರೇಷ್ಠ – ಉತ್ತಮ, ಯೋಗ್ಯ
ಶ್ರಮ – ಕೆಲಸ

ಸ

ಸತಾಯಿಸು – ತೊಂದರೆಕೊಡು, ಪೀಡಿಸು
ಸಲಕರಣೆ – ಉಪಕರಣ
ಸವಾಲು – ಪ್ರಶ್ನೆ
ಸವಿಯ – ರುಚಿನೋಡು, ತಿನ್ನು
ಸಾಪ್ತಾಹಿಕ – ವಾರಕ್ಕೊಮ್ಮೆ
ಸಾಗು – ಹೋಗು, ಮುಂದುವರಿಸು
ಸಾಧನ – ಉಪಕರಣ
ಸಾಧಕ – ಸಮರ್ಥ, ಸಂಪನ್ನ
ಸಾಹಸ – ಶೌರ್ಯ, ದಿಟ್ಟತನ
ಸೀಮಿತ – ಮಿತಿಗೆ ಒಳಪಟ್ಟ
ಸುಗಂಧ – ಪರಿಮಳ
ಸುಫಲ – ಒಳ್ಳೆಯಹಣ್ಣು, ಸುಂದರ ಫಲ
ಸುಸ್ಥಿತಿ – ಒಳ್ಳೆಯಸ್ಥಿತಿ, ಅಭ್ಯುದಯ
ಸುಳಿಯು – ತಿರುಗು
ಸೂಸು – ಚಿಮ್ಮು ಎರಚು
ಸೂಕ್ಷ್ಮ – ತೀರಾಸಣ್ಣ, ಅಣು
ಸೂಕ್ತ – ಸರಿಯಾದ
ಸೇಡು – ಹಗೆತನ
ಸೊಲ್ಲು – ಮಾತು
ಸೊಕ್ಕು – ಗರ್ವ, ಮದ
ಸೊಬಗು – ಚೆಲುವು, ಸೌಂದರ್ಯ
ಸೌಜನ್ಯ – ಸಜ್ಜನಿಕೆ, ಸಜ್ಜನತೆ
ಸಂತೈಸು – ಸಮಾಧಾನ ಪಡಿಸು
ಸಂಭಾವನೆ – ಉಡುಗೊರೆ
ಸಂಕೇತ – ಗುರುತು
ಸಂಪ್ರದಾಯ – ರೂಢಿ, ಕಟ್ಟಳೆ
ಸಂಕ್ಷಿಪ್ತ – ಸಣ್ಣದಾಗಿ ಮಾಡಿದ, ಸಂಗ್ರಹಗೊಳಿಸಿದ
ಸ್ತುತಿ – ಹೊಗಳಿಕೆ, ಸ್ತೋತ್ರ
ಸ್ಪರ್ಶ – ಮುಟ್ಟುವಿಕೆ
ಸ್ತಂಭ – ಕಂಬ

ಹ

ಹಗುರ – ಭಾರ ಕಡಿಮೆ
ಹರಕೆ – ಹೇಳಿ ಕೊಂಡಮಾತು, ಶಪಥ
ಹರುಷ – ಸಂತೋಷ
ಹಸ್ತಕ್ಷೇಪ – ಮಧ್ಯಪ್ರವೇಶ
ಹರ್ಷೋದ್ಗಾರ – ಸಂತೋಷದ ಕೂಗು
ಹುರುಪು – ಹುಮ್ಮಸ್ಸು, ಉತ್ಸಾಹ
ಹವಣಿಸು – ಆತುರಪಡು, ಸಿದ್ಧನಾಗು
ಹುಸಿ – ಸುಳ್ಳು, ಅಸತ್ಯ
ಹೊಂದಾಣಿಕೆ – ಕೂಡಿಸಿಕೊಳ್ಳುವುದು.

***

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ, ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಚರಿಸುತ್ತಿದೆ. ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳ ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

*ಸಂಪರ್ಕಿಸಬೇಕಾದ ವಿಳಾಸ*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್‌ರೋಸ್ ಜಂಕ್ಷನ್, ತಿರುವನಂತಪುರ – 34

ಫೋನ್ : 0471–2326603

E-mail : childrightscpcr@kerala.gov.in, rtecpcr@kerala.gov.in
website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**
**ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000**

online R.T.E Monitoring: www.nireekshana.org.in

**State Council of Educational Research & Training (SCERT)**
Vidyabhavan, Poojappura, Thiruvananthapuram,
Kerala - 695 012 Website www.scert.kerala.gov.in
e-mail scertkerala@gmail.com

KBPS
Printed by the Chairman & Managing Director
**Kerala Books and Publications Society**
(An Undertaking of the Government of Kerala)
Kakkanad, Kochi-682 030